ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 26 ಭಾನುವಾರ 2022

ಸಂಪುಟ: 43 | ಸಂಚಿಕೆ: 71 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಯಾರಿಗೂ ಬರಲ್ಲವಂತೆ ಬಹುಮತ

- ಬಿಜೆಪಿ ವರಿಷ್ಠರು ನಡೆಸಿದ ಸಮೀಕ್ಷೆಯಲ್ಲಿ ಬಯಲು
- ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮುವ ಸಾಧ್ಯತೆ
- ವೇಗ ಹೆಚ್ಚಿಸಿಕೊಳ್ಳಲು ರಾಜ್ಯ ನಾಯಕರಿಗೆ ಸಂದೇಶ

ಬೆಂಗಳೂರು, ಜೂ.25(ಕೆಎಂಶಿ)–ಕರ್ನಾಟಕದಲ್ಲಿ ಪಕ್ಷಕ್ಕೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟವಾದ ಬಹುಮತ ದೊರೆಯುವುದಿಲ್ಲ ಎಂಬುದು ಬಿಜೆಪಿ ವರಿಷ್ಠರು ನಡೆಸಿರುವ ಮೂರನೇ ಸಮೀಕ್ಷೆಯಲ್ಲಿ ಖಚಿತವಾಗಿದೆ.

ಅಷ್ಟೇ ಅಲ್ಲ. ಪ್ರಸಕ್ತ ಸನ್ನಿವೇಶದಲ್ಲಿ ಬಿಜೆಪಿಗೆ ಮೊದಲ ಸ್ಥಾನ ನಂತರದ ಸ್ಥಾನ ಕಾಂಗ್ರೆಸ್‌ಗೆ, ಜೆಡಿಎಸ್ 3ನೇ ಸ್ಥಾನದಲ್ಲಿ ಉಳಿದಿದೆ. ಬಿಜೆಪಿ ಮತ್ತೆ ಅಧಿಕಾರ ಹಿಡಿಯಲು ಸದ್ಯಕ್ಕೆ 35 ರಿಂದ 40 ಸ್ಥಾನಗಳ ಕೊರತೆ ಇದೆ. ಈ ಕೊರತೆ ನಿವಾರಿಸಲು ಕಠಿಣ ತೀರ್ಮಾನಗಳ ಅಗತ್ಯವಿದೆ. ಜತೆಯಲ್ಲೇ ಕಾಂಗ್ರೆಸ್‌ನ ವೇಗವನ್ನು ಹಿಮ್ಮೆಟ್ಟಿ ಪಕ್ಷ ಸಂಘಟಿಸಬೇಕಾದ ಅನಿವಾರ್ಯತೆ ಇದೆ. ವೀರಶೈವ ಸಮುದಾಯದ ಭಾಗವಾದ ಪಂಚಮಸಾಲಿ ಮತ್ತು ವಾಲ್ಮೀಕಿ ಸಮುದಾಯವನ್ನು ತುಂಬಾ ವಿಶ್ವಾಸಕ್ಕೆ ತೆಗೆದುಕೊಳ್ಳುವ ಅಗತ್ಯವಿದೆ. ಮಲೆನಾಡು, ಕರಾವಳಿಯಲ್ಲಿ ಪಕ್ಷ ಕಳೆದ ಬಾರಿಯಷ್ಟೇ ಪ್ರಬಲವಾಗಿದೆ. ಆದರೆ, ಮುಂಬೈ ಕರ್ನಾಟಕದ ಭಾಗದಲ್ಲಿ ಪಕ್ಷಕ್ಕೆ ಹಿನ್ನಡೆಯಾಗುವ ಸಾಧ್ಯತೆ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ಕಳೆದ ಬಾರಿ ಆದ ಹಿನ್ನಡೆ ತಪ್ಪಿಸಿಕೊಳ್ಳಲು ಈ ಬಾರಿ ಕಠಿಣ ಶ್ರಮದ ಅಗತ್ಯವಿದೆ. ನಗರ ಪ್ರದೇಶಗಳಲ್ಲಿ ಪಕ್ಷದ ಸ್ಥಿತಿ ಉತ್ತಮವಾಗಿದೆ. ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಗಳಿಸಲು ಕಾಂಗ್ರೆಸ್, ಜೆಡಿಎಸ್ ನಡುವೆ ಪಕ್ಷ ಭಾರೀ ಪೈಪೋಟಿ ಎದುರಿಸಬೇಕು.



ಅಷ್ಟೇ ಅಲ್ಲ. ಹಾಲಿ ಬಿಜೆಪಿಯ 119 ಕ್ಷೇತ್ರಗಳ ಬಗ್ಗೆಯೂ ವರದಿ ಸಂಗ್ರಹಿಸಲಾಗಿದೆ. ಇದರಿಂದ ದೆಹಲಿ ವರಿಷ್ಠರು, ರಾಜ್ಯದ ನಾಯಕರಿಗೆ ಇರಿಸುಮುರಿಸು ಉಂಟಾಗಿದೆ. ಬಿಜೆಪಿ ಈತನಕ ಸ್ಪಷ್ಟವಾದ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಿಲ್ಲ. ಇಡೀ ರಾಜ್ಯದಲ್ಲಿ ಪಕ್ಷದ ಪರ ಅಲೆ ಇದ್ದಾಗಲೇ 110 ಸ್ಥಾನ ಮಾತ್ರ ಗಳಿಸಲಷ್ಟೇ ಸಾಧ್ಯವಾಗಿತ್ತು. ಆದರೂ ಕಳೆದ ವಿಧಾನಸಭೆ ಚುನಾವಣೆಯಲ್ಲಿ 104ರ ಗಡಿ ದಾಟಿರಲಿಲ್ಲ. ಮತ್ತೆ ಯಡಿಯೂರಪ್ಪ ಅವರನ್ನು ಸಿಎಂ ಮಾಡಬೇಕೆಂಬ ಅಲೆಯ ಸಹಕಾರವೂ ಇತ್ತು. ಅಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಮ್ಯಾಜಿಕ್ ಸಂಖ್ಯೆ ಮುಟ್ಟಲಾಗಲಿಲ್ಲ. ಈಗಿನ ಪರಿಸ್ಥಿತಿ ಬದಲಾಗಿದೆ ಯಡಿಯೂರಪ್ಪ ಅವರಿಗೆ ಮತ್ತೆ ಅಧಿಕಾರ ಇಲ್ಲ ಎಂಬುದು ಸ್ಪಷ್ಟ. ಯಡಿಯೂರಪ್ಪ ಇಲ್ಲದ ಬಿಜೆಪಿ ಕೇವಲ 40 ಸ್ಥಾನಕ್ಕೆ ಕುಸಿದು, ಜೆಡಿಎಸ್‌ಗಿಂತ ಸರಾಸರಿ ಮತಗಳಲ್ಲಿ ಕಡಿಮೆ ಗಳಿಸಿತ್ತು ಇಂತಹ ಪರಿಸ್ಥಿತಿಯ ನಡುವೆಯೂ ಪಕ್ಷಕ್ಕೆ ಇಷ್ಟು ಸ್ಥಾನ ಮಾತ್ರ ಲಭ್ಯವಾಗುತ್ತದೆ. ಮ್ಯಾಜಿಕ್ ಸಂಖ್ಯೆಯ ಗುರಿ ತಲುಪಲು ಏನೆಲ್ಲ ಅವಶ್ಯಕತೆ ಇದೆ ಎಂಬುದರ ಬಗ್ಗೆ ಬಿಜೆಪಿ ನಾಯಕರು ಎಚ್ಚರಿಕೆ ಸಂದೇಶ ನೀಡಿದ್ದಾರೆ.

ವೈದ್ಯ ದಂಪತಿ ಪುತ್ರನ ಅಪಹರಣ ಪ್ರಕರಣ

ಬಾಲಕನ ತಾತನ ಆರೈಕೆ ಮಾಡುತ್ತಿದ್ದವನೇ ಸೂತ್ರಧಾರ: ಐವರು ಆರೋಪಿಗಳ ಬಂಧನ

- ಬಾಲಕ ಬಿಡುಗಡೆಯಾದ 12 ಗಂಟೆಯಲ್ಲಿ ಆರೋಪಿಗಳು ಅಂದರ್
- ಹಣಕ್ಕಾಗಿ 22ರಿಂದ 25 ವರ್ಷದ ಯುವಕರ ಕಿಡ್ನಾಪ್ ಸ್ಕೆಚ್

ಮೈಸೂರು, ಜೂ.25(ಎಂಕೆ)– ಮೈಸೂರಿನಲ್ಲಿ ಬಾಲಕನ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದ್ದು, ಅಪಹರಣಕ್ಕೆ ಬಳಸಿದ 2 ಕಾರು, 5 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದರು.

ಶನಿವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕುವೆಂಪುನಗರ ಪೊಲೀಸ್ ಠಾಣಾ ವ್ಯಾಪ್ತಿಯ ಶ್ರೀರಾಂಪುರ 2ನೇ ಹಂತದ ಬೆಮೆಲ್ ಬಡಾವಣೆಯಲ್ಲಿನ ವೈದ್ಯ ದಂಪತಿಯ 12 ವರ್ಷದ ಪುತ್ರನನ್ನು ಜೂ.23ರ ಸಂಜೆ 7 ಗಂಟೆ ಸುಮಾರಿಗೆ ಅಪಹರಿಸಲಾಗಿತ್ತು. ಈ ಪ್ರಕರಣ ನಡೆದ ತಕ್ಷಣ ನಾಲ್ಕು ವಿಶೇಷ ತಂಡಗಳನ್ನು ರಚಿಸಿ, ಕಾರ್ಯಾಚರಣೆಗಿಳಿದು ಬಾಲಕನನ್ನು ರಕ್ಷಣೆ ಮಾಡಿದ ಕೆಲ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಪ್ರಕರಣದಲ್ಲಿ 22ರಿಂದ 25 ವರ್ಷ ವಯೋಮಾನದ ಐವರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಆರೋಪಿಗಳು ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದವರಾಗಿದ್ದು, ಒಬ್ಬ ಮಾತ್ರ ಬೆಂಗಳೂರು ಮೂಲದವನಾಗಿದ್ದಾನೆ. ಪ್ರಮುಖ ಆರೋಪಿ ಬಾಲಕನ ತಾತನ ಆರೈಕೆ ಮಾಡಲು ಬಂದಿದ್ದು, ಹಲವು ದಿನಗಳಿಂದ ಅಪಹರಣಕ್ಕೆ ಸ್ಕೆಚ್ ಹಾಕಿದ್ದ ಎಂದು ಆಯುಕ್ತರು ಮಾಹಿತಿ ನೀಡಿದರು. ಆರೋಪಿಗಳಲ್ಲಿ ಇಬ್ಬರು ಖಾಸಗಿ ಡೇ ಕೇರ್‌ನಲ್ಲಿ ಕೆಲಸ ಮಾಡಿಕೊಂಡಿದ್ದು, ಇನ್ನಿಬ್ಬರು ಯಾವುದೇ ಕೆಲಸ

▶ 6ನೇ ಪುಟಕ್ಕೆ



ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಶನಿವಾರ ತಮ್ಮ ಕಚೇರಿಯಲ್ಲಿ ನಡೆದ ಗೋಷ್ಠಿಯಲ್ಲಿ ಮಾತನಾಡುತ್ತಿರುವುದು. ಡಿಸಿಪಿ ಪ್ರದೀಪ್ ಗುಂಟಿ, ಎಸಿಪಿ ಶಿವಶಂಕರ್ ಚಿತ್ರದಲ್ಲಿದ್ದಾರೆ.

ಎಚ್ಚರಿಕೆ... ಎಚ್ಚರಿಕೆ...

ಖಾಸಗಿ ಆರೈಕೆ ಸಂಸ್ಥೆಗಳು ಹಾಗೂ ಸೇವಾ ಸಂಸ್ಥೆಗಳ ಮೂಲಕ ವಯೋವೃದ್ಧರನ್ನು ಆರೈಕೆ ಮಾಡುವುದಾಗಿ ಬರುವವರ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ಕೆಲಸಕ್ಕೆ ಸೇರುವವರ ಪೂರ್ವಾಪರ ತಿಳಿದು ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಅಲ್ಲದೆ ಖಾಸಗಿ ಆರೈಕೆ ಸಂಸ್ಥೆಗಳ ಪರಿಶೀಲನೆ ನಡೆಸುವಂತೆ ಪೊಲೀಸರಿಗೆ ಮಾಹಿತಿ ನೀಡಿ, ಸಹಕಾರ ಪಡೆಯಬೇಕು.

–ಡಾ.ಚಂದ್ರಗುಪ್ತ, ನಗರ ಪೊಲೀಸ್ ಆಯುಕ್ತ

ಮಹಾರಾಷ್ಟ್ರದಲ್ಲಿ ರಾಜಕೀಯ ರೋಷಾಗ್ನಿ!: ಶಿವಸೇನಾ ಕಾರ್ಯಕರ್ತರಿಂದ

ಬಂಡಾಯ ಶಾಸಕರ ಕಚೇರಿಗಳು ಧ್ವಂಸ

- ಬಿಜೆಪಿ ದಿವ್ಯ ಮೌನಕ್ಕೆ ಶರಣು
- ಶಿವಸೇನಾ ವರಸೆ ಆರಂಭ

ಮುಂಬೈ: ಮಹಾರಾಷ್ಟ್ರ ರಾಜಕೀಯ ಬಿಕ್ಕಟ್ಟು ಉಲ್ಬಣಗೊಂಡಿದ್ದು, ಮೂವರು ಬಂಡಾಯ ಶಾಸಕರ ಕಚೇರಿಗಳನ್ನು ಶಿವಸೇನಾ ಕಾರ್ಯಕರ್ತರು ಧ್ವಂಸಗೊಳಿಸಿದ್ದಾರೆ. ಬಂಡಾಯ ನಾಯಕ ಏಕನಾಥ್ ಶಿಂಧೆ 'ಶಿವಸೇನಾ ಬಾಳಾ ಸಾಹೇಬ್' ಹೆಸರಿನಲ್ಲಿ ಪ್ರತ್ಯೇಕ ಬಣ ರಚನೆಗೆ ಮುಂದಾಗಿದ್ದರೆ, ಪಕ್ಷದ ಸಂಸ್ಥಾಪಕರ ಹೆಸರನ್ನು ಯಾರೂ ಬಳಸಬಾರದು ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಖಡಕ್ಕಾಗಿ ಸೂಚಿಸಿದ್ದಾರೆ. ಬಿಜೆಪಿಯಂತೂ ರಾಜ್ಯದ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಸೊಲ್ಲೆತ್ತದೆ ದಿವ್ಯ ಮೌನದ ಮೊರೆ ಹೋಗಿದೆ.

ಶಿವಸೇನೆ ಕಾರ್ಯಕರ್ತರ ಬೆಂಬಲ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗಿದ್ದರೆ, ಪಕ್ಷದ ಶಾಸಕರ ಹೆಚ್ಚಿನ ಬಲ ಬಂಡಾಯ ನಾಯಕ ಏಕನಾಥ್ ಶಿಂಧೆ ಪಡೆದಿದ್ದಾರೆ. ಶಿಂಧೆ ನೇತೃತ್ವದ ಬಂಡಾಯ ಶಾಸಕರು ಗುವಾಹಟಿಯ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಬೀಡು ಬಿಟ್ಟಿದ್ದರೆ ಇತ್ತ ಉದ್ಧವ್ ಠಾಕ್ರೆ ಪಕ್ಷದ

▶ 6ನೇ ಪುಟಕ್ಕೆ



ಲಾರಿ–ಕಾರು ಡಿಕ್ಕಿ: ಮೂವರು ಸಾವು

ನಾಗಮಂಗಲ ಹೊರವಲಯದಲ್ಲಿ ದುರಂತ

ಮಂಡ್ಯ, ಜೂ.25(ಮೋಹನ್‌ರಾಜ್)– ಲಾರಿ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಗ್ರಾಮ ಲೆಕ್ಕಿಗ, ಗ್ರಾಮ ಸಹಾಯಕ ಸೇರಿದಂತೆ ಮೂವರು ಸ್ಥಳದಲ್ಲೇ ಸಾವನ್ನಪ್ಪಿ, ಓರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಾಗಮಂಗಲ ಪಟ್ಟಣದ ಹೊರವಲಯ ಚಾಮರಾಜನಗರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿ ಎಂ.ಹೊಸೂರು ಗೇಟ್ ಸಮೀಪದ ವಿಸ್ಡಮ್ ಕಾಲೇಜಿನ ಬಳಿ ಶನಿವಾರ ರಾತ್ರಿ 8.30ರಲ್ಲಿ ನಡೆದಿದೆ. ನಾಗಮಂಗಲ ತಾಲೂಕಿನ ಬೀರೇಶ್ವರಪುರದ ನಿವಾಸಿ ಹಾಗೂ ಪಾಂಡವಪುರ ತಾಲೂಕಿನ ಕೆನ್ನಾಳು ವೃತ್ತದ ಗ್ರಾಮಲೆಕ್ಕಿಗ

▶ 6ನೇ ಪುಟಕ್ಕೆ



ದೇವರಾಜು



ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಮಾಜಿ ಸಿಎಂ ಎಸ್.ಎಂ.ಕೃಷ್ಣ, ಇನ್‌ಫೋಸಿಸ್‌ನ ಎನ್.ಆರ್.ನಾರಾಯಣಮೂರ್ತಿ, ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಭಾಜನ



ಎಸ್.ಎಂ.ಕೃಷ್ಣ   ನಾರಾಯಣಮೂರ್ತಿ   ಪ್ರಕಾಶ್ ಪಡುಕೋಣೆ

ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು ಬೆಂಗಳೂರಿನ ಬೆಳವಣಿಗೆ ಹಾಗೂ ಕೀರ್ತಿಗೆ ತಮ್ಮದೇ ಆದ ಅನನ್ಯ ವಿಧಾನಗಳ ಮೂಲಕ ಅನುಪಮ ಕೊಡುಗೆ ನೀಡಿದ್ದಾರೆ.

–ಡಾ.ಅಶ್ವತ್ಥ್ ನಾರಾಯಣ

ಬೆಂಗಳೂರು, ಜೂ.25(ಕೆಎಂಶಿ)–ನಾಡಪ್ರಭು ಕೆಂಪೇಗೌಡರ ಗೌರವಾರ್ಥ ಈ ವರ್ಷದಿಂದ ಸರ್ಕಾರವು ಕೊಡಮಾಡುತ್ತಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಹಿರಿಯ ರಾಜಕಾರಣಿ ಎಸ್.ಎಂ.ಕೃಷ್ಣ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಮತ್ತು ಖ್ಯಾತ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಜೂನ್ 27ರಂದು ವಿಧಾನಸೌಧದಲ್ಲಿ ನಡೆಯಲಿರುವ ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮದಲ್ಲಿ ಮೂವರಿಗೂ ತಲಾ 5 ಲಕ್ಷ ರೂಪಾಯಿ ನಗದು ಸಹಿತ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೆರವೇರಿಸಿಕೊಡಲಿದ್ದಾರೆ ಎಂದು ಹೇಳಿದ್ದಾರೆ. ಮೂವರು ಪುರಸ್ಕೃತರ ಪೈಕಿ ಹಿರಿಯರಾದ ಕೃಷ್ಣ ಅವರನ್ನು ಶನಿವಾರ ಅವರ ಮನೆಯಲ್ಲಿ ಭೇಟಿಯಾಗಿ, ಕೆಂಪೇಗೌಡ ಜಯಂತಿಗೆ ಆಗಮಿಸಿ, ಪ್ರಶಸ್ತಿ

▶ 6ನೇ ಪುಟಕ್ಕೆ

ಕೊಡಗಲ್ಲಿ ಮತ್ತೆ ಭೂ ಕಂಪನ

- ಕೆಲವೆಡೆ ಗೋಡೆ ಬಿರುಕು, ಪಾತ್ರೆ, ಕಿಟಕಿಗಳ ಸದ್ದು
- ಗ್ರಾಮಸ್ಥರಲ್ಲಿ ಆತಂಕ



ಗೋಡೆ ಬಿರುಕು ಬಿಟ್ಟಿರುವುದು.

ಕಂಪನ ದೃಢಪಡಿಸಿದ ಇಲಾಖೆ

ಕೊಡಗು ಹಾಗೂ ದಕ್ಷಿಣಕನ್ನಡ ಜಿಲ್ಲೆಗಳ ಗಡಿ ಪ್ರದೇಶದಲ್ಲಿ ಶನಿವಾರ ಬೆಳಗ್ಗೆ ಸುಮಾರು 9ರಿಂದ 9.10ರ ವೇಳೆಯಲ್ಲಿ ಭೂಮಿ ಕಂಪಿಸಿರುವ ಬಗ್ಗೆ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಪರಿಶೀಲನೆ ದೃಢಪಡಿಸಿದೆ. ಮಾಹಿತಿ ಪ್ರಕಾರ, ಮಡಿಕೇರಿ ತಾಲೂಕಿನ ಕರಿಕೆ ಗ್ರಾಮದಿಂದ 4.7 ಕಿ.ಮೀ ವಾಯುವ್ಯ ದಿಕ್ಕಿನಲ್ಲಿ ಭೂಮಿಯ 10 ಕಿ.ಮೀ. ಆಳದಲ್ಲಿ ರಿಕ್ಟರ್ ಮಾಪಕ 2.3ರಷ್ಟು ಭೂಕಂಪನವಾಗಿದೆ. ಅಲ್ಲದೆ, ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾಗಿರುವ ರಾಷ್ಟ್ರೀಯ ಭೂಕಂಪನ ಅಧ್ಯಯನ ಕೇಂದ್ರದ ಪ್ರಕಾರ 'ಕೊಡಗು ಜಿಲ್ಲೆಗೆ ಹೊಂದಿಕೊಂಡ ಸುಳ್ಯ ತಾಲೂಕಿನಲ್ಲಿ ರಿಕ್ಟರ್ ಮಾಪಕ 2.8ರಷ್ಟು ಭೂಕಂಪನ' ಆಗಿರುವುದಾಗಿ ಅಂತರ್ಜಾಲ ಮೂಲಕ ಖಚಿತಪಡಿಸಿದೆ.

ಭೂಕಂಪನದ ಅನುಭವ ತಮಗೇನಾದರೂ ಆದರೆ ಕೊಡಗು ಜಿಲ್ಲೆಯ ವಿಪತ್ತು ನಿರ್ವಹಣಾ ಕೇಂದ್ರ 08272–221077, 221099ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೊಡಗು ಜಿಲ್ಲಾಡಳಿತ ಮನವಿ ಮಾಡಿದೆ.

ಮಡಿಕೇರಿ,ಜೂ.25– ಕೊಡಗು ಜಿಲ್ಲೆಯ ಗಡಿ ಗ್ರಾಮಗಳಲ್ಲಿ ಮತ್ತೆ ಭೂಮಿ ಕಂಪಿಸಿದೆ. ಇದರಿಂದ ಜಿಲ್ಲೆಯ ಜನರು ಆತಂಕಗೊಂಡಿದ್ದಾರೆ. ಶನಿವಾರ ಬೆಳಗ್ಗೆ 9 ಗಂಟೆ 10 ನಿಮಿಷಕ್ಕೆ ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 10ರಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಕಂಪನದ ಅನುಭವವಾಗಿದೆ. ಕೊಡಗಿನ ಕೊಯನಾಡು, ಕರಿಕೆ, ಸಂಪಾಜೆ, ಚೆಂಬು, ಪೆರಾಜೆ, ಸುಳ್ಯ ತಾಲೂಕಿನ ಪೆರಾಲು, ಮಂಡೆಕೋಲು, ಅಡ್ತಲೆ, ಕಲ್ಲುಗುಂಡಿ, ಗೂನಡ್ಕ ಮತ್ತಿತರ ಗ್ರಾಮಗಳಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ.

ಭೂಮಿಯೊಳಗೆ ಭಾರೀ ಶಬ್ದದೊಂದಿಗೆ 4ರಿಂದ 5 ಸೆಕೆಂಡ್‌ಗಳ ಕಾಲ ಕಂಪನವಾದ ಹಿನ್ನೆಲೆಯಲ್ಲಿ ಜನರು ಭಯಭೀತರಾಗಿ ಮನೆಗಳಿಂದ ಹೊರ ಓಡಿ ಬಂದಿದ್ದಾರೆ. ಮನೆಯ ಅಡುಗೆ ಕೋಣೆಯಲ್ಲಿ ಪಾತ್ರೆ, ಕಿಟಕಿ, ಬಾಗಿಲುಗಳು ಸದ್ದಾಗಿವೆ. ಕೊಟ್ಟಿಗೆಯಲ್ಲಿದ್ದ ಜಾನುವಾರುಗಳು ಬೆಚ್ಚಿವೆ ಎಂದು

▶ 6ನೇ ಪುಟಕ್ಕೆ

ಕೌನ್ ಬನೇಗಾ ಕರೋಡ್‌ಪತಿಯಿಂದ 25 ಲಕ್ಷಕ್ಕೆ ಆಸೆಪಟ್ಟು 25 ಸಾವಿರ ಕಳೆದುಕೊಂಡ ಗೃಹಿಣಿ

ಮೈಸೂರು,ಜೂ.25–ಕೌನ್ ಬನೇಗಾ ಕರೋಡ್‌ಪತಿಯಿಂದ 25 ಲಕ್ಷ ರೂ. ಬಹುಮಾನ ಬಂದಿದೆ ಎಂದು ಮೆಸೇಜ್ ಕಳುಹಿಸಿ ಗೃಹಿಣಿಯಿಂದ 25 ಸಾವಿರ ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿರುವ ಬಗ್ಗೆ ಕೆ.ಆರ್.ನಗರದಿಂದ ವರದಿಯಾಗಿದೆ.

ಅಲ್ಲಿನ ಎಸ್‌ಜೆಸಿ ರೋಡ್ ನಿವಾಸಿ ಕಮಲಾಬಾಯಿ(42) ಹಣ ಕಳೆದುಕೊಂಡವರಾಗಿದ್ದು, ಜೂ.23ರಂದು ಇವರ ಮೊಬೈಲ್‌ಗೆ ಲಕ್ಕಿ ಡಿಪ್‌ನಲ್ಲಿ 25 ಲಕ್ಷ ರೂ. ಬಹುಮಾನ ಬಂದಿದೆ ಎಂದು ಫೋಟೋ ಮತ್ತು ಆಡಿಯೋ ಮೆಸೇಜ್ ವಾಟ್ಸಪ್ ಮೂಲಕ ಬಂದಿದೆ. ನಂತರ ವಿಡಿಯೋ ಕಾಲ್ ಮಾಡಿದ ವ್ಯಕ್ತಿ ತನ್ನನ್ನು ಆಕಾಶ್ ಶರ್ಮಾ ಎಂದು ಪರಿಚಯಿಸಿಕೊಂಡು ತಾನು ಕೌನ್ ಬನೇಗಾ ಕರೋಡ್‌ಪತಿಯಿಂದ ಮ್ಯಾನೇಜರ್ ಮಾತನಾಡುವುದಾಗಿ ತಿಳಿಸಿದ್ದಾನೆ. ವಾಟ್ಸಪ್ ವಿಡಿಯೋ ಕಾಲ್‌ನಲ್ಲಿ ಹಣ ತುಂಬಿರುವ ಬ್ರೀಫ್‌ಕೇಸ್ ಮತ್ತು ಬ್ಯಾಂಕ್ ಚಲನ್‌ವೊಂದನ್ನು ತೋರಿಸಿ 25 ಲಕ್ಷ ರೂ.ಗಳನ್ನು ಗೃಹಿಣಿ ಖಾತೆಗೆ ಹಾಕುವುದಾಗಿ ತಿಳಿಸಿದ್ದಾನೆ. ಆದರೆ 25 ಲಕ್ಷ ರೂ. ಪಡೆಯಬೇಕಾದರೆ 25 ಸಾವಿರ ರೂ. ಜಿಎಸ್‌ಟಿ ಪಾವತಿ ಮಾಡಬೇಕು ಎಂದು ತಿಳಿಸಿ ಕ್ಯೂಆರ್ ಕೋಡ್ ಕಳುಹಿಸಿದ್ದಾನೆ. ಅದನ್ನು ಸ್ಕ್ಯಾನ್ ಮಾಡಿ 3 ಹಂತದಲ್ಲಿ 25 ಸಾವಿರ ರೂ. ವರ್ಗಾವಣೆ ಮಾಡಿದ ನಂತರ ಆತ 'ನಿಮ್ಮ ಖಾತೆಯಲ್ಲಿ 40 ಸಾವಿರ ರೂ. ಇಡಿ' ಎಂದು ಹೇಳಿದ್ದರಿಂದ ಅನುಮಾನಗೊಂಡ ಕೋಮಲಾಬಾಯಿ ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ತಾನೂ ವಂಚನೆಗೊಳಗಾಗಿರುವುದು ಅರಿವಾಗಿದೆ. ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

5 ಲಕ್ಷ ಮೌಲ್ಯದ ತಂಬಾಕು ಪದಾರ್ಥ ಕಳವು

ಮೈಸೂರು, ಜೂ.25– ಗೋಡೌನ್‌ವೊಂದರ ಬೀಗ ಒಡೆದು ಸುಮಾರು 5 ಲಕ್ಷ ರೂ. ಮೌಲ್ಯದ ತಂಬಾಕು ಪದಾರ್ಥಗಳನ್ನು ಕಳವು ಮಾಡಿರುವ ಬಗ್ಗೆ ಮೈಸೂರಿನ ವಿಶ್ವೇಶ್ವರನಗರದಿಂದ ವರದಿಯಾಗಿದೆ. ದೇವರಾಜ ಮೊಹಲ್ಲಾ ಎ.ರಾಮಣ್ಣ ಬೀದಿ ನಿವಾಸಿ ಭಾವೀಶ್ ಎಂಬುವರಿಗೆ ಸೇರಿದ ವಿಶ್ವೇಶ್ವರ ನಗರ ಭವಾನಿ ಶಾಲೆ ರಸ್ತೆಯಲ್ಲಿರುವ ಆರ್.ಜೆ.ಏಜೆನ್ಸಿಸ್ ಗೋಡೌನ್‌ನ ಬೀಗವನ್ನು ಜೂ.23ರಂದು ರಾತ್ರಿ ಒಡೆದಿರುವ ಖದೀಮರು ಅಲ್ಲಿ ಸಂಗ್ರಹಿಸಿದ್ದ ವಿಮಲ್ ಪಾನ್ ಮಸಾಲ ಸೇರಿದಂತೆ ಸುಮಾರು 5 ಲಕ್ಷ ರೂ. ಮೌಲ್ಯದ ತಂಬಾಕು ಪದಾರ್ಥಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾರ್ಟ್‌ಟೈಮ್ ಜಾಬ್ ಆಮಿಷ: 1.45 ಲಕ್ಷ ವಂಚನೆ

ಮೈಸೂರು, ಜೂ.25– ಪಾರ್ಟ್‌ಟೈಮ್ ಜಾಬ್‌ನಲ್ಲಿ ಹಣ ಗಳಿಸಬಹುದೆಂದು ಆಮಿಷವೊಡ್ಡಿ ವಿದ್ಯಾರ್ಥಿನಿಗೆ 1.45 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಸರಸ್ವತಿಪುರಂ ನಿವಾಸಿ ಎ.ಜಿ.ಸ್ವಾತಿ(20) ಹಣ ಕಳೆದುಕೊಂಡ ವಿದ್ಯಾರ್ಥಿನಿ. ಫ್ಲಿಪ್ ಕಾರ್ಟ್ ಇ ಕಾಮರ್ಸ್ ವೆಬ್‌ಸೈಟ್ ಮೂಲಕ ವಿದ್ಯಾರ್ಥಿನಿಯನ್ನು ವಾಟ್ಸಪ್ ನಂಬರ್‌ನಲ್ಲಿ ಸಂಪರ್ಕಿಸಿದ ವ್ಯಕ್ತಿ ಪಾರ್ಟ್‌ಟೈಮ್ ಜಾಬ್‌ನಲ್ಲಿ ಹಣ ಗಳಿಸಬಹುದು ಎಂದು ತಿಳಿಸಿದ್ದಾನೆ. ಮೊದಲಿಗೆ ವಿದ್ಯಾರ್ಥಿನಿಯಿಂದ 200 ರೂ. ವರ್ಗಾವಣೆ ಮಾಡಿಸಿಕೊಂಡು ಲಾಭಾಂಶ ಬಂದಿದೆ ಎಂದು ಆಕೆಯ ಖಾತೆಗೆ 310 ರೂ.ಗಳನ್ನು ಮರುಪಾವತಿ ಮಾಡಿ ನಂಬಿಕೆ ಗಳಿಸಿಕೊಂಡ ಆತ ಹಂತ ಹಂತವಾಗಿ 1.45 ಲಕ್ಷ ರೂ.ಗಳನ್ನು ವಿದ್ಯಾರ್ಥಿನಿಯಿಂದ ತನ್ನ ಖಾತೆಗೆ ವರ್ಗಾಯಿಸಿಕೊಂಡು ವಂಚನೆ ಎಸಗಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ನಗದು, ಚಿನ್ನಾಭರಣ ಕಳವು

ನಂಜನಗೂಡು, ಜೂ.25– ಮನೆ ಬೀಗ ಮುರಿದು 1.50 ಲಕ್ಷ ರೂ. ನಗದು ಕಳವು ಮಾಡಿರುವ ಪ್ರಕರಣ ತಾಲೂಕಿನ ಹೊಸಕೋಟೆ ಗ್ರಾಮದಿಂದ ವರದಿಯಾಗಿದೆ.

ಹೊಸಕೋಟೆ ಗ್ರಾಮದ ಮಹಿಳೆ ಗಾಯತ್ರಿ (50) ಎಂಬುವವರು 1.50 ಲಕ್ಷ ರೂ.ಗಳನ್ನು ತಮ್ಮ ಮನೆಯ ಬೀರುವಿನಲ್ಲಿ ಇಟ್ಟು ಜೂ.22ರಂದು ಹುಳಿಮಾವು ಗ್ರಾಮದ ಸಂಬಂಧಿಕರ ಮನೆಗೆ ಹೋಗಿದ್ದರು. ಜೂ.24ರಂದು ನೆರೆಮನೆಯವರು ಕರೆ ಮಾಡಿ ಮನೆ ಬಾಗಿಲು ತೆರೆದಿದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಬಂದು ನೋಡಿದಾಗ ಮನೆಯ ಬೀಗ ಒಡೆದು, ಬೀರುವಿನ ಬಾಗಿಲನ್ನು ಮೀಟಿ 1.5 ಲಕ್ಷ ರೂ. ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಬಿಳಿಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣ: ಮನೆ ಬೀಗ ಮುರಿದು 1.42 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಬಗ್ಗೆ ನಂಜನಗೂಡಿನ ಪಿ&ಟಿ ಲೇಔಟ್‌ನಿಂದ ವರದಿಯಾಗಿದೆ. ಎಲ್‌ಪಿಜಿ ಕಾರ್ಖಾನೆಯಲ್ಲಿ ಕಾರ್ಮಿಕನಾಗಿರುವ ಆರ್.ಅಶೋಕ್ ಅವರು, ಜೂ.23ರಂದು ಸಂಜೆ 5.45ರಲ್ಲಿ ಕೆಲಸಕ್ಕೆ ಹೋಗಿದ್ದಾರೆ. ಅವರ ತಾಯಿ ಮತ್ತು ಮಗ ಅವರ ಚಿಕ್ಕಪ್ಪನ ಮನೆಗೆ ಹೋಗಿ ಮಲಗಿದ್ದಾರೆ. ಈ ವೇಳೆ ಖದೀಮರು ಮನೆಯ ಡೋರ್‌ಲಾಕ್ ಮುರಿದು ಬೀರುವಿನಲ್ಲಿದ್ದ 13 ಗ್ರಾಂನ 1 ಜೊತೆ ಚಿನ್ನದ ಓಲೆ, 5 ಗ್ರಾಂ ಉಂಗುರ, 12 ಗ್ರಾಂ ಜುಮುಕಿ, 250 ಗ್ರಾಂ ತೂಕದ ಬೆಳ್ಳಿ ಪದಾರ್ಥ, 10 ಸಾವಿರ ನಗದು ಸೇರಿದಂತೆ 1.42 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಜೂ.24ರಂದು ಪ್ರಕರಣ ದಾಖಲಾಗಿದೆ.

ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ



ಮೈಸೂರು,ಜೂ.25(ಪಿಎಂ)–ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ರಂಗಾಯಣ, ನವಾಯು ಕೇರ್ ಸೆಂಟರ್ ಹಾಗೂ ಹಿಮಾಲಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಯೋಗ ಸಾಧಕರಿಗೆ ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ನಡೆದ ಸಮಾರಂಭದಲ್ಲಿ ಯೋಗ ಪಟುಗಳಾದ ಸಂತೋಷ್ ಕುಮಾರ್, ಎಂ.ಆರ್.ಕಿಶೋರ್, ಶಿವಪ್ರಕಾಶ್ ವಾಸುದೇವ್, ಕಿರಣ್, ಶ್ರೀಹರಿ ಅಯ್ಯಂಗಾರ್ ಹಾಗೂ ಆರ್.ಅಂಕಿತಾ ಅವರಿಗೆ ಯೋಗ ನಕ್ಷತ್ರ ಪ್ರಶಸ್ತಿಗಳನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರದಾನ ಮಾಡಿದರು.

ಈ ವೇಳೆ ಮಾತನಾಡಿದ ಅವರು, ನಮ್ಮ ರಂಗಾಯಣದಲ್ಲಿ ಯೋಗದಿಂದಲೇ ದಿನ ನಿತ್ಯದ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಯೋಗವು ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿದ್ದು, ಇದು ದೇಹ ಮತ್ತು ಮನಸ್ಸನ್ನು ಆರೋಗ್ಯವಾಗಿಟ್ಟುಕೊಳ್ಳಲು ಸಹಕಾರಿ. ಇಂತಹ ಯೋಗದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಿರುವುದು ಪ್ರಶಂಸನೀಯ. ಅವರು ಮತ್ತಷ್ಟು ಸಾಧನೆ ಮಾಡಲು ಇದು ಪ್ರೇರಣೆಯಾಗಲಿದೆ ಎಂದು ಹೇಳಿದರು.

ಮಧುಮೇಹ ತಜ್ಞ ಡಾ.ರೇಣುಕಾ ಪ್ರಸಾದ್, ವಿವೇಕಾನಂದ ಯೋಗ ಸಂಶೋಧನಾ ಕೇಂದ್ರದ ಯೋಗ ಶಿಕ್ಷಕ ಡಾ.ಪಿ.ಎನ್.ಗಣೇಶ್‌ಕುಮಾರ್, ಸಿನಿಮಾ ನಿರ್ಮಾಪಕ ಡಾ.ವೆಂಕಟೇಶ್, ಕೆ.ಆರ್.ನಗರ ಪತಂಜಲಿ ಯೋಗ ಭವನದ ಡಾ.ಪಿ.ಆರ್.ವಿಶ್ವನಾಥ್‌ಶೆಟ್ಟಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತು, ಸಂಚಾಲಕ ಎಂ.ವಿ.ನಾಗೇಂದ್ರಬಾಬು, ಮುಖಂಡರಾದ ಮಹೇಶ್ ನಾಯಕ್, ಬಸವರಾಜು, ಹರ್ಷವರ್ಧನ ಇನ್ನಿತರರಿದ್ದರು.

ಇಂದು ಸುತ್ತೂರು ಕ್ಷೇತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಪ್ರವಚನ

ಮೈಸೂರು,ಜೂ.25–ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಾಳೆ (ಜೂನ್ 26) ಬೆಳಗ್ಗೆ 6.30ರಿಂದ 7.30ರವರೆಗೆ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಆಂಗ್ಲ ಭಾಷೆಯಲ್ಲಿ ಪ್ರವಚನವನ್ನು ನೀಡಲಿದ್ದಾರೆ. ಮೈಸೂರಿನಿಂದ ಸುತ್ತೂರು ಕ್ಷೇತ್ರಕ್ಕೆ ಹೋಗಿಬರಲು ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಿಂದ ಬೆಳಗ್ಗೆ 5.30ಕ್ಕೆ ವಾಹನದ ವ್ಯವಸ್ಥೆ ಮಾಡಲಾಗಿದೆ. ಪಾಲ್ಗೊಳ್ಳಲು ಇಚ್ಛಿಸುವವರು ವೀರಭದ್ರಯ್ಯ (97413 42222) ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಬಿಜೆಪಿಗೆ ನೇಮಕ



ಮೈಸೂರು: ಇಲ್ಲಿನ ವಿದ್ಯಾರಣ್ಯಪುರಂ ನಿವಾಸಿ ರೋಸಿಟಾ ಮೇರಿ ಡಿಸೋಜ ಅವರನ್ನು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಚೆಯ್ಯಂಡ ಎಂ.ಈರಪ್ಪ ನಿಧನ



ಮೈಸೂರು, ಜೂ.25– ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿ, ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಚೆಯ್ಯಂಡ ಎಂ. ಈರಪ್ಪ (85) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಡಾ. ಚೆಯ್ಯಂಡ ಇ. ಸುಬ್ರಮಣಿ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧುವರ್ಗ ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 12 ಗಂಟೆಗೆ ವಿಜಯನಗರದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿಬಿಲ್ ಸ್ಕೋರ್ ಆಧಾರದಲ್ಲಿ ಕೃಷಿ ಸಾಲ ಮಂಜೂರು ಪದ್ಧತಿ ಕೈಬಿಡಲು ಆಗ್ರಹ

ಜೂ.28ರಂದು ಬೆಂಗಳೂರು ಆರ್‌ಬಿಐ ಕಚೇರಿ ಎದುರು ರೈತರ ಬೃಹತ್ ಪ್ರತಿಭಟನೆ



ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಗೋಷ್ಠಿಯಲ್ಲಿ ಕುರುಬೂರು ಶಾಂತಕುಮಾರ್ ಮಾತನಾಡುತ್ತಿರುವುದು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್

ಮೈಸೂರು,ಜೂ.25(ಪಿಎಂ)–ಸಿಬಿಲ್ ಸ್ಕೋರ್ ಆಧಾರದಲ್ಲಿ ಕೃಷಿ ಸಾಲ ಮಂಜೂರು ಮಾಡುವ ಪದ್ಧತಿ ಕೈಬಿಡಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಜೂ.28ರಂದು ಬೆಂಗಳೂರಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಕಚೇರಿಯ ಎದುರು ರಾಜ್ಯ ರೈತರ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕುಗಳಲ್ಲಿ ರೈತರಿಗೆ ಸಾಲ ದೊರೆಯುತ್ತಿಲ್ಲ. ಕೃಷಿ ಸಾಲ ನೀಡಲು ಬ್ಯಾಂಕುಗಳು ರೈತರ ಸಿಬಿಲ್ ಸ್ಕೋರ್ (ಸಾಲ ಮರುಪಾವತಿ ಮಾಡಿರುವ ವರದಿ) ಕೇಳುತ್ತಿವೆ. ಅತಿವೃಷ್ಟಿ–ಅನಾವೃಷ್ಟಿಯಿಂದ ಬೆಳೆ ಹಾನಿಯಾದ ರೈತರು ಸಕಾಲಕ್ಕೆ ಸಾಲ ಪಾವತಿಸಲು ಹೇಗೆ ಸಾಧ್ಯ ಎನ್ನುವುದನ್ನು ಅರಿಯದೇ ರೈತರಿಗೆ ಮಾರಕವಾಗುವ ನೀತಿಗಳನ್ನು ಅನುಸರಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡು 12 ತಿಂಗಳ ಅವಧಿಯೊಳಗೆ ರೈತರು ಸಾಲದ ಮೇಲಿನ ಬಡ್ಡಿ ಪಾವತಿಸಿದರೂ ಬ್ಯಾಂಕುಗಳು ಹೊಸದಾಗಿ ಸಾಲ ನೀಡುತ್ತಿಲ್ಲ. ಸಂಪೂರ್ಣವಾಗಿ ಸಾಲ ಮರುಪಾವತಿ ಬಳಿಕವಷ್ಟೇ ಹೊಸ ಸಾಲ ಪಡೆಯಬೇಕೆಂದು ಹೇಳಲಾಗುತ್ತಿದೆ. ಇದು ಕೋವಿಡ್ ಸಂಕಷ್ಟದ ನಡುವೆ ರೈತರಿಗೆ ಮತ್ತೊಂದು ಆಘಾತ ಉಂಟು ಮಾಡಿದೆ. ಕೂಡಲೇ ಈ ನಿಯಮಾವಳಿ ಕೈಬಿಟ್ಟು ಹೊಸ ಸಾಲ ನೀಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಸಂಕಷ್ಟದಲ್ಲಿರುವ ರೈತರ ಸಾಲ ವಸೂಲಾತಿಗಾಗಿ ಬ್ಯಾಂಕುಗಳು ನೋಟಿಸ್ ನೀಡಿ ಕಿರುಕುಳ ನೀಡುತ್ತಿವೆ. ಕೂಡಲೇ ಈ ರೀತಿ ಕಿರುಕುಳ ನೀಡುವುದನ್ನು ತಪ್ಪಿಸಬೇಕು. ಪ್ರತಿವರ್ಷ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿಯು ಸಭೆ ನಡೆಸಿ ಕೃಷಿ ಚಟುವಟಿಕೆ ಸಂಬಂಧ ಬೆಳೆ ಸಾಲ ನೀಡಲು ನಿಯಮಗಳನ್ನು ರಚಿಸುತ್ತದೆ. ಈ ಸಭೆಗೆ ರೈತ ಪ್ರತಿನಿಧಿಗಳನ್ನು ಆಹ್ವಾನಿಸಿ, ರೈತರ ಸಮಸ್ಯೆಗಳನ್ನು ಅರಿತು ತೀರ್ಮಾನ ಕೈಗೊಳ್ಳಬೇಕೆಂದು ಎಂದು ಒತ್ತಾಯಿಸಿದರು.

> “ಕೃಷಿ ಭೂಮಿ ಮೌಲ್ಯ ಆಧರಿಸಿ ಕಾರು, ಮೋಟಾರ್ ಬೈಕ್ ಮತ್ತೆ ಮನೆ ಕಟ್ಟಲು ಸಾಲ ನೀಡುವ ರೀತಿ ಶೇ.70ರಷ್ಟು ಸಾಲ ಕೊಡುವ ಪದ್ಧತಿ ಜಾರಿಗೆ ತರಬೇಕು. ಇದರಿಂದ ಅನೇಕ ರೈತರ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ನೆಮ್ಮದಿಯಾಗಿ ಕೃಷಿ ಚಟುವಟಿಕೆ ನಡೆಸಲು ಅನುಕೂಲವಾಗುತ್ತದೆ. ಕೋವಿಡ್‌ನಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದರೂ ರೈತರಿಗೆ ಪ್ರೋತ್ಸಾಹ ನೀಡುವಂತಹ ಯಾವುದೇ ಯೋಜನೆ ಜಾರಿ ಮಾಡಿಲ್ಲ. ಆದರೆ ಉದ್ಯಮಿಗಳಿಗೆ ಶೇ.30ರಷ್ಟು ಹೆಚ್ಚುವರಿ ಸಾಲ ಪಡೆದುಕೊಂಡು ವ್ಯಾಪಾರ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ಹೀಗೆ ರೈತರ ವಿಚಾರದಲ್ಲಿ ನಿರ್ಲಕ್ಷ್ಯ ತಾಳಿರುವುದು ಸರಿಯಲ್ಲ.
> –ಕುರುಬೂರು ಶಾಂತಕುಮಾರ್

ಒಕ್ಕೂಟದ ಮುಖಂಡರಾದ ಅತ್ತಹಳ್ಳಿ ದೇವರಾಜ್, ಸೋಮಶೇಖರ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕಿರಗಸೂರ್ ಶಂಕರ್, ಬರಡನಪುರ ನಾಗರಾಜ್, ಅಂಬಳೆ ಮಂಜುನಾಥ್, ಕಾಟೂರ ಮಹದೇವಸ್ವಾಮಿ, ವರಕೋಡು ನಾಗೇಶ್, ಜಯರಾಮೇಗೌಡ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜೂ.28ರಂದು ಟಿಪ್ಪು ಸುಲ್ತಾನ್‌ರವರ 230ನೇ ಗಂಧ ಉರುಸ್

ಮೈಸೂರು,ಜೂ.25–ನಗರದ ಅಶೋಕ ರಸ್ತೆಯ ಬಳಿಯ ಮೀಲಾದ್ ಬಾಗ್‌ನಲ್ಲಿ ಅಲ್ಲಾ ಮಾಲೀಕ್ ಇಂಡಸ್ಟ್ರೀಸ್‌ನ ಅಫ್ರೋಜ್ ಪಾಷ ಅವರಿಂದ ಜೂ.28ರಂದು ಬೆಳಗ್ಗೆ 11.45ಕ್ಕೆ ಹಜ಼ರತ್ ಟಿಪ್ಪು ಸುಲ್ತಾನ್ ಶಹೀದ್ ಅವರ 230ನೇ ಗಂಧ ಉರುಸ್ ಷರೀಫ್ ಆಚರಿಸಲಾಗುತ್ತಿದೆ. ಮೈಸೂರಿನ ಸರ್ ಖಾಜ಼ಿಯ ಹಜ಼ರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್, ಮೈಸೂರಿನ ಬಿಷಪ್, ಶ್ರೀಭಾಷ್ಯಂ ಸ್ವಾಮೀಜಿ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಶಾಸಕ ತನ್ವೀರ್‌ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.ಫಾತೆಹಾಖಾನಿ, ದುವಾ, ಗಂಧದ ಉರುಸ್ ಮೆರವಣಿಗೆಯು ಫುಕ್ರಾಗಳು, ದರ್ವೇಶ್, ಸೂಫಿಝಾಮ, ದಫ್ ಅವರೊಂದಿಗೆ ಅಶೋಕ ರಸ್ತೆ, ಸೆಂಟ್ ಫಿಲೋಮಿನಾ ಚರ್ಚ್ ಸರ್ಕಲ್, ಫೌಂಟನ್ ಸರ್ಕಲ್, ಬಡಾಮಕಾನ್, ಟಿಪ್ಪು ಸರ್ಕಲ್ ಮೂಲಕ ಸಾಗಿ ಲಾರಿಯಲ್ಲಿ ಮಸೀದಿ ಅಲ್ಲಾಹ್ ಟಿಪ್ಪು ಸ್ಟೇಟ್ ವಕ್ಫ್ ಗಂಧದ ಮೆರವಣಿಗೆಯೊಂದಿಗೆ ಸೇರಿಕೊಳ್ಳುವುದು. ಟಿಪ್ಪುವಿನ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಅಫ್ರೋಜ್ ಪಾಷ ಕೋರಿದ್ದಾರೆ. ಮಾಹಿತಿಗೆ ಮೊ: ಮೊ. 9379856537 ಸಂಪರ್ಕಿಸಬಹುದು.

ಬಿಎಐ ಮೈಸೂರು, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಪರಿಸರ ಮಾಸಾಚರಣೆ ಪ್ರಯುಕ್ತ

'ಚಾಮುಂಡಿ ಚಾಲೆಂಜ್' ಸೈಕ್ಲಥಾನ್; ವಿಜೇತರಿಗೆ ನಗದು ಬಹುಮಾನ



ಇಂದು ಗ್ರೀನ್ ಮ್ಯಾರಥಾನ್

ಬಿಎಐ ಮೈಸೂರು ಕೇಂದ್ರ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಮತ್ತು ಡೆಕಾಥ್ಲಾನ್ ಸಂಯುಕ್ತಾಶ್ರಯದಲ್ಲಿ ಪರಿಸರ ಮಾಸಾಚರಣೆ ಅಂಗವಾಗಿ ಜೂ.26ರಂದು ಬೆಳಗ್ಗೆ 6ಕ್ಕೆ ಮಾನಸಗಂಗೋತ್ರಿ ಆವರಣದಲ್ಲಿ ಬಿಎಐ–ಭೈರಿ ಡೆವಲಪರ್ಸ್ ಬಿಲ್ಡರ್ಸ್ ಗ್ರೀನ್ ಮ್ಯಾರಥಾನ್ ಏರ್ಪಡಿಸಲಾಗಿದೆ.

ಮೈಸೂರು,ಜೂ.25(ಪಿಎಂ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರ ಮತ್ತು ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಪರಿಸರ ಮಾಸಾಚರಣೆ (ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ) ಅಂಗವಾಗಿ ಶನಿವಾರ ನಡೆದ ಸೈಕ್ಲಥಾನ್ ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

'ಚಾಮುಂಡಿ ಚಾಲೆಂಜ್' ಶೀರ್ಷಿಕೆಯಡಿ ನಡೆದ ಈ ಸೈಕ್ಲಥಾನ್ ಸ್ಪರ್ಧೆಗೆ ಚಾಮುಂಡಿಬೆಟ್ಟದ ದ್ವಾರದ ಬಳಿ ವಾಣಿಜ್ಯ ತೆರಿಗೆ ಇಲಾಖೆ ಡಿಸಿ ರಮೇಶ್ ನರಸಯ್ಯ ಹಸಿರು ನಿಶಾನೆ ತೋರಿದರು. ಮೈಸೂರು, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಸ್ಪರ್ಧಿಗಳು ಭಾಗವಹಿಸಿದ್ದರು. 14 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗ, 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗ, 18 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗ, ಪುರುಷರು ಮತ್ತು ಮಹಿಳೆಯರ ವಿಭಾಗ, ಮಾಸ್ಟರ್ ವಿಭಾಗ (38 ವರ್ಷ ಮೇಲ್ಪಟ್ಟು), ಗ್ರ್ಯಾಂಡ್ ಮಾಸ್ಟರ್ಸ್ ವಿಭಾಗ (45 ವರ್ಷ ಮೇಲ್ಪಟ್ಟು) ಮತ್ತು ಹಿರಿಯರ ವಿಭಾಗ (ಪುರುಷರು ಮತ್ತು ಮಹಿಳೆಯರು/55 ವರ್ಷ ಮೇಲ್ಪಟ್ಟು) ಸೇರಿದಂತೆ ಒಟ್ಟು 16 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು.

ಸೈಕ್ಲೋಪೀಡಿಯಾ ಸಹಯೋಗದೊಂದಿಗೆ ನಡೆದ ಈ ಸೈಕ್ಲಥಾನ್ ಸ್ಪರ್ಧೆಯು ಚಾಮುಂಡಿಬೆಟ್ಟದ ದ್ವಾರದಿಂದ ದೇವಿಕೆರೆವರೆಗೆ (6.8 ಕಿ.ಮೀ. ಎಲ್ಲಾ ವಿಭಾಗ) ನಡೆಯಿತು. ಬಳಿಕ ದೇವಿಕೆರೆ ಬಳಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದ ಗಣ್ಯರು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

2019ರ ಟ್ರಯಥ್ಲಾನ್ ಕ್ರೀಡೆಯಲ್ಲಿ ಐರನ್ ವುಮೆನ್ ಪ್ರಶಸ್ತಿಗೆ ಭಾಜನರಾದ ಮೈಸೂರಿನ ದಂತವೈದ್ಯೆ ಉಷಾ ಹೆಗ್ಡೆ, ಅಂತಾರಾಷ್ಟ್ರೀಯ ಸೈಕಲ್‌ಪಟು ಮಹೇಶ್ ಚೌದರಿ, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ ಸಂಸ್ಥಾಪಕ ಟ್ರಸ್ಟಿ ಶುಭಾಸಂಜಯ್ ಅರಸ್ ವಿಜೇತರಿಗೆ ಬಹುಮಾನ ವಿತರಿಸಿದರು. ಪುರುಷರು ಮತ್ತು ಮಹಿಳೆಯರ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ 5 ಸಾವಿರ ರೂ., 3 ಸಾವಿರ ರೂ. ಮತ್ತು 2 ಸಾವಿರ ರೂ. ನಗದು ಬಹುಮಾನ ನೀಡಲಾಯಿತು. ಅದೇ ರೀತಿ 18 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ 3 ಸಾವಿರ ರೂ., 2 ಸಾವಿರ ರೂ. ಮತ್ತು ಸಾವಿರ ರೂ. ನಗದು ಬಹುಮಾನ ನೀಡಲಾಯಿತು. ಇದರ ಹೊರತಾಗಿ ಉಳಿದೆಲ್ಲಾ ವಿಭಾಗಗಳಿಗೆ ಪದಕ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು.

ಬಿಎಐ ಮೈಸೂರು ಘಟಕದ ಅಧ್ಯಕ್ಷ ಆರ್.ರಘುನಾಥ್, ಪರಿಸರ ಮಾಸಾಚರಣೆ ಸಮಿತಿ ಅಧ್ಯಕ್ಷ ವಿ.ನಾಗರಾಜ್ ಭೈರಿ, ಸಮಿತಿ ಸಲಹೆಗಾರ ಬಿ.ಎಸ್.ದಿನೇಶ್, ಸೈಕ್ಲಥಾನ್ ಸ್ಪರ್ಧೆಯ ಸಂಚಾಲಕರಾದ ಬಿ.ಎಸ್.ಚಂದ್ರಶೇಖರ್ ಭಾರದ್ವಾಜ್, ಶಾಂತಿ ಸಿ.ಭಾರದ್ವಾಜ್, ಜಿ.ಅಶೋಕ್, ವೀಣಾ ಅಶೋಕ್ ಮತ್ತಿತರರು ಹಾಜರಿದ್ದರು.


ಡಿಜಿಟಲ್ ಯೋಗ ವಸ್ತುಪ್ರದರ್ಶನ ವೀಕ್ಷಿಸಿದ ಸಂಸದ ಪ್ರತಾಪ್ ಸಿಂಹ



ಮೈಸೂರು,ಜೂ.25(ಆರ್‌ಕೆ)–ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಆಯೋಜಿಸಿರುವ ಡಿಜಿಟಲ್ ಯೋಗ ಪ್ರದರ್ಶನ ಮಳಿಗೆಗಳನ್ನು ವೀಕ್ಷಿಸಿದ ಸಂಸದ ಪ್ರತಾಪ್ ಸಿಂಹ, ಅದೇ ವೇಳೆ ಯೋಗಾಭ್ಯಾಸ ಮಾಡಿದರು.

ಬೆಳಗ್ಗೆ 10.30 ಗಂಟೆಯಿಂದ 11.15 ಗಂಟೆವರೆಗೆ ಪ್ರತಿಯೊಂದು ಮಳಿಗೆಗೂ ಭೇಟಿ ನೀಡಿ, ಯೋಗದ ವಿವರ ಪಡೆದ ಅವರು, ಆರೋಗ್ಯ ವೃದ್ಧಿ, ಫಿಸಿಕಲ್ ಫಿಟ್‌ನೆಸ್, ಮಾನಸಿಕ ಸದೃಢತೆಗೆ ಯೋಗದ ಪ್ರಾಮುಖ್ಯತೆ ಏನೆಂಬುದನ್ನು ಡಿಜಿಟಲ್ ಯೋಗ ಪ್ರದರ್ಶನ ವೀಕ್ಷಿಸಿ ತಿಳಿದುಕೊಂಡ ಅವರು, ಕೆಲವು ಆಸನಗಳನ್ನು ಶಾಲಾ ಮಕ್ಕಳೊಂದಿಗೆ ಪ್ರದರ್ಶಿಸಿದರು. ಆಯುಷ್ ಇಲಾಖೆಯ ಡಿಜಿಟಲ್ ವಿಂಗ್, ಸ್ಥಳೀಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಡಿಜಿಟಲ್ ವಸ್ತುಪ್ರದರ್ಶನದ ಮಹತ್ವದ ಬಗ್ಗೆ ಸಂಸದರಿಗೆ ಮಾಹಿತಿ ನೀಡಿದರು. ದೇಶಾದ್ಯಂತ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡಿದ್ದ ಕಾರ್ಯಕ್ರಮಗಳನ್ನೂ ಪರದೆ ಮೇಲೆ ಪ್ರದರ್ಶಿಸಲಾಗುತ್ತಿತ್ತು. ಮೈಸೂರು ಜಿಲ್ಲಾ ಆಯುಷ್ ಅಧಿಕಾರಿ ಡಾ. ಸೀತಾಲಕ್ಷ್ಮಿ, ಸಾರ್ವಜನಿಕ ಇಲಾಖೆ ಉಪನಿರ್ದೇಶಕ ಡಾ.ರಾಮಚಂದ್ರರಾಜೇ ಅರಸ್, ಕೇಂದ್ರ ಆಯುಷ್ ಇಲಾಖೆ ಡಿಜಿಟಲ್ ವಿಂಗ್ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದು, ಸಂಸದರಿಗೆ ಯೋಗದ ಮಹತ್ವ, ಪುರಾತನ ಇತಿಹಾಸ, ಹಿನ್ನೆಲೆ ಕುರಿತು ಮಾಹಿತಿ ನೀಡಿದರು. ನಾಳೆ (ಜ. 26) ಡಿಜಿಟಲ್ ಯೋಗ ಪ್ರದರ್ಶನ ಮುಕ್ತಾಯವಾಗಲಿದ್ದು, ಇಂದು ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಯೋಗ ಪ್ರದರ್ಶನ ವೀಕ್ಷಿಸಿದರಲ್ಲದೆ, ಕೆಲವರು ಯೋಗಾಭ್ಯಾಸ ಮಾಡಿ ಆಯುಷ್ ಇಲಾಖೆ ಅಧಿಕಾರಿಗಳಿಂದ ಬಹುಮಾನಗಳನ್ನೂ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.06.2022 ಭಾನುವಾರ, ಮಳೆ ನಕ್ಷತ್ರ : ಆರ್ದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮಕೃಷ್ಣ ಸ್ಪೆಷಾಲಿಟಿ ಆಸ್ಪತ್ರೆ:** ಉಚಿತ ಥೈರಾಯಿಡ್ ತಪಾಸಣೆ ಮತ್ತು ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ವಿದ್ಯಾರಣ್ಯಪುರಂ, ಬೆಳಗ್ಗೆ 9 ರಿಂದ.

■ **ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಮಹಾಮಂಡಳ, ಮೈಸೂರು ಶಾಖೆ:** ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣರಿಗೋಸ್ಕರ ಗೊಬ್ಬು ಗಮ್ಮತ್ ಆಟೋಟ ಸ್ಪರ್ಧೆ, ಸ್ಥಳ: ವಿಜಯ ವಿಠ್ಠಲ ಶಾಲೆ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಗ್ಲೋಬಲ್ ಕಾಂಪಿಟೇಟಿವ್ ಅಕಾಡೆಮಿ:** ಕೆಎಎಸ್, ಪಿಎಸ್‌ಐ ಅಭ್ಯರ್ಥಿಗಳಿಗೆ ಉಚಿತ ಕಾರ್ಯಾಗಾರ, ಉಪಸ್ಥಿತರು : ಡಿವೈಎಸ್ಪಿ ಎಂ. ಮಹೇಂದ್ರ, ರಘು, ಸಾಹಿತಿ ಸತೀಶ್ ಜವರೇಗೌಡ, ಸ್ಥಳ: ಗ್ಲೋಬಲ್ ಕಾಂಪಿಟೇಟಿವ್ ಅಕಾಡೆಮಿ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು:** ಓಪನ್ ಡೇ–2022, ಅಧ್ಯಕ್ಷತೆ: ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಸಿಇಟಿ ಸೆಲ್ ಎಕ್ಸ್‌ಫರ್ಟ್ ಉದಯ್ ಶಂಕರ್, ಗೌರವ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಸದಾಶಿವೇಗೌಡ, ಸ್ಥಳ:ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಚಾಮುಂಡೇಶ್ವರಿ ಯುವ ಬಳಗ, ಬೋಗಾದಿ:** ಕೆಂಪೇಗೌಡರ 513ನೇ ಜಯಂತಿ ಆಚರಣೆ, ಮುಖ್ಯ ಅತಿಥಿಗಳು: ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಪಾಲಿಕೆ ಸದಸ್ಯ ಶಿವಕುಮಾರ್, ಮುಡಾ ಸದಸ್ಯೆ ಲಕ್ಷ್ಮೀದೇವಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಗಂಗಾಧರ, ವಿಕ್ರಮ್ ಅಯ್ಯಂಗಾರ್, ಸ್ಥಳ: ಕಾಮಾಕ್ಷಿ ಆಸ್ಪತ್ರೆ ಬಳಿ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು:** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನದ ಸ್ಮರಣಾರ್ಥ ಶಿವಪುರದಲ್ಲಿ ನಿರ್ಮಿಸಿರುವ ಶಿವಪುರ ಹೆಬ್ಬಾಗಿಲು ಕಮಾನು ಗೇಟ್ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಯುವ ಮುಖಂಡ ಆರ್.ಸಿ. ಮಹೇಶ್, ಸ್ಥಳ: ಶಿವಪುರ, ಮಾನಂದವಾಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಪಡುವಾರಹಳ್ಳಿ ಸ್ನೇಹ ಬಳಗ:** ಕೆಂಪೇಗೌಡರ ಜಯಂತಿ, ಉಪಸ್ಥಿತರು: ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಂ.ಭೈರಪ್ಪ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಸದಸ್ಯರಾದ ನಮ್ರತಾ ರಮೇಶ್, ಎಂ.ಚಿಕ್ಕವೆಂಕಟು, ಸ್ಥಳ : ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ, ಬೆಳಗ್ಗೆ 11 ಗಂಟೆಗೆ.

■ **ಕರ್ನಾಟಕ ಸೇನಾ ಪಡೆ:** ಕೆಂಪೇಗೌಡರ ಜಯಂತಿ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಮುಖ್ಯ ಅತಿಥಿಗಳು: ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ. ನಟರಾಜ್ ಜೋಯ್ಸ್, ಸಿ.ಜಿ.ಗಂಗಾಧರ್, ನವೀನ್‌ಕುಮಾರ್, ಮಡ್ಡೀಕೆರೆ ಗೋಪಾಲ್, ಸುರೇಶ್ ಗೋಲ್ಡ್, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಥಿಯೋರಂ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕೆಸರೆ, ಬೆಲವತ್ತ, ಮಧ್ಯಾಹ್ನ 12.30ಕ್ಕೆ.

■ **ಸಹಕಾರ ಭಾರತಿ:** ರಾಜ್ಯ ಮಹಿಳಾ ಅಭ್ಯಾಸ ವರ್ಗದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಜ್ಞಾನ ಸರೋವರ, ಲಿಂಗದೇವರಕೊಪ್ಪಲು ಮಧ್ಯಾಹ್ನ 1.30ಕ್ಕೆ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ :** ವೀರಶೈವ ಲಿಂಗಾಯಿತ ವಧು–ವರರ ಸಮಾವೇಶ, ಉದ್ಘಾಟನೆ: ಮಿಸ್ ಮೈಸೂರು ತನಿಷ್ಕಮೂರ್ತಿ, ಅಧ್ಯಕ್ಷತೆ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 2ರಿಂದ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಶಂಕರ ದೇವನೂರು, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ", ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಎಸ್. ಸಂಗೀತಾ, ಟಿ.ಎಸ್. ಅಶ್ವಿನಿ, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ.ವಿಜಯ ನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ "ಮಾದಕ ವಸ್ತುಗಳಿಂದ ದೂರವಿರಿ" ಕುರಿತು ಡಾ.ಎಂ.ಎಸ್. ಮಂಜುಪ್ರಸಾದ್, ಡಾ.ಸುಧಾರಾಣಿ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪ್ರತಿಭಾಪಲ್ಲವ, ಭಾಗವಹಿಸುವವರು– ಯೋಗಪಟು ಹೇಮಂತ್ ಜೆ., 11.00 ಮನ್ ಕಿ ಬಾತ್– ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು

ಮಧ್ಯಾಹ್ನ: 12.35 ದೇವರನಾಮ–ಎ.ಆರ್. ರಾಗಿಣಿ, 12.45 ಜನಪದ ಸಂಗೀತ–ಪಾರ್ವತಮ್ಮ ಮತ್ತು ತಂಡ, 1.20 ಭಾವಗೀತೆ–ಕೆ.ಆರ್. ಸವಿತ, ಸುಷ್ಮಾ ಕೃಷ್ಣಮೂರ್ತಿ, 2.35 ಚಲನ ಚಿತ್ರ ಧ್ವನಿ ವಾಹಿನಿ "ಕಲಾವಿದ", 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶೂರ ಪದ್ಮಾಸುರ ಕಾಳಗ, ಪ್ರಸ್ತುತಿ– ಹೇರಂಜೆ ನೀಲಾವರ ಲಕ್ಷ್ಮೀನಾರಾಯಣ ರಾವ್ ಮತ್ತು ಬಳಗದವರು, 9.05 ಚೆಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ವಿದುಷಿ ಯೋಗನಂದನ– ವೀಣಾವಾದನ, 11.00 ಸವಿನೆನಪು.

■ **ನಾದಬ್ರಹ್ಮ ಸಂಗೀತ ಸಭಾ:** ಅಪೂರ್ವ ಮಿಲನ ಹಿರಿಯ ಕಲಾವಿದರ 80, 90ರ ದಶಕದ ಕನ್ನಡ, ಹಿಂದಿ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ, ಹಿರಿಯ ಕಲಾವಿದರಾದ ಆಲ್ಫಿ, ಜಾರ್ಜ್ ಪ್ರಭಾಕರ್, ಕೃಷ್ಣಮೂರ್ತಿ, ಕುಮಾರ್ ರೇವಣ್ಣ, ರಾಘವೇಂದ್ರ ರತ್ನಾಕರ್, ಅಶ್ವಿನಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವಾಣಿಯರ್ ಸಂಘಂ, ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ :** ಸಾಮೂಹಿಕ ಯೋಗ ಕಾರ್ಯಕ್ರಮ, ಸ್ಥಳ: ಮೈಸೂರು ವಿವಿ ಓವೆಲ್ ಮೈದಾನ, ಬೆಳಗ್ಗೆ 6ಕ್ಕೆ.

■ **ರಾಜು ಕ್ಷತ್ರೀಯ ಟ್ರಸ್ಟ್ :** ಆಂಬುಲೆನ್ಸ್ ಲೋಕಾರ್ಪಣೆ ಕಾರ್ಯಕ್ರಮ, ಭಾಗವಹಿಸುವವರು : ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ, ಎಂ.ಎನ್. ನಾಗರಾಜು, ಆರ್.ಡಿ. ಕುಮಾರ್, ಡಾ. ಎಸ್. ದಿವಾಕರ್, ಸ್ಥಳ : ಪಂಪಾಪತಿ ರಸ್ತೆ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ವಿಶೇಷ ಸಂಗೀತ ಕಾರ್ಯಕ್ರಮ, ಸಂಜೆ 5.30 ರಿಂದ ರಕ್ಷಿತ್ ಪ್ರಸಾದ್ ಅವರಿಂದ ಮ್ಯಾಂಡೋಲಿನ್, ಅಭಯ್ ಅನಿಲ್‌ಕುಮಾರ್ – ವಯೋಲಿನ್, ರಾಧೇಶ್ – ಮೃದಂಗ, ಎಸ್. ಮಂಜುನಾಥ್ – ಘಟಂ, ಸಂಜೆ 6.30ಕ್ಕೆ ಡಾ. ಪಂಡಿತ್ ನಾಗರಾಜ್‌ರಾವ್ ಹವಾಲ್ದಾರ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಮತ್ತು ವಚನ ಗಾಯನ, ಓಂಕರ್‌ನಾಥ್ ಹವಾಲ್ದಾರ್–ಸಹ ಗಾಯನ, ಕೇದಾರ್‌ನಾಥ್ ಹವಾಲ್ದಾರ್–ತಬಲ, ಸಮೀರ್ ಹವಾಲ್ದಾರ್–ಹಾರ್ಮೋನಿಯಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಮೈಸೂರು ಕರಾಟೆ ಅಸೋಸಿಯೇಷನ್:** ಸ್ವಯಂ ರಕ್ಷಣೆಗಾಗಿ ಕರಾಟೆ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಮುಖ್ಯ ಅತಿಥಿಗಳು: ಅರುಣ್ ಮಾಚಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಉಪ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ಇಲಾಖೆ ನಿರ್ದೇಶಕ ಡಾ.ಕೃಷ್ಣಯ್ಯ, ವಿ.ನಾಗರಾಜು, ಸೋಸಲೆ ಸಿದ್ದರಾಜು, ಸ್ಥಳ : ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನ, ಬೆಳಗ್ಗೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ ಮಿಸ್ಟರ್ ಬೋಗೀಸ್ ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ರಂಗವಲ್ಲಿ:** ರಂಗವಲ್ಲಿ ಕಲಾ ತಂಡದಿಂದ ಗಿರೀಶ್ ಕಾರ್ನಾಡ್‌ರ ತುಘಲಕ್ ನಾಟಕ ಪ್ರದರ್ಶನ, ನಿರ್ದೇಶನ: ಮಾಯಸಂದ್ರ ಕೃಷ್ಣಪ್ರಸಾದ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ.

■ **ಗಾನಭಾರತೀ:** ವಾಲ್ಮೀಕಿ ರಾಮಾಯಣ ಆಧಾರಿತ ಅಯೋಧ್ಯಾ ಕಾಂಡ ನಾಟಕ ಪ್ರದರ್ಶನ, ರಂಗನಿರ್ದೇಶನ : ಪ್ರಸನ್ನ, ಸಂಗೀತ: ಅನುಶೆಟ್ಟಿ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 7ಕ್ಕೆ

ನಾಳೆ ಬೆಂಗಳೂರು ನಿರ್ಮಾತೃ, ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ



ಮೈಸೂರು,ಜೂ.25(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಜೂ.27 ರಂದು ಬೆಂಗಳೂರು ನಿರ್ಮಾತೃ, ನಾಡಪ್ರಭು ಶ್ರೀ ಕೆಂಪೇಗೌಡರ 513ನೇ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷರೂ ಆದ ಜಯಂತ್ಯೋತ್ಸವ ಸಮಿತಿ ಸದಸ್ಯ ಸಿ.ಜಿ.ಗಂಗಾಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಸಾವಿರಾರು ಮಂದಿ ಬೃಹತ್ ಮೆರವಣಿಗೆ ಮುಖಾಂತರ ಕೆಆರ್ ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಮಾರ್ಗವಾಗಿ ಕಲಾಮಂದಿರ ತಲುಪಲಿದ್ದಾರೆ ಎಂದು ಹೇಳಿದರು.

ಅಂದು ಮಧ್ಯಾಹ್ನ 12ಕ್ಕೆ ಕಲಾ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಸೋಮನಾಥ ಸ್ವಾಮೀಜಯವರ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಶ್ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಶ್ರೀ ಕೆಂಪೇಗೌಡರ ವಿಚಾರಧಾರೆ ಕುರಿತಂತೆ ಸಂಪನ್ಮೂಲ ವ್ಯಕ್ತಿ ಹೆಚ್.ಡಿ. ವಿಶ್ವನಾಥ್ ಮುಖ್ಯ ಭಾಷಣ ಮಾಡಲಿದ್ದಾರೆ. ಇದೇ ವೇಳೆ ಒಕ್ಕಲಿಗರ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಮಂಜೇಗೌಡ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಉಪಾಧ್ಯಕ್ಷ ರವಿ ರಾಜಕೀಯ, ನಿರ್ದೇಶಕ ರವಿ, ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಗೋಷ್ಠಿಯಲ್ಲಿದ್ದರು.

ಜಾರ್ಖಂಡ್ ಯುವಕನ 'ಮಣ್ಣು ಉಳಿಸಿ' ಸೈಕಲ್ ಜಾಥಾ



ಮೈಸೂರು, ಜೂ.25(ಜಿಎ)– 'ಮಣ್ಣು ಉಳಿಸಿ' ಅಭಿಯಾನದ ಮೂಲಕ ಮಣ್ಣಿನ ಮಹತ್ವವನ್ನು ತಿಳಿಸಲು ಸೈಕಲ್ ಮುಖಾಂತರ ದಕ್ಷಿಣ ಭಾರತ ಸಂಚಾರ ಮಾಡುತ್ತಿರುವ ಜಾರ್ಖಂಡ್‌ನ ಯುವಕ ಶುಕ್ರವಾರ ಮೈಸೂರು ತಲುಪಿದ್ದಾನೆ.

ಈಶಾ ಫೌಂಡೇಶನ್ ಪ್ರತಿಷ್ಠಾನದ ಸದ್ಗುರು ಜಗ್ಗಿ ವಾಸುದೇವ ಅವರು ಬೈಕ್ ರೈಡ್ ಮೂಲಕ ಮಣ್ಣು ಉಳಿಸಿ ಅಭಿಯಾನವನ್ನು ವಿಶ್ವದಾದ್ಯಂತ ನಡೆಸಿ ಯಶಸ್ವಿಯಾಗಿದ್ದಾರೆ. ಅವರನ್ನು ಪ್ರೇರಣೆಯಾಗಿಟ್ಟುಕೊಂಡು ಜಾರ್ಖಂಡ್‌ನ ಸಾಮ್ರಾಟ್ ಸಿಂಗ್ ಎಂಬ ಯುವಕ ತನ್ನ ಸೈಕಲ್ ಮೂಲಕ ದಕ್ಷಿಣ ಭಾರತದಲ್ಲಿ ಮಣ್ಣಿನ ಮಹತ್ವವನ್ನು ಸಾರುತ್ತಿದ್ದಾನೆ.

ದೆಹಲಿಯಿಂದ ಕಳೆದ ಏಪ್ರಿಲ್ 10ಕ್ಕೆ ಮಣ್ಣು ಉಳಿಸಿ ಅಭಿಯಾನವನ್ನು ಆರಂಭಿಸಿದ ಸಾಮ್ರಾಟ್ ಪ್ರತಿದಿನ 100 ಕಿ.ಮೀ ನಂತೆ ಸೈಕಲ್ ಮೂಲಕ ಕ್ರಮಿಸಿ 75ನೇ ದಿನಕ್ಕೆ ಮೈಸೂರಿಗೆ ತಲುಪಿದ್ದಾನೆ ಮೈಸೂರಿನ ನಂತರ ಬೆಂಗಳೂರಿಗೆ ಹೋಗಿ ಅಲ್ಲಿಂದ ಹುಬ್ಬಳ್ಳಿ ಮಾರ್ಗವಾಗಿ ಗೋವಾಗೆ ಹೋಗಿ ಅಲ್ಲಿ ತಮ್ಮ ಅಭಿಯಾನವನ್ನು ಪೂರ್ಣಗೊಳ್ಳಿಸುವ ಉದ್ದೇಶವನ್ನು ಹೊಂದಿದ್ದಾರೆ. 100 ದಿನಗಳಿಂದ ಸದ್ಗುರು ಅವರು ಮಣ್ಣು ಉಳಿಸಿ ಅಭಿಯಾನವನ್ನು ನಡೆಸಿ ಯಶಸ್ವಿಯಾಗಿದ್ದು, ಮಣ್ಣು ಉಳಿಸುವುದರ ಬಗ್ಗೆ ಅವರು ಸಂಪೂರ್ಣ ಪ್ರಚಾರ ಮಾಡಿದ್ದು, ನಾವುಗಳು ಅದನ್ನು ಅಲ್ಲಿಗೆ ನಿಲ್ಲಿಸಬಾರದು, ಅದನ್ನು ಆಂದೋಲನದ ರೀತಿ ಒಂದು ವರ್ಷದವರೆಗೂ ನಡೆಸಿ ಸರ್ಕಾರದ ಗಮನಸೆಳೆಯುವ ಮೂಲಕ ಸರ್ಕಾರವೇ ಮಣ್ಣು ಉಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಸೈಕಲ್ ಸವಾರ ಸಾಮ್ರಾಟ್ ಸಿಂಗ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಾಜಿ ಸೈನಿಕರ ಸಮಸ್ಯೆ ಬಗೆಹರಿಸಲು ಸದಾ ಬದ್ಧ

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಭರವಸೆ



ಮೈಸೂರು, ಜೂ.25– ಸರ್ಕಾರದಿಂದ ಮಾಜಿ ಸೈನಿಕರಿಗೆ ಸಲ್ಲಬೇಕಾಗಿರುವ ಸವಲತ್ತುಗಳನ್ನು ಕಲ್ಪಿಸಲು ನಾನು ಸದಾ ಬದ್ಧನಾಗಿದ್ದು, ಪ್ರತಿಯೊಬ್ಬರು ರಾಷ್ಟ್ರಪ್ರೇಮ ಬೆಳೆಸಿಕೊಳ್ಳುವುದರ ಜೊತೆಗೆ ಒಗ್ಗಟ್ಟಿನಿಂದ ಹೋರಾಟ ಮಾಡಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ವಿವೇಕಾನಂದನಗರದಲ್ಲಿರುವ ನಾಗಮ್ಮ ಕಲ್ಯಾಣ ಮಂಟಪದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕದ ವತಿಯಿಂದ ನಡೆದ 2021–22ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಭಾಷಣಕಾರನಲ್ಲ. ನಾನೊಬ್ಬ ಸೈನಿಕ. ನನಗೆ ಗೊತ್ತಿರುವುದು 'ಮಾಡು ಇಲ್ಲವೇ ಮಡಿ' ಎಂಬುದು ಮಾತ್ರ ಇಂದು ಸೈನಿಕರಿಗೆ ಬೆಲೆ ಇಲ್ಲದಂತಾಗಿದೆ. ಸೈನಿಕರ ಜೀವವನ್ನು ಬಲಿಕೊಟ್ಟು ಅಧಿಕಾರ ಹಿಡಿಯುವ ಪರಿಸ್ಥಿತಿ ಇಂದಿನ ರಾಜಕಾರಣದಲ್ಲಿದೆ. ದೇಶ ನಮಗೆ ಎಲ್ಲವನ್ನು ಕೊಡುತ್ತಿದೆ ಆದರೆ ನಮಗೆ ತಲುಪುತ್ತಿಲ್ಲ. ಆದ್ದರಿಂದ ನಮ್ಮ ಹಕ್ಕುಗಳನ್ನು ಹೋರಾಟ ಮಾಡಿ ಪಡೆದುಕೊಳ್ಳುವುದು ಅನಿವಾರ್ಯವಾಗಿದೆ.

ಸೈನಿಕರ ವಿಷಯ ಬಂದಾಗ ನಾನು ರಾಜೀ ಆಗುವುದಿಲ್ಲ. ಮಾಜಿ ಸೈನಿಕರಿಗೆ ಸಿಗುವ ಸೌಲಭ್ಯ ಅವರ ವಿಧವೆ ಹೆಂಡತಿಯರಿಗೂ ಸಿಗಬೇಕು. ಮುಡಾದಲ್ಲಿ ಮಾಜಿ ಸೈನಿಕರ ನಿವೇಶನ, ಮನೆ ಕಂದಾಯದಲ್ಲಿ ಶೇ.50 ರಿಯಾಯಿತಿ ಸಿಗುವಂತೆ ಮಾಡಿಸಿದ್ದೇನೆ. ಮುಡಾದಿಂದ ಮಾಜಿ ಸೈನಿಕರ ಸಂಘಕ್ಕೆ ನೀಡುವ ಸಿ.ಎ. ನಿವೇಶನದ ಪೂರ್ಣ ಹಣವನ್ನು ನಾನು ಭರಿಸುತ್ತೇನೆ. ಮಾಜಿ ಸೈನಿಕರಿಗೆ ಹುಣಸೂರಿನಲ್ಲಿ ನೀಡುವ ಉಚಿತ ಭೂಮಿ, ನಿವೇಶನಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಅದನ್ನು ಕಲ್ಪಿಸಲು ಪ್ರಯತ್ನಿಸುತ್ತೇನೆ. ಈ ಸಂಘ ಉತ್ತಮವಾಗಿ ಬೆಳೆದು ರಾಜ್ಯಕ್ಕೆ ಮಾದರಿ ಸಂಘವಾಗಲಿ ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮಾಜಿ ಸೈನಿಕರ ಮಕ್ಕಳನ್ನು ಅಭಿನಂದಿಸಲಾಯಿತು. ಸೇನೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಯೋಧರಿಗೆ 'ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಡಾ॥ ಎನ್. ಕೆ.ಶಿವಣ್ಣ ಪ್ರಧಾನ ಕಾರ್ಯದರ್ಶಿ ಎ.ಆರ್. ರಮೇಶ್, ಜಿಲ್ಲಾ ಅಧ್ಯಕ್ಷ ಕೆ.ಪಿ. ದಿವಾಕರ್, ಉಪಾಧ್ಯಕ್ಷರಾದ ಎಂ.ಕೆ.ಅಣ್ಣೇಗೌಡ, ಶಿವಕುಮಾರ್ ಎಸ್, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ ಹೆಚ್.ಎಸ್, ಖಜಾಂಚಿ ಜೀವನ್ ಕೆ.ಇ, ರಜನಿಸುಬ್ಬಯ್ಯ, ಅಪೆಕ್ಸ್ ಶ್ರೀನಿವಾಸ್, ಮಹಾದೇವ್, ದಿನೇಶ್‌ಕುಮಾರ್, ಸಂಘದ ಇತರೆ ಪದಾಧಿಕಾರಿಗಳು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ವ್ಯಾಪಾರಿ : "ಸೊಳ್ಳೆ ಪರದೆ ತಗೊಳ್ಳಿ"
ಗಿರಾಕಿ : "ಚೆನ್ನಾಗಿದೆಯಾ?"
ವ್ಯಾಪಾರಿ : "ಸ್ವಾಮಿ ಚೆನ್ನಾಗಿದೆಯಾ ಅಂದ್ರ? ಒಂದು ಸೊಳ್ಳೇನೂ ಒಳಗೆ ನುಗ್ಗುವುದಕ್ಕೆ ಆಗಲ್ಲ. ಹಾಗಿದೆ"
ಗಿರಾಕಿ : "ಹೌದೇನ್ರೀ, ಹಾಗಾದರೆ ಬೇಡ. ಸೊಳ್ಳೆಯೇ ನುಗ್ಗದ ಮೇಲೆ ನಾವು ಹೇಗೆ ನುಗ್ಗುವುದು?"

ಮೈಸೂರು ಮಿತ್ರ
ಭಾನುವಾರ, 26 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಜಗತ್ತಿನಲ್ಲಿ ಯಾರು ಏನನ್ನೂ ಕಳೆದುಕೊಂಡಿಲ್ಲವೋ, ಅವನು ಏನನ್ನೂ ಪಡೆದಿಲ್ಲ. – ರವೀಂದ್ರನಾಥ್ ಟಾಗೂರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಂಬೋಕೆ ಮಾಡಿದ್ದು ಶಾಸ್ತ್ರ, ಉಂಬೋಕೆ ಮಾಡಿದ್ದು ಅನ್ನ

ನಿಮ್ಮ ಪತ್ರಗಳು

ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಿಲ್ಲವೇ...?

ಮಾನ್ಯರೇ,

ಮೈಸೂರು ನಗರದ ಹೃದಯ ಭಾಗವಾದ ಕೆ.ಆರ್. ವೃತ್ತ, ಟೌನ್‌ಹಾಲ್, ಅಶೋಕ ರಸ್ತೆ ದೇವರಾಜ ಅರಸು ರಸ್ತೆ ಹಾಗೂ ಸಯ್ಯಾಜಿ ರಾವ್ ರಸ್ತೆ ಸುತ್ತಮುತ್ತ ಪ್ರತಿನಿತ್ಯ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಸವಾರರು ತಮ್ಮ ವಾಹನಗಳ ಪಾರ್ಕಿಂಗ್‌ಗೆ ಸ್ಥಳ ಹುಡುಕಲು ಹರಸಾಹಸ ಪಡುತ್ತಾರೆ. ಇದೊಂದು ಯಾತನಾಮಯ ಕೆಲಸವೇ ಸರಿ.



ಈ ರೀತಿಯ ಸಮಸ್ಯೆಯ ಬಗ್ಗೆ ಸಾಕಷ್ಟು ಬಾರಿ ಪತ್ರಿಕೆಗಳು, ಮಾಧ್ಯಮಗಳಲ್ಲಿ ಸುದ್ದಿ ಬಂದಿರುವುದನ್ನು ನಾವು–ನೀವು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ನೋಡಿದ್ದಾರೆ. ಇನ್ನು ಟೌನ್‌ಹಾಲ್‌ನಲ್ಲಿ ಬಹುಮಹಡಿ ವಾಹನ ನಿಲ್ದಾಣದ ಕಾಮಗಾರಿ ಸಂಪೂರ್ಣವಾಗದೆ ಇರುವುದು ಒಂದು ಕಡೆಯಾದರೆ, ಟೌನ್‌ಹಾಲ್ ಆವರಣದಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ನೀಡದೆ ಟೌನ್‌ಹಾಲ್ ಗೇಟಿಗೆ ಬೀಗ ಹಾಕಿರುವುದು ಯಾವ ನ್ಯಾಯ?

ಅಧಿಕಾರಿಗಳಿಗೆ, ಸಂಬಂಧಪಟ್ಟವರಿಗೆ ದಿನನಿತ್ಯ ಮೈಸೂರು ನಗರದ ಹೃದಯ ಭಾಗದಲ್ಲಿ ತಮ್ಮ ಕೆಲಸ ಕಾರ್ಯಗಳಿಗೆ ಆಗಮಿಸುವ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಸವಾರರು ಪಾರ್ಕಿಂಗ್ ಜಾಗಕ್ಕಾಗಿ ಬವಣೆ ಪಡುವುದು ಕಾಣುವುದಿಲ್ಲವೆ?

ನಗರಪಾಲಿಕೆ ಈ ಹಿಂದೆ ಈ ಜಾಗವನ್ನು ಖಾಸಗಿಯವರಿಗೆ ಟೆಂಡರ್ ನೀಡಿದ್ದ ಸಂದರ್ಭದಲ್ಲಿ ಟೌನ್‌ಹಾಲ್ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಅವಕಾಶ ನೀಡಿದ್ದರು. ಟೆಂಡರ್ ಮುಗಿದ ನಂತರ ಗೇಟುಗಳಿಗೆ ಬೀಗ ಜಡಿದು ಏನು ಸಾಧಿಸುತ್ತಿದ್ದಾರೆ ಎಂಬುದು ಆ ದೇವರೇ ಬಲ್ಲ!

ಈ ಕೂಡಲೇ ಅಧಿಕಾರಿ ವರ್ಗದವರು ಸಾರ್ವಜನಿಕರಿಗೆ ಟೌನ್‌ಹಾಲ್‌ನ ಆವರಣದಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಅವಕಾಶ ಮಾಡಿಕೊಟ್ಟು, ಸಾರ್ವಜನಿಕರ ಬವಣೆಗೆ ಸ್ವಲ್ಪವಾದರೂ ಪರಿಹಾರ ನೀಡುವ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

–ಗೋಕುಲ್ ಗೋವರ್ಧನ್ ಕೆ, ವಕೀಲರು, ಸಂಚಾಲಕರು ಟೀಂ ಮೈಸೂರು

ಕೇಂದ್ರದ ಅಗ್ನಿಪಥ್ ಉತ್ತಮ ಯೋಜನೆ

ಮಾನ್ಯರೆ,

ಕೇಂದ್ರ ಸರಕಾರ ಅಗ್ನಿಪಥ್ ಯೋಜನೆ ಜಾರಿಗೆ ತಂದಿರುವುದು ಸ್ವಾಗತಾರ್ಹ. ಈ ಯೋಜನೆ ಮೂಲಕ 17 ರಿಂದ 21 ವರ್ಷದೊಳಗಿನ ಯುವಜನರಿಗೆ 4 ವರ್ಷದ ಅವಧಿಗೆ ಸೇನೆಯ ತ್ರಿವಿಧ ದಳಗಳಲ್ಲಿ ಸೇವೆ ಮಾಡಲು ಅವಕಾಶ ಸಿಗಲಿದೆ. ಮೊದಲ ಬ್ಯಾಚ್‌ನ್ನು ಮುಂದಿನ 3 ತಿಂಗಳಲ್ಲಿ 45 ಸಾವಿರ ಯುವ ಜನರನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದು ಉದ್ಯೋಗಾವಕಾಶ ನೀಡುವುದರ ಜೊತೆಗೆ ದೇಶದ ರಕ್ಷಣಾ ಸೇವೆ ಮಾಡಬೇಕೆಂಬ ಯುವಜನರ ಆಸೆ ಈಡೇರಲಿದೆ. ಇದರಲ್ಲಿ ಪ್ರತಿ ಬ್ಯಾಚ್‌ನ ಶೇ.25 ರಷ್ಟು ಜನರಿಗೆ ಖಾಯಂ ಉದ್ಯೋಗ ನೀಡಲಿದ್ದಾರೆ. ರಕ್ಷಣಾ ಇಲಾಖೆಗೆ ನಿಯೋಜಿಸುವ ವಾರ್ಷಿಕ ಬಜೆಟ್‌ನ ಅರ್ಧದಷ್ಟು ಹಣ ಪಿಂಚಣಿ ಮತ್ತು ವೇತನ ನೀಡಲು ವ್ಯಯವಾಗುತ್ತಿದೆ. ಅಗ್ನಿಪಥ್ ಯೋಜನೆಯಲ್ಲಿ ಸೇವೆ ಸಲ್ಲಿಸಿದವರಿಗೆ ಪಿಂಚಣಿ ಸೌಲಭ್ಯ ಇರುವುದಿಲ್ಲ. ಇದರಿಂದ ಇಲಾಖೆ ಮೇಲಿನ ಆರ್ಥಿಕ ಭಾರ ಕಡಿಮೆಯಾಗಲಿದ್ದು, ಉಳಿದ ಹಣವನ್ನು ಮೂರು ಸೇನೆಗಳ ಆಧುನೀಕರಣಕ್ಕೆ ವ್ಯಯ ಮಾಡಿ ಸೇನೆಗಳ ಸಾಮರ್ಥ್ಯ ಹೆಚ್ಚಿಸಬಹುದಾಗಿದೆ.

–ಚನ್ನಕೇಶವ ಜಿ, ಕೆ. ತರೀಕೆರೆ

ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಬಡವರಿಗೂ ಸಿಗುತ್ತಿದೆ ಹೈಟೆಕ್ ಟ್ರೀಟ್‌ಮೆಂಟ್..!

ಮಾನ್ಯರೆ,

ಇಂದಿನ ವ್ಯವಸ್ಥೆಯಲ್ಲಿ ಆಸ್ಪತ್ರೆ ಎಂದಾಕ್ಷಣ ಬಡವರಿಗೆ ಹಾಗೂ ಮಧ್ಯಮ ವರ್ಗದವರಿಗೆ ಒಂದು ರೀತಿಯ ಭಯ. ಏಕೆಂದರೆ ಇಂದು ಯಾವುದೇ ಒಂದು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಹೋದರೆ ನಮ್ಮ ಮನಸ್ಸಿಗೆ ಘಾಸಿಯಾಗುವಷ್ಟು ಸುಲಿಗೆ ಮಾಡಲಾಗುತ್ತದೆ. ಅದರಲ್ಲೂ ಹೈಟೆಕ್ ಆಸ್ಪತ್ರೆಗಳಿಗೆ ಹೋದರೆ ಮುಗಿತು ನಮ್ಮ ಕಥೆ.

ಏಕೆಂದರೆ ಇಂತಹ ಆಸ್ಪತ್ರೆಗಳಲ್ಲಿ ಎಲ್ಲಾ ಸೌಲಭ್ಯಗಳಿರುವುದರಿಂದ ನಾವು ಬದುಕಿ ಬರಬಹುದೆಂದು ಆಸೆಯಿಂದ ಹೋಗುತ್ತೇವೆ. ಅಕಸ್ಮಾತ್ ನಾವು ಬದುಕಿ ಬಂದರೂ ನಮ್ಮ ಆರ್ಥಿಕ ಪರಿಸ್ಥಿತಿ ಸತ್ತು ಹೋಗಿರುತ್ತದೆ. ಅಂದರೆ ಅಲ್ಲಿನ ಶುಲ್ಕ ಕಟ್ಟಲು ಮನೆ, ಹೊಲ, ಗದ್ದೆ ಮಾರಬೇಕಾಗಿ ಬರುವುದರಿಂದ ನಾವು ಬದುಕಿದ್ದರೂ ಸತ್ತಂತೆ ಎನ್ನುವಂತಾಗುತ್ತದೆ.

ಇಂತಹ ವ್ಯವಸ್ಥೆಯಲ್ಲಿ ಮೈಸೂರು ನಗರದಲ್ಲಿ ಬಡವರ ಪಾಲಿನ ಸಂಜೀವಿನಿಯಂತೆ ತಲೆಯೆತ್ತಿರುವ ಜಯದೇವ ಹೃದ್ರೋಗ ಆಸ್ಪತ್ರೆ ಯಾವುದೇ ಖಾಸಗಿ ಹೈಟೆಕ್ ಆಸ್ಪತ್ರೆಗೂ ಕಮ್ಮಿ ಇಲ್ಲದಂತೆ ಸದಾ ಎಲ್ಲರ ಸೇವೆ ಸಲ್ಲಿಸುತ್ತಾ ಬಂದಿದೆ. ಈ ಆಸ್ಪತ್ರೆಗೆ ಬರುವವರಲ್ಲಿ ಬಡವರು, ಶ್ರೀಮಂತರು ಎಂಬ ಭೇದ–ಭಾವವಿಲ್ಲ. ಎಲ್ಲರೂ ಒಂದೇ.

ರೋಗಿ ಯಾವುದೇ ಹೊತ್ತಿನಲ್ಲಿ ತುರ್ತು ಚಿಕಿತ್ಸೆಗೆಂದು ಬಂದರೆ ಅಲ್ಲಿ ಮೊದಲು ಟ್ರೀಟ್‌ಮೆಂಟ್, ನಂತರ ಕೈಗೆಟುಕುವಷ್ಟು ಶುಲ್ಕ ಕಟ್ಟಿ ಅನ್ನುತ್ತಾರೆ ವೈದ್ಯರು. ಅಕಸ್ಮಾತ್ ವ್ಯಕ್ತಿಗೆ ತುರ್ತು ಚಿಕಿತ್ಸೆ ಅಗತ್ಯವಿದ್ದು, ಅವನಲ್ಲಿ ಹಣವಿಲ್ಲದಿದ್ದರೂ ಅಂತಹವರಿಗೂ ಚಿಕಿತ್ಸೆ ನಿಲ್ಲದು. ಇದಕ್ಕೆ ನನ್ನದೊಂದು ಅನುಭವವೇ ಸಾಕ್ಷಿ.

ನಾನು ಎದೆನೋವಿನಿಂದ ಬಳಲುತ್ತಿದ್ದು, ಜೂನ್ 19ರ ಮಧ್ಯರಾತ್ರಿ 2.30ರ ಸಮಯದಲ್ಲಿ ಜಯದೇವ ತುರ್ತು ಚಿಕಿತ್ಸಾ ಘಟಕಕ್ಕೆ ಹೋದೆ. ಈ ವೇಳೆ ಕರ್ತವ್ಯದಲ್ಲಿದ್ದ ಡಾ.ಸೌಜನ್ಯ ಎಂಬುವವರು ನನ್ನನ್ನು ಸೌಜನ್ಯದಿಂದಲೇ ಮಾತನಾಡಿಸಿ ಧೈರ್ಯ ತುಂಬಿ, ನಿಮಗೇನೂ ಆಗಿಲ್ಲ. ಈಗ ಆಸ್ಪತ್ರೆಗೆ ತಲುಪಿದ್ದೀರಿ. ನಾವಿದ್ದೇವೆ ಹೆದರಬೇಡಿ ಎಂದು ಧೈರ್ಯ ತುಂಬಿದರು. ಅವರ ಈ ಮಾತುಗಳು ನನಗೆ ಅರ್ಧ ಸಮಸ್ಯೆ ಕಡಿಮೆಯಾದಂತೆ ಮಾಡಿತು. ತಕ್ಷಣ ನನಗೆ ಇಸಿಜಿ ಹಾಗೂ ರಕ್ತ ಪರೀಕ್ಷೆ ನಡೆಸಿ ನಂತರ ಅವರ ಸೀನಿಯರ್ ವೈದ್ಯರಿಗೆ ಅಷ್ಟೊತ್ತಿನಲ್ಲೇ ಮಾಹಿತಿ ರವಾನಿಸಿ ನಿಮಗೇನೂ ಆಗಿಲ್ಲ ಧೈರ್ಯದಿಂದ ಇರಿ ಎಂದೇಳಿ ನನಗೆ ಟ್ರೀಟ್‌ಮೆಂಟ್ ಕೊಟ್ಟು ಬೆಳಗಿನ ಜಾವ 8 ಗಂಟೆಗೆ ಮನೆಗೆ ವಾಪಸ್ ಕಳುಹಿಸಿದರು.

ನಾನು ಹೋದ ಸಮಯದಲ್ಲೇ ಮತ್ತೆ ಮೂವರು ಆಸ್ಪತ್ರೆಗೆ ಬಂದರು. ಅವರಿಗೂ ಹಣ ಕೇಳದೆ ಮೊದಲು ಇಸಿಜಿ ಮಾಡಿಸಿ ನಂತರ ಹಣ ಕಟ್ಟಿ ಎಂದೇಳಿದರಲ್ಲದೆ ಒಬ್ಬ ಬಡ ಹೆಂಗಸಿನ ಪರಿಸ್ಥಿತಿ ನೋಡಿ ಅವರಲ್ಲಿ ಹಣ ಕೇಳಬೇಡಿ ಎಂದ ವೈದ್ಯೆ ಸೌಜನ್ಯ ಅವರು ತಮ್ಮ ಆಸ್ಪತ್ರೆಯ ಘನತೆಯನ್ನು ಎತ್ತಿ ಹಿಡಿದರು. ಇಂಥ ವ್ಯವಸ್ಥೆಗೆ ಕಾರಣಕರ್ತರಾದ ಜಯದೇವ ಆಸ್ಪತ್ರೆ ಮುಖ್ಯಸ್ಥ ಡಾ.ಮಂಜುನಾಥ್ ಹಾಗೂ ಡಾ.ಸದಾನಂದ ಅವರಿಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು.

–ಎಂ.ಮಹೇಶ್, ನಿಲಸೋಗೆ, ಗಿರಿದರ್ಶಿನಿ ಬಡಾವಣೆ, ಮೈಸೂರು.

ನರೇಂದ್ರ ಮೋದಿ 19 ವರ್ಷ ಮೌನವಾಗಿ ವಿಷಕಂಠನಂತೆ ನೋವು ಸಹಿಸಿಕೊಂಡರು...

2002ರ ಗುಜರಾತ್ ಗಲಭೆ ತೀರ್ಪಿನ ಬಗ್ಗೆ ಅಮಿತ್ ಶಾ ಭಾವುಕ ನುಡಿ



ಮೋದಿ ಅಮಿತ್ ಶಾ

ನವದೆಹಲಿ, ಜೂ.25– 2002ರ ಗುಜರಾತ್ ದಂಗೆಯ ಮೂಲ ಕಾರಣ ಗೋಧ್ರಾ ರೈಲಿಗೆ ಬೆಂಕಿ ಹಚ್ಚಿದ್ದು. 16 ದಿನದ ಮಗು ಸೇರಿದಂತೆ 59 ಮಂದಿ ಸಜೀವ ದಹನವಾಗಿದ್ದರು. ಆಗ ಮೆರವಣಿಗೆ ಮಾಡಿರಲಿಲ್ಲ, ಮೃತದೇಹಗಳನ್ನು ಸಿವಿಲ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ನಂತರ ಮುಚ್ಚಿದ ಆಂಬುಲೆನ್ಸ್‌ನಲ್ಲಿ ಮೃತದೇಹಗಳನ್ನು ಅವರ ಕುಟುಂಬಸ್ಥರಿಗೆ ಒಪ್ಪಿಸಲಾಯಿತು ಎಂದು ಗೃಹ ಸಚಿವ ಅಮಿತ್ ಶಾ ಅಂದಿನ ಘಟನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಎಎನ್‌ಐ ಸುದ್ದಿಸಂಸ್ಥೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು, 2002ರ ಗುಜರಾತ್ ಗಲಭೆ ಏಕಾಯಿತು, ಹೇಗಾಯಿತು, ನಂತರದ ಪರಿಣಾಮಗಳ ಬಗ್ಗೆ ವಿವರವಾಗಿ ಮಾತನಾಡಿದ್ದಾರೆ.

2002ರಲ್ಲಿ ಗುಜರಾತ್‌ನಲ್ಲಿ ರಾಜ್ಯದಲ್ಲಿ ನಡೆದ ಗಲಭೆಯಲ್ಲಿ ಆಗಿನ ಗುಜರಾತ್ ಮುಖ್ಯಮಂತ್ರಿ, ಇಂದಿನ ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ಹಲವರಿಗೆ ಎಸ್‌ಐಟಿ ನೀಡಿದ್ದ ಕ್ಲೀನ್ ಚಿಟ್ ಅನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಸುಪ್ರೀಂಕೋರ್ಟ್ ತೀರ್ಪನ್ನು ಅಮಿತ್ ಶಾ ಶ್ಲಾಘಿಸಿದ್ದಾರೆ.

ಪ್ರಧಾನಿ ಮೋದಿ ಅವರು ಕಳೆದ 19 ವರ್ಷಗಳಿಂದ ಒಂದು ಮಾತನ್ನೂ ಮಾತನಾಡದೆ ನೋವನ್ನು ಸಹಿಸಿಕೊಂಡಿದ್ದಾರೆ. ವಿಷವನ್ನು ನುಂಗಿ ಅದನ್ನು ತನ್ನ ಗಂಟಲಿನಲ್ಲಿ ಹಿಡಿದಿಟ್ಟುಕೊಂಡಿರುವ ಶಿವನಂತೆ ಮೋದಿಯವರಿದ್ದರು ಎಂದು ಶ್ಲಾಘಿಸಿದ್ದಾರೆ. ಪ್ರಕರಣದ ಬಗ್ಗೆ ಸತ್ಯ ಹೊರಬಂದಿದ್ದು, ಚಿನ್ನದಂತೆ ಹೊಳೆಯುತ್ತಿದೆ ಎಂದು ಅಮಿತ್ ಶಾ ಹೇಳಿದರು.

ಸುಪ್ರೀಂಕೋರ್ಟ್ ಎಲ್ಲಾ ಆರೋಪಗಳನ್ನು ತಳ್ಳಿಹಾಕಿದೆ, ಆರೋಪಗಳನ್ನು ಏಕೆ ಮಾಡಲಾಗಿದೆ ಎಂದು ಹೇಳಿದೆ. ಆರೋಪಗಳನ್ನು ರಾಜಕೀಯ ಪ್ರೇರಿತ ಎಂದು ನೀವು ಹೇಳಬಹುದು, ಇದು ಸಹ ಸಾಬೀತಾಗಿದೆ. ಇದು 19 ವರ್ಷಗಳ ಹೋರಾಟ ಎಂದರು.

ಆರೋಪಗಳನ್ನು ಎದುರಿಸುತ್ತಿರುವ ಮೋದಿಜಿ ಈ ನೋವನ್ನು ಸಹಿಸಿಕೊಳ್ಳುವುದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ನ್ಯಾಯಾಂಗ ಪ್ರಕ್ರಿಯೆ ನಡೆಯುತ್ತಿದ್ದರಿಂದ ಅವರು ಮಾತನಾಡಲಿಲ್ಲ. ದೃಢವಾದ ಹೃದಯ ಹೊಂದಿರುವ ವ್ಯಕ್ತಿ ಮಾತ್ರ ಇದನ್ನು ಮಾಡಬಹುದು. ಇಂದು ನಾವು ಮಾಡುತ್ತಿರುವ ಸಂದರ್ಶನವನ್ನು ನಾನು 2003 ರಲ್ಲಿ ಗುಜರಾತ್ ಗೃಹ ಸಚಿವನಾಗಿ ಮತ್ತು ನಂತರ ಪಕ್ಷದ ಮುಖ್ಯಸ್ಥನಾಗಿ ಮಾಡಬಹುದಿತ್ತು ಆದರೆ ನ್ಯಾಯಾಂಗ ಪ್ರಕ್ರಿಯೆ ಮುಗಿಯುವವರೆಗೂ ಮೋದಿಜಿ ಯಾವುದೇ ಪ್ರಭಾವ ಬೀರದಂತೆ ಏನನ್ನೂ ಹೇಳಲಿಲ್ಲ. ಇದೆಲ್ಲವನ್ನೂ ಅವರು ಮೌನವಾಗಿ ಸಹಿಸಿಕೊಂಡರು ಎಂದರು.

ಬಿಜೆಪಿಯ ರಾಜಕೀಯ ವಿರೋಧಿಗಳು, ರಾಜಕೀಯ ಪ್ರೇರಿತ ಪತ್ರಕರ್ತರು ಮತ್ತು ಸರ್ಕಾರೇತರ ಸಂಘಟನೆಗಳು(ತ್ರಿಕೂಟ) ಒಟ್ಟಾಗಿ ಬಿಜೆಪಿ ಮತ್ತು ಅದರ ನಾಯಕರ ವಿರುದ್ಧ ಗಲಭೆ ಪ್ರಕರಣದಲ್ಲಿ ಆರೋಪ ಮಾಡಿದರು. ತಮ್ಮ ಮೇಲೆ ಸುಳ್ಳು ಆರೋಪ ಹೊರಿಸಿದ್ದರೂ ಕೂಡ ಬಿಜೆಪಿಗೆ ಗುಜರಾತ್‌ನ ಜನರ ಮೇಲೆ ನಂಬಿಕೆಯಿತ್ತು, ಅಲ್ಲಿನ ಜನರು ಮಾತ್ರ ಬಿಜೆಪಿಯ ಕೈಬಿಡಲಿಲ್ಲ ಎಂದು ಅಮಿತ್ ಶಾ ಹೇಳಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪನ್ನು ಬಹಳ ಎಚ್ಚರಿಕೆಯಿಂದ ಓದಿದ್ದೇನೆ. ತೀರ್ಪಿನಲ್ಲಿ ತೀಸ್ತಾ ಸೆಟಲ್ವಾಡ್ ಹೆಸರನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆಕೆಯು ನಡೆಸುತ್ತಿದ್ದ ಎನ್‌ಜಿಒ (ನನಗೆ ಎನ್‌ಜಿಒ ಹೆಸರು ನೆನಪಿಲ್ಲ) ಗಲಭೆಯ ಬಗ್ಗೆ ಆಧಾರರಹಿತ ಮಾಹಿತಿಯನ್ನು ಪೊಲೀಸರಿಗೆ ನೀಡಲಾಗಿತ್ತು ಎಂದು ಶಾ ಹೇಳಿದ್ದಾರೆ.

ತ್ರಿಕೂಟದ ನಂಟಿನಿಂದ ಸಾರ್ವಜನಿಕರು ಮಾತ್ರ ವಂಚಿತರಾಗಿಲ್ಲ, ಇಂದಿಗೆ ಈ ಘಟನೆ ನಡೆದು 20 ವರ್ಷಗಳಾಗಿವೆ. ಜನರ ಆದೇಶವೇ ದೊಡ್ಡದು, ಸಾರ್ವಜನಿಕರು ಎಲ್ಲವನ್ನೂ ನೋಡುತ್ತಾರೆ. ದೇಶದ 130 ಕೋಟಿ ಜನರಿಗೆ 260 ಕೋಟಿ ಕಣ್ಣುಗಳು ಮತ್ತು 260 ಕೋಟಿ ಕಿವಿಗಳಿವೆ. ಅವರು ಎಲ್ಲವನ್ನೂ ನೋಡುತ್ತಾರೆ ಮತ್ತು ಕೇಳುತ್ತಾರೆ, ನಾವು ಎಂದಿಗೂ ಚುನಾವಣೆಯಲ್ಲಿ (ಗುಜರಾತ್‌ನಲ್ಲಿ) ಸೋತಿಲ್ಲ. ಸಾರ್ವಜನಿಕರು ಈ ಆರೋಪಗಳನ್ನು ಎಂದಿಗೂ ಸ್ವೀಕರಿಸುವುದಿಲ್ಲ ಎಂದು ಹೇಳಿದ್ದಾರೆ.

ಗುಜರಾತ್ ಪೊಲೀಸರಿಂದ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆತಲ್ವಾಡ್ ಬಂಧನ



ಮುಂಬೈ, ಜೂ.25– ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆತಲ್ವಾಡ್ ಅವರನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು ಬಂಧಿಸಿದೆ.

ಸ್ವಯಂ ಸೇವಾ ಸಂಸ್ಥೆಯೊಂದರ ಮೇಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈನಲ್ಲಿರುವ ತೀಸ್ತಾ ಸೆತಲ್ವಾಡ್ ಅವರ ನಿವಾಸಕ್ಕೆ ಭೇಟಿ ನೀಡಿದ ಗುಜರಾತಿನ ಭಯೋತ್ಪಾದನಾ ನಿಗ್ರಹದಳ ಅವರನ್ನು ಬಂಧಿಸಿದೆ. ನಂತರ ಆಕೆಯನ್ನು ಸಾಂತಾ ಕ್ರೂಜ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ. 2002ರ ಗುಜರಾತ್ ಗಲಭೆ ಬಗ್ಗೆ ತೀಸ್ತಾ ಸೆತಲ್ವಾಡ್, ಪೊಲೀಸರಿಗೆ ಆಧಾರ ರಹಿತ ಮಾಹಿತಿ ನೀಡಿದ್ದಾರೆ. ಅಲ್ಲದೆ ಪ್ರಧಾನಿ ಮೋದಿಯವರ ಪ್ರತಿಷ್ಠೆಗೆ ಕಳಂಕ ತರುವಂತೆ ಅವರು ಪ್ರಚಾರ ನಡೆಸಲು ಸಹಾಯ ಮಾಡಿದ್ದಾರೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಆರೋಪಿಸಿದ ಕೆಲವೇ ಗಂಟೆಗಳಲ್ಲಿ ತೀಸ್ತಾ ಅವರನ್ನು ಬಂಧಿಸಲಾಗಿದೆ.

2002ರ ಗುಜರಾತ್ ಗಲಭೆಯಲ್ಲಿ ದೊಡ್ಡ ಪಿತೂರಿ ನಡೆದಿದೆ ಎಂದು ಹತ್ಯೆಯಾದ ಕಾಂಗ್ರೆಸ್ ನಾಯಕ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾಗೊಳಿಸಿತ್ತು. ಗಲಭೆಗೆ ಸಂಬಂಧಿಸಿ ಮೋದಿ ಸೇರಿ 64 ಜನರಿಗೆ ಎಸ್‌ಐಟಿ ಕ್ಲೀನ್‌ಚಿಟ್ ನೀಡಿದ್ದನ್ನು ಪ್ರಶ್ನಿಸಿ ಜಾಫ್ರಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರಲ್ಲಿ ತೀಸ್ತಾ ಕೂಡ ಒಬ್ಬರಾಗಿದ್ದರು. ಗಲಭೆ ನಡೆದ ಅವಧಿಯಲ್ಲಿ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದರು.

ಸಂದರ್ಶನವೊಂದರಲ್ಲಿ ಮಾತನಾಡಿದ್ದ ಕೇಂದ್ರ ಸಚಿವ ಅಮಿತ್ ಶಾ, ನಾನು ತೀರ್ಪನ್ನು ಬಹಳ ಎಚ್ಚರಿಕೆಯಿಂದಲೇ ಓದಿದ್ದೇನೆ. ಅದರಲ್ಲಿ ತೀಸ್ತಾ ಸೆತಲ್ವಾಡ್ ಅವರ ಹೆಸರನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಅವರು ನಡೆಸುತ್ತಿರುವ ಎನ್‌ಜಿಒ ಹೆಸರು ನನಗೆ ನೆನಪಿಲ್ಲ. ಆದರೆ ಗಲಭೆಯ ಬಗ್ಗೆ ಆಧಾರ ರಹಿತ ಮಾಹಿತಿಯನ್ನು ಪೊಲೀಸರಿಗೆ ನೀಡಿರುವ ಬಗ್ಗೆ ಮಾಹಿತಿ ಇತ್ತು ಎಂದು ಹೇಳಿರುವುದಾಗಿ ವರದಿಯಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇನ್ನು 'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ'

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಮರು ನಾಮಕರಣ ಮಾಡಲಾಗಿದ್ದು, ಈ ಕುರಿತು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದಾರೆ.

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಎಂದು ಕರೆಯಲ್ಪಡುವ ಇಲಾಖೆಯನ್ನು ಇನ್ನು ಮುಂದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯನ್ನಾಗಿ ಮರು ನಾಮಕರಣ ಮಾಡಲಾಗಿದೆ.

ಈ ಕುರಿತಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದು, 'ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ 12ನೇ ತರಗತಿಯವರೆಗಿನ ಶಿಕ್ಷಣವು ಶಾಲಾ ಶಿಕ್ಷಣದ ವ್ಯಾಪ್ತಿಗೊಳಪಡುತ್ತದೆ. 'ರಾಷ್ಟ್ರೀಯ ಶಿಕ್ಷಣ ನೀತಿ–2020' ರಲ್ಲಿಯೂ ಸಹ ಈ ಅಂಶವನ್ನು ಪುನರುಚ್ಛರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ (ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನೊಳಗೊಂಡಂತೆ) ಪದನಾಮವನ್ನು ಶಾಲಾ ಶಿಕ್ಷಣ ಇಲಾಖೆ ಎಂದು ಬದಲಾಯಿಸುವುದು ಸೂಕ್ತ ಎಂದು ವಿವಿಧ ಹಂತದ ಚರ್ಚೆಯಲ್ಲಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದ್ದಾರೆ.

ಅಂತೆಯೇ ಈಗಾಗಲೇ ಕೇಂದ್ರ ಸರ್ಕಾರ ಹಾಗೂ ಹೆಚ್ಚಿನ ರಾಜ್ಯಗಳಲ್ಲಿ 'ಶಾಲಾ ಶಿಕ್ಷಣ ಇಲಾಖೆ ಎಂಬ ಪದನಾಮ ರೂಢಿಯಲ್ಲಿರುವುದರಿಂದ ಕರ್ನಾಟಕ ರಾಜ್ಯದಲ್ಲಿಯೂ ಸಹ ಇದೇ ಮಾದರಿಯನ್ನು ಅಳವಡಿಸಲು ಸೂಚಿಸಲಾಗಿದೆ ಎಂದು ಹೇಳಲಾಗಿದೆ.

ಹುಣಸೂರಲ್ಲಿ ಅಪೋಲೊ ತುರ್ತು ಚಿಕಿತ್ಸೆ, ಡೇ ಕೇರ್ ಸೆಂಟರ್ ಆರಂಭ



ಹುಣಸೂರು, ಜೂ.25–ಪ್ರತಿಷ್ಠಿತ ಅಪೋಲೊ ಬಿಜಿಎಸ್ ಆಸ್ಪತ್ರೆಯ ಹುಣಸೂರು ಶಾಖೆಯನ್ನು ಶಾಸಕರಾದ ಯು.ಟಿ.ಖಾದರ್ ಹಾಗೂ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ಬಳಿಕ ಸ್ಥಳಿಯ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಅಪೋಲ್ಲೋ ಆಸ್ಪತ್ರೆ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆಯಿಂದಲೇ ಹೆಸರುವಾಸಿಯಾಗಿದೆ. ಹುಣಸೂರಿನಲ್ಲಿ ಅಪೋಲೊ ತುರ್ತು ಚಿಕಿತ್ಸೆ ಹಾಗೂ ಡೇ ಕೇರ್ ಸೆಂಟರ್ ತಾಲೂಕಿನ ನಿವಾಸಿಗಳಿಗೆ ಉಪಯುಕ್ತವಾಗಲಿದೆ. ಮುಂದಿನ ದಿನಗಳಲ್ಲಿ ಹುಣಸೂರು ಸೇರಿದಂತೆ ಸುತ್ತ–ಮುತ್ತಲಿನ ತಾಲೂಕುಗಳ ಜನರಿಗೆ ಅನುಕೂಲಕರವಾಗಲಿದೆ ಎಂದ ಅವರು, ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯವುಳ್ಳ ಅಪೋಲೊ ಬಿಜಿಎಸ್ ಆಸ್ಪತ್ರೆಯ ಹುಣಸೂರಿನಲ್ಲಿ ಆರಂಭವಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯ: ತುರ್ತು ಚಿಕಿತ್ಸೆ ಹಾಗೂ ಡೇ ಕೇರ್ ಸೆಂಟರ್ ಇದಾಗಿದ್ದು, ಒಳರೋಗಿ, ಹೊರರೋಗಿ ಚಿಕಿತ್ಸೆ, ಹೃದಯ ಚಿಕಿತ್ಸೆ, ನರರೋಗ ಚಿಕಿತ್ಸೆ, ನೆಫ್ರಾಲಜಿ, ಯುರಾಲಜಿ, ಸ್ತ್ರೀರೋಗ, ಇಎನ್‌ಟಿ, ಜನರಲ್ ಸರ್ಜರಿ ಹಾಗೂ ಮಕ್ಕಳ ಚಿಕಿತ್ಸೆ ಸೇರಿದಂತೆ ಸುಸಜ್ಜಿತ ಚಿಕಿತ್ಸಾ ವಿಭಾಗವನ್ನು ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಡಾ.ಶ್ರೀನಾಥ್, ಅಪೋಲೊ ಬಿಜಿಎಸ್ ಆಸ್ಪತ್ರೆ ಮೈಸೂರಿನ ಉಪಾಧ್ಯಕ್ಷ(ಆಡಳಿತ) ಎನ್.ಜಿ.ಭರತೀಶ್ ರೆಡ್ಡಿ, ಎಂಆರ್‌ಎನ್‌ವಿ ಟ್ರಸ್ಟ್‌ನ ಹೆಚ್.ಎಸ್. ಅಶೋಕ್‌ಕುಮಾರ್, ನಗರ ಸಭೆ ಅಧ್ಯಕ್ಷೆ ಸಮೀನಾ ಪರ್ವೀನ್, ಉಪಾಧ್ಯಕ್ಷ ದೇವನಾಯಕ, ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

1,428 ಗ್ರಾಮಗಳಲ್ಲಿ ಸ್ಮಶಾನಕ್ಕೆ ಭೂಮಿ ನೀಡಲು ಸರ್ಕಾರ ವಿಫಲ

ನ್ಯಾಯಾಂಗ ನಿಂದನೆ ಕ್ರಮದ ಎಚ್ಚರಿಕೆ ನೀಡಿದ ಹೈಕೋರ್ಟ್

ಬೆಂಗಳೂರು, ಜೂ.25– ಹೈಕೋರ್ಟ್‌ನ ಕೋಪದಿಂದ ತಪ್ಪಿಸಿಕೊಳ್ಳಲು ರಾಜ್ಯ ಸರ್ಕಾರ 1,428 ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಭೂಮಿ ಹುಡುಕುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಿದೆ.

ಬೆಂಗಳೂರು ನಿವಾಸಿ ಮಹಮ್ಮದ್ ಇಕ್ಬಾಲ್ ಎಂಬುವರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಅವರ ನೇತೃತ್ವದ ವಿಭಾಗೀಯ ಪೀಠ, 1,428 ಗ್ರಾಮಗಳಲ್ಲಿ ಸ್ಮಶಾನಕ್ಕೆ ಭೂಮಿ ನೀಡಲು ಸರ್ಕಾರ ವಿಫಲವಾದರೆ ಕಂದಾಯ ಇಲಾಖೆ ವಿರುದ್ಧ ನ್ಯಾಯಾಂಗ ನಿಂದನೆ ಆರೋಪ ನಿಗದಿಪಡಿಸುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲರು ನ್ಯಾಯಾಲಯಕ್ಕೆ ವಿವರವಾದ ಮೆಮೊ ಸಲ್ಲಿಸಿ, ರಾಜ್ಯದಲ್ಲಿ ಒಟ್ಟು 29,076 ಗ್ರಾಮಗಳಿವೆ. ಅವುಗಳಲ್ಲಿ ಒಟ್ಟು 27,648 ಗ್ರಾಮಗಳಿಗೆ ಮತ್ತು 299 ಪಟ್ಟಣಗಳಲ್ಲಿ ಸ್ಮಶಾನಕ್ಕೆ ಜಾಗ ಒದಗಿಸಲಾಗಿದೆ. ಇನ್ನೂ 1,428 ಗ್ರಾಮಗಳಿಗೆ ಮತ್ತು ಶಿವಮೊಗ್ಗ ಜಿಲ್ಲೆಯ ಒಂದು ಪಟ್ಟಣದಲ್ಲಿ ಸ್ಮಶಾನಕ್ಕೆ ಜಾಗ ನೀಡಬೇಕಿದೆ. ಅದಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಜಮೀನಿನ ಅಗತ್ಯವಿದೆ ಎಂದು ಜಾಗ ನೀಡಲು ಕಂದಾಯ ಇಲಾಖೆಗೆ ಇರುವ ತೊಂದರೆಗಳನ್ನು ಕೋರ್ಟ್ ಗಮನಕ್ಕೆ ತಂದರು.

ರಾಜ್ಯದ ಹಲವು ಕಡೆ ಸ್ಮಶಾನಕ್ಕೆ ಜಾಗ ನೀಡಲು ಸರ್ಕಾರಿ ಜಮೀನು ಲಭ್ಯವಿಲ್ಲ. ಹಾಗಾಗಿ ಖಾಸಗಿಯವರ ಜಮೀನು ಖರೀದಿಸಲು ಸರ್ಕಾರ ಯೋಜನೆ ರೂಪಿಸಿದೆ. ಆದರೆ, ಸ್ಮಶಾನಕ್ಕೆ ತಮ್ಮ ಭೂಮಿ ನೀಡಲು ಜನ ಮುಂದೆ ಬರುತ್ತಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ವಿವಿಧ ಧರ್ಮ–ಜಾತಿಯ ಜನರು ತಮ್ಮದೇ ಆದ ವಿಭಿನ್ನ ಆಚರಣೆ ಮತ್ತು ಸಂಪ್ರದಾಯ ಹೊಂದಿದ್ದಾರೆ. ಇದರಿಂದ ಸ್ಮಶಾನಕ್ಕೆ ಜಾಗ ಒದಗಿಸಲು ಕಷ್ಟವಾಗಿದೆ. ಎರಡು ವರ್ಷ ಕಾಲಾವಕಾಶ ನೀಡಿದರೆ 1,428 ಗ್ರಾಮಗಳಿಗೆ ಮತ್ತು ಒಂದು ಪಟ್ಟಣದಲ್ಲಿ ಸ್ಮಶಾನಕ್ಕೆ ಜಾಗ ಒದಗಿಸಲಾಗುವುದು ಎಂದು ಸರ್ಕಾರಿ ವಕೀಲರು ಕೋರ್ಟ್‌ಗೆ ಮನವಿ ಮಾಡಿದರು.

ಇದಕ್ಕೆ ಒಪ್ಪದ ಕೋರ್ಟ್, ಈ ಸಂಬಂಧ ಏಕ ಸದಸ್ಯ ಪೀಠವು ಆದೇಶ ಹೊರಡಿಸಿಯೇ ಮೂರು ವರ್ಷ ಕಳೆದಿವೆ. ಆದರೂ ಹೈಕೋರ್ಟ್ ಆದೇಶವನ್ನು ಇಲ್ಲಿಯವರೆಗೆ ಪಾಲಿಸಿಲ್ಲ. ಸರ್ಕಾರ ಈಗಲೂ ಕಣ್ತೆರೆದಿಲ್ಲ. ಹೈಕೋರ್ಟ್ ಮೌನವಾಗಿದ್ದರೆ, ಸರ್ಕಾರ 20 ವರ್ಷವರೆಗೆ ಸಮಯ ಕೇಳುತ್ತದೆ. ಹಾಗಾಗಿ ಮುಂದಿನ ವಿಚಾರಣೆ ವೇಳೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದಡಿ ಆರೋಪ ಗದಿಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿ ವಿಚಾರಣೆಯನ್ನು ಜೂ.30ಕ್ಕೆ ಮುಂದೂಡಿದೆ.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 75,562 ಪ್ರಕರಣ ಇತ್ಯರ್ಥ



ಮೈಸೂರು, ಜೂ. 25(ಆರ್‌ಕೆ)–ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಒಟ್ಟು 75,562 ಪ್ರಕರಣಗಳು ಇತ್ಯರ್ಥವಾಗಿವೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್. ರಘುನಾಥ್ ತಿಳಿಸಿದ್ದಾರೆ.

ಮೈಸೂರಿನ ಮಳಲವಾಡಿಯಲ್ಲಿರುವ ಹೊಸ ನ್ಯಾಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಮೈಸೂರು ನಗರ ಮತ್ತು ತಾಲೂಕುಗಳ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಒಟ್ಟು 1,50,633 ಪ್ರಕರಣಗಳ ಪೈಕಿ 70,281 ಪ್ರಕರಣಗಳನ್ನು ರಾಜಿಗೆ ಗುರುತಿಸಲಾಗಿತ್ತು ಎಂದರು.

ಅವುಗಳಲ್ಲಿ ಈವರೆಗೆ 52,695 ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕೆ ಕ್ರಮ ವಹಿಸಲಾಗಿದ್ದು, ಆ ಪೈಕಿ 38,385 ಪ್ರಕರಣಗಳು ಮತ್ತು 37,177 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟು 75,562 ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ತಿಳಿಸಿದರು.

422 ಚೆಕ್ ಬೌನ್ಸ್, 180 ರಾಜಿಯಾಗಬಹುದಾದ ಕ್ರಿಮಿನಲ್ ಪ್ರಕರಣ, 34 ಎಂಎಂಡಿಆರ್, 42 ಮ್ಯಾಟ್ರಿಮೋನಿಯಲ್, 103 ವಿಭಾಗ ಮೊಕದ್ದಮೆ, 27 ಕಾವೇರಿ ನೀರಾವರಿ ನಿಗಮಕ್ಕೆ ಸಂಬಂಧಿಸಿದ ಪ್ರಕರಣ, 38 ಮುಡಾ, 7 ಗ್ರಾಹಕರ ವ್ಯಾಜ್ಯ, 10 ಕಂದಾಯ ಇಲಾಖೆಗೆ ಸಂಬಂಧಿಸಿದ ವ್ಯಾಜ್ಯಗಳೂ ಇತ್ಯರ್ಥವಾದ ಪ್ರಕರಣಗಳಲ್ಲಿ ಸೇರಿವೆ ಎಂದು ಅವರು ತಿಳಿಸಿದರು.

ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ 42 ನ್ಯಾಯಾಲಯಗಳಲ್ಲಿ ಇಂದು ಮೆಗಾ ರಾಷ್ಟ್ರೀಯ ಲೋಕ ಅದಾಲತ್ ನಡೆದಿದ್ದು, ಉಭಯತ್ರ ಕಕ್ಷಿದಾರರನ್ನು ವಕೀಲರು ಸಂಧಾನ ಮಾಡಿಸಿ ನ್ಯಾಯಾಧೀಶರ ಸಮ್ಮುಖದಲ್ಲಿ ರಾಜೀ ಮಾಡಿಸಿದ್ದಾರೆ ಎಂದು ರಘುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬೇರೆಯಾಗಲು ಬಂದರು, ಒಂದಾಗಿ ಹೋದರು

ಈ ಬಾರಿಯ ಲೋಕ ಅದಾಲತ್‌ನಲ್ಲಿ 38 ದಂಪತಿ ತಮ್ಮ ಮಧ್ಯೆ ಉಂಟಾಗಿದ್ದ ಕಲಹ ಮರೆತು ಒಂದಾಗಿ ಜೀವನ ನಡೆಸುವುದಾಗಿ ಪರಸ್ಪರ ಸಮ್ಮತಿಸಿ ಒಂದಾಗಿರುವುದು ವಿಶೇಷವಾಗಿದೆ. ಅದೇ ರೀತಿ ತಂದೆ–ಮಗಳ ನಡುವಿನ ವ್ಯಾಜ್ಯವೊಂದನ್ನು ಇತ್ಯರ್ಥ ಮಾಡಲಾಗಿದ್ದು, ವಿಡಿಯೋ ಕಾನ್ಫರೆನ್ಸ್ ಮೂಲಕ ದೆಹಲಿಯಲ್ಲಿದ್ದ ತಂದೆಯನ್ನು ಸಂಪರ್ಕಿಸಿ ರಾಜೀ ಸಂಧಾನ ಮಾಡಲಾಯಿತು ಎಂದು ನ್ಯಾಯಾಧೀಶರು ತಿಳಿಸಿದರು.

ಪತ್ನಿ ಸಾವನ್ನಪ್ಪಿದ ನಂತರ ತನ್ನ ಪುತ್ರಿಯ ಜವಾಬ್ದಾರಿಯನ್ನು ಅಜ್ಜಿ ಮನೆಗೆ ಬಿಟ್ಟು ದೆಹಲಿಗೆ ಪಲಾಯನವಾಗಿದ್ದ ವ್ಯಕ್ತಿ ಅಲ್ಲಿ ಪ್ರತ್ಯೇಕವಾಗಿದ್ದರು. ಅದರಿಂದ ನೊಂದಿದ್ದ ಪುತ್ರಿ ತಂದೆಯಿಂದ ಜೀವನಾಂಶ ಕೊಡಿಸಿಕೊಡುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದಳು. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿದ ಪ್ರಾಧಿಕಾರವು, ಇಂದು ಲೋಕ ಅದಾಲತ್‌ನಲ್ಲಿ ಪರಸ್ಪರ ಸಂಧಾನ ಮಾಡಿಸಿ, ಇತ್ಯರ್ಥಪಡಿಸಲಾಯಿತು ಎಂದರು.

ಸಂಚಾರ ನಿಯಮ ಉಲ್ಲಂಘನೆ: 47,86,100 ರೂ. ದಂಡ ಸಂಗ್ರಹ

ಮೈಸೂರು: ಸಂಚಾರ ನಿಯಮ ಉಲ್ಲಂಘಿಸಿದ 6,888 ಪ್ರಕರಣಗಳಲ್ಲಿ 47,86,100 ರೂ. ದಂಡ ಸಂಗ್ರಹವಾಗಿದೆ ಎಂದು ಎಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅವರು ತಿಳಿಸಿದ್ದಾರೆ.

ಮೈಸೂರು ನಗರದಾದ್ಯಂತ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿ, ಪೊಲೀಸರೇ ದಂಡವನ್ನು ವಸೂಲಿ ಮಾಡುತ್ತಿದ್ದರು. ಆದರೆ ಬಹುತೇಕ ಪ್ರಕರಣಗಳಲ್ಲಿ ನೋಟಿಸ್ ತಲುಪಿದರೂ ದಂಡ ಪಾವತಿಸದೇ ಬಾಕಿ ಉಳಿದಿರುವುದರಿಂದ ಇದೀಗ ಸಂಚಾರ ಪೊಲೀಸರಲ್ಲಿ ಪ್ರಕರಣ ದಾಖಲಾಗಿ, ಅದರ ಮಾಹಿತಿ ನ್ಯಾಯಾಲಯಕ್ಕೆ ಬರುವ ವ್ಯವಸ್ಥೆ ಜಾರಿಗೆ ಬಂದಿದೆ ಎಂದರು.

ನಿಯಮ ಉಲ್ಲಂಘಿಸಿದವರು ಪೊಲೀಸ್ ಘಟಕದಲ್ಲಿ ಈಗಲೂ ದಂಡ ಪಾವತಿಸಬಹುದಾಗಿದ್ದು, ತಪ್ಪಿದಲ್ಲಿ ನ್ಯಾಯಾಲಯದಿಂದಲೇ ನೋಟಿಸ್ ಜಾರಿಯಾಗಲಿದೆ. ಆಗಲೂ ಪಾವತಿಸದಿದ್ದಲ್ಲಿ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು ಎಂದರು.

ಮೆಗಾ ಅದಾಲತ್‌ನಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಈವರೆಗೆ ಒಟ್ಟು 53,59,487 ರೂ.ಗಳ ಪರಿಹಾರ ನೀಡಲು ಆದೇಶಿಸಲಾಗಿದೆ ಎಂದು ದೇವರಾಜ ಭೂತೆ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕೆಎಂಡಿ ಬ್ರಿಗೇಡ್‌ನ ಚಿಂತನಾ–ಮಂಥನಾ ಸಭೆ

ದ್ರಾವಿಡ್ ಚಳವಳಿಗೆ ರಾಜಕೀಯ ಶಕ್ತಿ!



ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ ಕೆಎಂಡಿ ಬ್ರಿಗೇಡ್‌ನ ಚಿಂತನಾ–ಮಂಥನಾ ಸಭೆ ನಡೆಯಿತು.

ಮೈಸೂರು,ಜೂ.25(ಪಿಎಂ)–ಅಲ್ಪಸಂಖ್ಯಾತರು ಒಳಗೊಂಡಂತೆ ದ್ರಾವಿಡ್ ಚಳವಳಿ ಮೂಲಕ ಹಿಂದುತ್ವ ಕೋಮುವಾದಿಗಳನ್ನು ಮಣಿಸುವಂತಹ ರಾಜಕೀಯ ಶಕ್ತಿಗಳನ್ನು ಬೆಂಬಲಿಸಬೇಕೆಂಬ ಅಭಿಪ್ರಾಯ ಕೆಎಂಡಿ ಬ್ರಿಗೇಡ್‌ನ (ಕಾಯಕ ಸಮಾಜಗಳು, ಅಲ್ಪಸಂಖ್ಯಾತರು ಮತ್ತು ದಲಿತರು) ಚಿಂತನಾ–ಮಂಥನಾ ಸಭೆಯಲ್ಲಿ ವ್ಯಕ್ತವಾಯಿತು.

ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ವತಿಯಿಂದ ಕೆಎಂಡಿ (ಕಾಯಕ ಸಮಾಜಗಳು, ಅಲ್ಪಸಂಖ್ಯಾತರು ಮತ್ತು ದಲಿತರು) ಬ್ರಿಗೇಡ್ ಅಸ್ತಿತ್ವಕ್ಕೆ ತರಲಾಗಿದ್ದು, ಬ್ರಿಗೇಡ್‌ನ ಹೋರಾಟದ ರೂಪುರೇಷೆ ಕುರಿತಂತೆ ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ ಶನಿವಾರ ನಡೆದ ಚಿಂತನಾ–ಮಂಥನಾ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಪ್ರಧಾನ ಭಾಷಣ ಮಾಡಿದ ಪ್ರಗತಿಪರ ಚಿಂತಕ ಪ್ರೊ.ಮಹೇಶ್‌ಚಂದ್ರ ಗುರು, 2014ರಿಂದ ಈವರೆಗೆ ಭಾರತ ಪ್ರಕಾಶಿಸುತ್ತಿಲ್ಲ. ಬದಲಿಗೆ ಆರ್ಯರು ಪ್ರಕಾಶಿಸುತ್ತಿದ್ದಾರೆ. ಆ ಮೂಲಕ ಶೂದ್ರರು ಅವಕಾಶ ವಂಚಿತರಾಗಿ ಬದುಕುವಂತಾಗಿದೆ. ಇತ್ತೀಚೆಗೆ ಹಿಂದುತ್ವ ಅಜೆಂಡಾದ ಪ್ರತಿಪಾದನೆ ವ್ಯಾಪಕವಾಗುತ್ತಿದೆ. ಶೂದ್ರರನ್ನು ನಿರಂತರವಾಗಿ ಗುಲಾಮಗಿರಿಗೆ ದೂಡುವ ಸಂಚು ಆರ್‌ಎಸ್‌ಎಸ್‌ನಿಂದ ನಡೆಯುತ್ತಿದೆ ಎಂದು ಆರೋಪಿಸಿದರು.

ಹಿಂದುತ್ವದಲ್ಲಿ ಬಂಧುತ್ವವಿಲ್ಲ. ಸಮಾನತೆ, ಸಾಮರಸ್ಯ, ಸಮಬಾಳು ಮತ್ತು ಸಮಪಾಲು ಇಲ್ಲವೇ ಇಲ್ಲ. ಹಾಗಾಗಿ ಈ ಹಿಂದುತ್ವ ಮಣಿಸಲು ದ್ರಾವಿಡ್ ಚಳವಳಿ ಕಟ್ಟಲೇಬೇಕು. ಮಹಾರಾಷ್ಟ್ರದಲ್ಲಿ ಅಂದಿನ ಪ್ರಭುತ್ವವಾದಿ ಶಕ್ತಿಗಳನ್ನು ಅಹಿಂಸಾತ್ಮಕ ನೆಲೆಯಲ್ಲಿ ದಮನಗೊಳಿಸಿ, ಜ್ಯೋತಿಬಾ ಫುಲೆ ನೇತೃತ್ವದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಚಳವಳಿ ನಡೆಸಲಾಯಿತು. ಅಂತಹ ಮಹಾತ್ಮ ಜ್ಯೋತಿಬಾ ಫುಲೆ ಅವರನ್ನು ಅಂಬೇಡ್ಕರ್ ಗುರು ಮತ್ತು ದಾರ್ಶನಿಕರಾಗಿ ಸ್ವೀಕರಿಸಿದರು ಎಂದು ಹೇಳಿದರು.

ತಮಿಳುನಾಡಿನಲ್ಲಿ ದ್ರಾವಿಡರನ್ನು ಅತ್ಯಂತ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿತ್ತು. ಇದರ ವಿರುದ್ಧ ಪೆರಿಯಾರ್ ರಾಮಸ್ವಾಮಿ ದೊಡ್ಡ ಚಳವಳಿ ನಡೆಸಿದರು. ಅದರ ಫಲವಾಗಿ ತಮಿಳುನಾಡಿನಲ್ಲಿ ಇಂದಿಗೂ ಹಿಂದುತ್ವವಾದಿಗಳು ಅಲ್ಲಿ ತಳಹದಿ ಹಾಕಲು ಸಾಧ್ಯವಾಗಿಲ್ಲ. ಎನ್‌ಡಿಎ ರಾಜಕೀಯ ಪ್ರಾಬಲ್ಯ ಅಲ್ಲಿ ನಡೆಯುತ್ತಿಲ್ಲ. ಅದಕ್ಕೆ ಕಾರಣ ಅಲ್ಲಿ ತಂದೆ ಪೆರಿಯಾರ್ ಇನ್ನೂ ಜೀವಂತವಾಗಿದ್ದಾರೆ ಎಂದು ಭಾವುಕವಾಗಿ ಹೇಳಿದರು.

ಕೇರಳದಲ್ಲಿ ನಾರಾಯಣ ಗುರು ಶೂದ್ರರು–ಅತಿ ಶೂದ್ರರನ್ನು ಸಂಘಟನೆ ಮಾಡಿದರು. ತಮಿಳುನಾಡು ಮತ್ತು ಕೇರಳದಲ್ಲಿ ಯಾವುದೇ ಪ್ರಭುತ್ವ ಬಂದರೂ ಅದು ದ್ರಾವಿಡರದ್ದೇ ಆಗಿರುತ್ತದೆ. ಇಂತಹ ದೊಡ್ಡ ಯಶೋಗಾಥೆ ನಮ್ಮ ಎದುರೇ ಇದೆ. ಹಾಗಾಗಿ ಮನುವಾದಿ ವಿರೋಧಿಸುವ ರಾಜಕೀಯ ಶಕ್ತಿಗಳನ್ನು ನಾವು ಬೆಂಬಲಿಸಬೇಕು. ಹಿಂದುತ್ವದ ಹೆಸರಿನಲ್ಲಿ ನಮ್ಮನ್ನು ವಿಭಜಿಸುವ ಶಕ್ತಿಗಳಿಗೆ ದ್ರಾವಿಡತ್ವದ ಮೂಲಕ ತಕ್ಕ ಉತ್ತರ ನೀಡಬೇಕು. ಜ್ಯೋತಿಬಾ ಫುಲೆ, ಪೆರಿಯಾರ್, ಡಾ.ಅಂಬೇಡ್ಕರ್ ಮತ್ತು ಕುವೆಂಪು ಪಥದಲ್ಲಿ ದ್ರಾವಿಡತ್ವದ ಕಡೆಗೆ ನಮ್ಮ ನಡೆ ಸಾಗಬೇಕು. ನಾವೆಲ್ಲಾ ಒಗ್ಗೂಡಿ ದ್ರಾವಿಡ್ ರಾಜ್ಯ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಕೆಎಂಡಿ ಬ್ರಿಗೇಡ್ ಅಸ್ತಿತ್ವಕ್ಕೆ ತಂದಿದ್ದು, ಇದು ಕಾಯಕ ಸಮಾಜಗಳು, ಅಲ್ಪಸಂಖ್ಯಾತರು ಮತ್ತು ದಲಿತರ ಒಂದು ಸಂಗಮವಾಗಿದೆ. ಕಾಯಕ ಸಮಾಜಗಳ ಒಕ್ಕೂಟದ ಸಮಿತಿಯಾಗಿ ಈ ಬ್ರಿಗೇಡ್ ಕಾರ್ಯನಿರ್ವಹಿಸಲಿದೆ ಎಂದರು.

ಮನುವಾದಿ, ಕೋಮುವಾದಿಗಳು ಈ ದೇಶದ ಸಾಮಾಜಿಕ ಸಾಮರಸ್ಯಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಇದರ ವಿರುದ್ಧ ಈ ಮೂರು ವರ್ಗಗಳು ಒಟ್ಟಾಗಬೇಕು. ಆ ಮೂಲಕ ಕೋಮುವಾದಿಗಳನ್ನು ಮಣಿಸಿ, ಶಾಂತಿಯ ಜ್ಯೋತಿ ಹಚ್ಚಬೇಕೆಂದು ಹೊರಟಿದ್ದೇವೆ. ಅದಕ್ಕಾಗಿ ಹೋರಾಟದ ರೂಪುರೇಷೆ ಸಿದ್ಧಪಡಿಸಲಿದ್ದೇವೆ ಎಂದು ಹೇಳಿದರು.

ಪ್ರಜ್ಞಾವಂತ ಮತದಾರರ ದಿಗ್ವಿಜಯ: ಮೊನ್ನೆ ಎಂಎಲ್‌ಸಿ ಚುನಾವಣೆಯಲ್ಲಿ ಬಹಳ ದೊಡ್ಡ ಬೆಳವಣಿಗೆಯಾಯಿತು. ಇದು ಕಾಂಗ್ರೆಸ್‌ನವರ (ಮಧು ಜಿ.ಮಾದೇಗೌಡರ ಗೆಲುವು ಸಂಬಂಧ) ಗೆಲುವು ಅಲ್ಲ. ಬೇರೆಯವರ ಗೆಲುವು ಅಲ್ಲ. ಕೋಮುವಾದಿ ಬಿಜೆಪಿ, ಜಾತಿವಾದಿ ಜನತಾದಳ ಬಗ್ಗುಬಡಿದ ಪ್ರಜ್ಞಾವಂತ ಮತದಾರರ ದಿಗ್ವಿಜಯ ಇದು ಎಂದು ಪ್ರೊ.ಮಹೇಶ್‌ಚಂದ್ರ ಗುರು ಹೇಳಿದರು.

ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಚಿತ್ರದುರ್ಗದ ಶ್ರೀ ಛಲವಾದಿ ಮಠದ ಶ್ರೀ ಬಸವನಾಗಿದೇವ ಶರಣರು, ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ನಿವೃತ್ತ ಪ್ರಾಧ್ಯಾಪಕ ನಂಜರಾಜ ಅರಸ್, ಮುಖಂಡರಾದ ನಾಗೇಶ್, ಪುಟ್ಟನಂಜಯ್ಯ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸದರನ್ ಸ್ಟಾರ್‌ನಲ್ಲಿ 'ಸ್ವಯಂ ರಕ್ತದಾನ ಶಿಬಿರ'



ಸದರನ್ ಸ್ಟಾರ್‌ನಲ್ಲಿ ಸ್ವಯಂ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡುತ್ತಿರುವುದು.

ಮೈಸೂರು,ಜೂ.25(ಎಂಕೆ)–ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಲಯನ್ಸ್ ಇಂಟರ್‌ನ್ಯಾಷನಲ್ ಕ್ಲಬ್ ಮೈಸೂರು ವತಿಯಿಂದ ಸಾಮಾಜಿಕ ಜವಾಬ್ದಾರಿ ಕಾರ್ಯದ ಅಂಗವಾಗಿ 'ರಕ್ತದಾನ ಶಿಬಿರ' ನಡೆಯಿತು.

ಮಾನವ ಸಂಪನ್ಮೂಲ ಸಂಯೋಜಕರಾದ ಸುನೀಲ್ ಮತ್ತು ಶಿವಾನಿ ತುತೇಜಾ ನೇತೃತ್ವದಲ್ಲಿ ಜೀವಧಾರ ಬ್ಲಡ್ ಬ್ಯಾಂಕ್‌ನ ಡಾ.ಮಾನಸ ಮತ್ತು ಅವರ ತಂಡದೊಂದಿಗೆ ರಕ್ತದಾನ ಶಿಬಿರ ನೆರವೇರಿತು.

30ಕ್ಕೂ ಹೆಚ್ಚು ಸಿಬ್ಬಂದಿ ಶಿಬಿರದಲ್ಲಿ ರಕ್ತದಾನ ಮಾಡಿದರು. ಇದೇ ವೇಳೆ ಎಲ್ಲಾ ರಕ್ತ ದಾನಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನಿಂದ ರಕ್ತದಾನ ಶಿಬಿರ: ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ (ವಿಕ್ರಾಂತ್ ಟೈರ್ ಪ್ಲಾಂಟ್) ವತಿಯಿಂದ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರ 89ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ 'ರಕ್ತದಾನ ಶಿಬಿರ' ನಡೆಯಿತು. ಶಿಬಿರವನ್ನು ಜೆಕೆ ಟೈರ್‌ನ ಉಪಾಧ್ಯಕ್ಷ(ವರ್ಕ್) ವಿ.ಈಶ್ವರ ರಾವ್ ಉದ್ಘಾಟಿಸಿದರು. ಜೆಕೆ ಟೈರ್‌ನ ಸಿಬ್ಬಂದಿ ಹಾಗೂ ಸಾರ್ವಜನಿಕರು ಸೇರಿದಂತೆ ಹಲವರಿಂದ 1,020 ಯೂನಿಟ್ ರಕ್ತದಾನ ಮಾಡಲಾಯಿತು. ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಅತಿ ದೊಡ್ಡ ಮತ್ತು ಹಳೆಯ ಸಂಸ್ಥೆಯಾಗಿದ್ದು, ಮೈಸೂರಿನಲ್ಲಿ ಮೂರು ಪ್ಲಾಂಟ್‌ಗಳು ಕಾರ್ಯನಿರ್ವಹಿಸುತ್ತಿವೆ. ಜೆಕೆ ಟೈರ್‌ನ ಮಾಜಿ ಅಧ್ಯಕ್ಷ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರ ಜನ್ಮದಿನದ ನೆನಪಿಗಾಗಿ ಪ್ರತಿ ವರ್ಷ ಪ್ಲಾಂಟ್‌ಗಳಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಪ್ರತಿಭಟನೆ ಪೂರ್ವಭಾವಿ ಸಭೆ



ಮೈಸೂರು, ಜೂ.25(ಜಿಎ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕಾಗಿ ಶ್ರೀಮಹರ್ಷಿ ವಾಲ್ಮೀಕಿ ಮಠದ ಪ್ರಸನ್ನಾನಂದ ಸ್ವಾಮೀಜಿ ಅವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಧರಣಿಯು 132ನೇ ದಿನಕ್ಕೆ ಕಾಲಿಟ್ಟಿದ್ದು, 152ನೇ ದಿನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರತಿಭಟನೆ ಮಾಡಲು ಕರೆ ನೀಡಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು. ಮೈಸೂರಿನಲ್ಲಿ ಜಲದರ್ಶಿನಿ ಅತಿಥಿಗೃಹದಲ್ಲಿ ಪ.ಜಾ ಮತ್ತು ಪ.ಪಂ ಮೀಸಲಾತಿ ಹೆಚ್ಚಳ ಹೋರಾಟ ಒಕ್ಕೂಟ ಸಮಿತಿಯು ಪ್ರತಿಭಟನೆಯ ಪೂರ್ವಭಾವಿ ಸಭೆಯನ್ನು ಶನಿವಾರ ಸಂಜೆ ನಡೆಸಿ ಮೈಸೂರು ಜಿಲ್ಲೆಯ ನೇತೃತ್ವವನ್ನು ವಹಿಸುವಂತೆ ಎಲ್ಲರ ಒಮ್ಮತದಿಂದ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರನ್ನು ಆಯ್ಕೆ ಮಾಡಿದ್ದರು.

ರಾಜಕೀಯ ಪಕ್ಷಗಳಿಂದ ನಮ್ಮಗೆ ನ್ಯಾಯ ದೊರಕಿಲ್ಲ. ಮತದಿಂದ ಮಾತ್ರ ನಮಗೆ ನ್ಯಾಯ ದೊರೆಯುತ್ತದೆ ಎಂಬ ಉದ್ದೇಶವಿದೆ. ಪ್ರತಿಭಟನೆಗೆ ಎಲ್ಲರೂ ಪಕ್ಷಾತೀತವಾಗಿ ಒಗ್ಗೂಡಿ ಐಕ್ಯತೆಯನ್ನು ತೋರಿಸಬೇಕು. ಹಳ್ಳಿ ಹಳ್ಳಿಗೂ ಈ ಪ್ರತಿಭಟನೆಯ ವಿಚಾರವನ್ನು ತಲುಪಿಸುವ ಮೂಲಕ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕು ಎಂದು ಸಭೆಯಲ್ಲಿ ಕೆಲ ಮುಖಂಡರು ತಿಳಿಸಿದರು.

ವಿದ್ಯಾರ್ಥಿ ಸಂಘಟನೆ, ಮಹಿಳಾ ಸಂಘಗಳು, ರೈತರು, ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರನ್ನು ಈ ಪ್ರತಿಭಟನೆಗೆ ಸೇರಿಸುವ ಪ್ರಯುತ್ನ ಮಾಡಬೇಕು. ನಮ್ಮಲ್ಲಿಯೇ ಒಗ್ಗಟ್ಟಿಲ್ಲ. ಒಳಜಗಳವಿದೆ ಅವುಗಳನ್ನು ಹೋಗಲಾಡಿಸಿ ನಮ್ಮ ಮುಂದಿನ ಪೀಳಿಗೆಗೆ ಉತ್ತಮವಾದ ಸಮಾಜವನ್ನು ನೀಡಲು ಮುಂದಾಗಬೇಕು. ಸ್ವಾಮೀಜಿ ಅವರು ಮಳೆ, ಬಿಸಿಲು ಮತ್ತು ಚಳಿ ಎನ್ನದೆ 132 ದಿನಗಳಿಂದ ಬೆಂಗಳೂರಿನಲ್ಲಿ ಧರಣಿ ನಡೆಸುತ್ತಿದ್ದಾರೆ. ಅವರ ಬಳಿ ಹೋಗಿದ ಮುಖ್ಯಮಂತ್ರಿಗಳು, ವಿವಿಧ ರಾಜಕೀಯ ನಾಯಕರು ಈವರೆಗೂ ಯಾವುದೇ ಭರವಸೆ ನೀಡಿಲ್ಲ. ಈ ತೀವ್ರ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಎಚ್ಚರಿಸಬೇಕಿದೆ ಎಂದು ಮುಖಂಡರು ಹೇಳಿದರು.

ಸಭೆಯಲ್ಲಿ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಛಲವಾದಿ ಗುರುಪೀಠದ ಬಸವನಾಗ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ದೇವಪ್ಪ ನಾಯಕ, ಎಸ್.ಎ.ಬಸವರಾಜು, ಅಹಿಂದ ಜವರಪ್ಪ, ಪ್ರಭಾಕರ್ ಹುಣಸೂರು, ಪ್ರಕಾಶ್, ಮಹದೇವ ನಾಯ್ಕ್, ಶ್ರೀಧರ್ ನಾಯ್ಕ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸರ್ಕಾರದ ಕೊಡುಗೆ, ಪ್ರತಾಪ್ ಸಿಂಹ ಸಾಧನೆ ಚರ್ಚೆಗೆ ಕಾಂಗ್ರೆಸ್ ವಕ್ತಾರರ ಆಹ್ವಾನ

ಸಂಸದರ ಕಚೇರಿಗೆ ಪೀಠೋಪಕರಣ, ದಾಖಲೆಯೊಂದಿಗೆ ಭೇಟಿ ನಿರ್ಧಾರ

ಮೈಸೂರು,ಜೂ.25(ಎಂಟಿವೈ)– ಮೈಸೂರಿನ ಸಮಗ್ರ ಅಭಿವೃದ್ಧಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಕೊಡುಗೆ ಮತ್ತು ಸಂಸದ ಪ್ರತಾಪಸಿಂಹ ಅವರ 8 ವರ್ಷಗಳ ಸಾಧನೆ ಕುರಿತು ಬಹಿರಂಗ ಚರ್ಚೆಗೆ ಜೂ.29ರ ಬುಧವಾರ ಸಂಸದರ ಕಚೇರಿಗೆ ಪೀಠೋಪಕರಣ ಮತ್ತು ದಾಖಲೆಗಳ ಸಹಿತ ಬರುವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೆ ಸಂಸದ ಪ್ರತಾಪ ಸಿಂಹ ಹಿಟ್ ಅಂಡ್ ರನ್ ಹೇಳಿಕೆ ನೀಡಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಅಲ್ಲದೆ, ಮೈಸೂರು ಮಹಾರಾಜರ ನಂತರ ನಾನೇ ಮೈಸೂರು ಅಭಿವೃದ್ಧಿ ಮಾಡಿರುವುದಾಗಿ ತಮಗೆ ತಾವೇ ಸರ್ಟಿಫಿಕೇಟ್ ಕೊಟ್ಟುಕೊಳ್ಳುತ್ತಿದ್ದಾರೆ. ಈ ಹಿಂದೆ ಚರ್ಚೆಗೆ ದಿನಾಂಕ ನಿಗದಿ ಮಾಡಲಾಗಿತ್ತು. ಅಂದು ಅವರು ಚರ್ಚೆಗೆ ಬರಲಿಲ್ಲ. ಇದೀಗ ಸತ್ಯಾಸತ್ಯತೆ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಜೂ.29ರಂದು ಸಂಸದರ ಕಚೇರಿಗೆ ನಾವೇ ಹೋಗುತ್ತೇವೆ. ಅಂದು ಬೆಳಗ್ಗೆ ಒಂದು ಟೆಂಪೋದಲ್ಲಿ ಒಂದು ಟೇಬಲ್ ಮತ್ತು ಎರಡು ಕುರ್ಚಿಯ ಸಮೇತ ನಾನೊಬ್ಬನೇ ಹೋಗುತ್ತೇನೆ. ಬೇಕಾದರೆ ಸಂಸದ ಪ್ರತಾಪ ಸಿಂಹ ತನ್ನ ಬೆಟಾಲಿಯನ್ ಜೊತೆ ಬರಬಹುದು ಎಂದು ಹೇಳಿದರು.

ಡಬಲ್ ಎಂಜಿನ್ ಸರ್ಕಾರ ಎಂದೆಲ್ಲ ಹೇಳುತ್ತೀರಿ. ಆದರೆ ನಾಗನಹಳ್ಳಿ ಸ್ಯಾಟಲೈಟ್ ನಿಲ್ದಾಣವನ್ನು 2017ರಲ್ಲಿಯೇ ಹೇಳಿದ್ದೀರಿ. ಇನ್ನು ಕಡಕೊಳ ಯೋಜನೆಯನ್ನು ಈ ಹಿಂದೆಯೇ ಘೋಷಿಸಲಾಗಿತ್ತು. ಹೀಗೆ ಸುಳ್ಳು ಹೇಳುವುದನ್ನು ನಿಲ್ಲಿಸಿ, ಸುಳ್ಳು ನಿಮ್ಮ ಮನೆದೇವರು ಎಂದು ಟೀಕಿಸಿದರು.

ಮೈಸೂರಿಗೆ ಪ್ರಧಾನಿ ಮೋದಿ ಅವರು ಬಂದಿದ್ದಾಗ, ಯಾವ ಕಾರ್ಯಕ್ರಮದಲ್ಲೂ ನಿಮ್ಮ ಹೆಸರನ್ನೇ ಹೇಳಲಿಲ್ಲ. ಆದರೆ, ನಿಮ್ಮ ಬದ್ಧ ವೈರಿಯ ಬೆನ್ನು ತಟ್ಟಿದರು. ಇದರಿಂದ ನಿಮ್ಮ ಪಕ್ಷದ ಕಾರ್ಯಕರ್ತರಿಗೆ ನಿಮ್ಮ ಲೆವೆಲ್ ಏನು ಎಂದು ಗೊತ್ತಾಗಿದೆ. ಕೇಂದ್ರದಲ್ಲಿ ನನ್ನದೇ ಮಾತು ನಡೆಯುತ್ತದೆ, ನಾನೇ ಸುಪ್ರಿಂ ಎಂಬ ಬಣ್ಣದ ಮಾತಿನ ನಿಜಬಣ್ಣ ಮೋದಿ ಅವರ ಕಾರ್ಯಕ್ರಮದಲ್ಲಿ ಜಗಜ್ಜಾಹೀರಾಗಿದೆ. ಆ ವೈಫಲ್ಯತೆ ಮರೆಮಾಚಲು ಮತ್ತೊಂದು ಹಾದಿ ಹಿಡಿಯುತ್ತೀರಿ ಎಂದು ನಮಗೆ ತಿಳಿದಿದೆ. ಕೇವಲ ಪ್ರಚಾರದ ಗೀಳಿನಿಂದ, ಇತರರ ಟೀಕೆ ಮಾಡುವುದನ್ನು ನಿಲ್ಲಿಸಬೇಕು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜಯಗಳಿಸಿ, ಪ್ರಧಾನಿ ಮೋದಿ ಅವರಿಗೆ ಉಡುಗೊರೆ ನೀಡಬೇಕು ಎಂದು ಹೇಳಿದ್ದೀರಿ. ಆದರೆ ಹಾಗಿದ್ದು ಏನು? ಮುಂದಿನ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಬಂದೇ ಬರುತ್ತದೆ. ನಿಮ್ಮ ಸರ್ಕಾರದ ಮೋಸ, ವಂಚನೆ, ದಗಾ ಗೊತ್ತಾಗಿದೆ. ನಾವು ಮುಂಬರುವ ಚುನಾವಣೆಯಲ್ಲಿ ಮೈಸೂರಲ್ಲಿ ಕನಿಷ್ಠ 10 ಸ್ಥಾನಗಳನ್ನು ಗೆಲ್ಲುತ್ತೇವೆ. ಎಸ್.ಟಿ. ಸೋಮಶೇಖರ್ ಅವರೇ ಉಸ್ತುವಾರಿ ಸಚಿವರಾಗಿದ್ದರೆ 11 ಸ್ಥಾನಗಳನ್ನೂ ಗೆಲ್ಲುತ್ತೇವೆ ಎಂದು ಅವರು ಟೀಕಿಸಿದರು.

ನಾಳೆ ಮೈಸೂರಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ

ಮೈಸೂರು, ಜೂ.25– ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ನಾಡಪ್ರಭು ಕೆಂಪೇಗೌಡ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ 2022–23ನೇ ಸಾಲಿನಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಮೈಸೂರು ಜಿಲ್ಲೆ ಹಾಗೂ ಎಲ್ಲಾ ತಾಲೂಕುಗಳಲ್ಲಿ ಆಚರಿಸಬೇಕಾಗಿರುವ ಹಿನ್ನೆಲೆಯಲ್ಲಿ ಜೂ.27 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಕೆಂಪೇಗೌಡ ಜಯಂತಿಯನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು ಹಾಗೂ ಮುಖ್ಯ ಅತಿಥಿಗಳಾಗಿ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ ಸಿಂಹ, ವಿ. ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್ ಉಪಸ್ಥಿತರಿರುವರು.

ಕಿಯೋನಿಕ್ಸ್‌ಗೆ ಪ್ರವೇಶಾತಿ ಆರಂಭ

ಮೈಸೂರು, ಜೂ.25– ಕರ್ನಾಟಕ ರಾಜ್ಯ ಸರ್ಕಾರದ ಉದ್ಯಮವಾದ ಕಿಯೋನಿಕ್ಸ್ ಯುವ.ಕಾಂ, ಕಂಪ್ಯೂಟರ್ ತರಬೇತಿ ಕೇಂದ್ರ, ಕುವೆಂಪುನಗರದಲ್ಲಿ 2022–23ನೇ ಸಾಲಿನ ಪ್ರವೇಶಾತಿ ಪ್ರಾರಂಭವಾಗಿದ್ದು, 3 ತಿಂಗಳು, 6 ತಿಂಗಳು ಹಾಗೂ 1 ವರ್ಷದ ಕಂಪ್ಯೂಟರ್ ಡಿಪ್ಲಮೊ ತರಬೇತಿಗೆ ನೋಂದಣಿ ಪ್ರಾರಂಭವಾಗಿದೆ. ಅಭ್ಯರ್ಥಿಗಳು ಕಿಯೋನಿಕ್ಸ್ ಯುವ.ಕಾಂ #47/D, 1st Floor, Opp. To HDFC Bank, Near Kuvempunagara Bus Depot, Kuvempunagar, ದೂ.ಸಂ: 9880622747, 8217966442 ವಿಳಾಸಕ್ಕೆ ಸಂಪರ್ಕಿಸಿ, ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಒಂದನೇ ಪುಟದಿಂದ

ಐವರು ಆರೋಪಿಗಳ ಬಂಧನ

ಮಾಡುತ್ತಿರಲಿಲ್ಲ. ಒಬ್ಬರಿಗೊಬ್ಬರು ಪರಿಚಯವಿದ್ದು, ಬಾಲಕನನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಸಲ್ಲಿಸಲು ಮುಂದಾಗಿದ್ದಾರೆ. ಆದರೆ, ಅಪಹರಣ ಮಾಡಿದ ನಂತರ ಆರೋಪಿಗಳೇ ಬಾಲಕನನ್ನು ಬಿಟ್ಟು ಹೋಗುವಂತೆ ಮಾಡಲಾಯಿತು ಎಂದು ಹೇಳಿದ ಅವರು, ಪೋಷಕರ ಸ್ಥಳದಲ್ಲಿ ನಿಂತು ಸಮಯ–ಸಂದರ್ಭಕ್ಕೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಂಡು ಬಾಲಕನನ್ನು ರಕ್ಷಣೆ ಮಾಡಲಾಗಿದೆ ಎಂದು ತಿಳಿಸಿದರು.

ಬಾಲಕನನ್ನು ಬಿಟ್ಟು ಹೋದ 12 ಗಂಟೆಯ ಒಳಗೆ ಆರೋಪಿ ಗಳನ್ನು ವಿರಾಜಪೇಟೆಯಲ್ಲಿ ಬಂಧಿಸಲಾಗಿದೆ. ಅಪಹರಣ ಕ್ಕಾಗಿ ಬಳಸಿದ್ದ 2 ಬಾಡಿಗೆ ಕಾರು, 5 ಮೊಬೈಲ್‌ಗಳನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ಮುಂದುವರಿಸಲಾಗಿದೆ. ಬಾಲಕನ ಮೇಲೆ ಯಾವುದೇ ದೈಹಿಕ ಹಲ್ಲೆ ಮಾಡಿಲ್ಲ ಎಂದು ಕಮಿಷನರ್ ಡಾ.ಚಂದ್ರಗುಪ್ತ ಮಾಹಿತಿ ನೀಡಿದರು.

ರಾತ್ರಿಯಿಡೀ ಕಾರ್ಯಾಚರಣೆ: ಎಲ್ಲಾ ಚೆಕ್‌ಪೋಸ್ಟ್‌ಗಳನ್ನು ತಪಾಸಣೆ ನಡೆಸುವುದರ ಜೊತೆಗೆ ಅಕ್ಕ–ಪಕ್ಕದ ಜಿಲ್ಲೆಗಳಿಗೂ ಮಾಹಿತಿ ರವಾನಿಸಲಾಗಿತ್ತು. ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ, ಬಾಲಕ ನನ್ನು ಸುರಕ್ಷಿತವಾಗಿ ಕಾಪಾಡುವಲ್ಲಿ ಡಿಸಿಪಿ ಪ್ರದೀಪ್ ಗುಂಟಿ, ಎನ್.ಆರ್.ವಿಭಾಗದ ಎಸಿಪಿ ಶಿವಶಂಕರ್ ನೇತೃತ್ವದ ತಂಡ ಯಶಸ್ವಿಯಾಗಿದೆ ಎಂದರು. ಅಪಹರಣ ಪ್ರಕರಣದಲ್ಲಿ ಭಾಗಿಯಾಗಿದ್ದ ಪ್ರಮುಖ ಆರೋಪಿ ಬಾಲಕನ ತಾತನ ಆರೈಕೆಗೆ ಬಂದು ಪರಿಚಯಸ್ಥರ ಜೊತೆಗೂಡಿ ಸ್ಕೆಚ್ ಹಾಕಿದ್ದಾನೆ. ಕೆರೆ ದಡದ ಮೇಲೆ ಸುಮ್ಮನೆ ಕುಳಿತುಕೊಂಡರೆ ಮೀನು ಸಿಗುವುದಿಲ್ಲ. ಮೀನಿಗಾಗಿ ಗಾಳ ಹಾಕಲೇಬೇಕಾಗುತ್ತದೆ. ಅದರಂತೆ ಕಾರ್ಯಾಚರಣೆ ನಡೆಸಿದ್ದು, ಇನ್ನೂ ತನಿಖೆ ಆಗಬೇಕಾಗಿದೆ ಎಂದರು.

ಲಾರಿ–ಕಾರು ಡಿಕ್ಕಿ: ಮೂವರು ಸಾವು

ದೇವರಾಜು, ಪಾಂಡವಪುರ ತಾಲೂಕಿನ ವದೆಸಮುದ್ರ ಗ್ರಾಮದ ನಿವಾಸಿ ಹಾಗೂ ಕನಗನಮರಡಿ ವೃತ್ತದ ಗ್ರಾಮ ಸಹಾಯಕ ಮಂಜುನಾಥ್ ಹಾಗೂ ಓರ್ವ ರೈತ ಸೇರಿದಂತೆ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಪಾಂಡವಪುರ ತಾಲೂಕಿನ ಎಲೆಕೆರೆ ಗ್ರಾಮದ ನಿವಾಸಿ ಹಾಗೂ ಡಾಮರಹಳ್ಳಿ ವೃತ್ತದ ಗ್ರಾಮ ಸಹಾಯಕ ಸ್ವಾಮಿ ತೀವ್ರವಾಗಿ ಗಾಯಗೊಂಡಿದ್ದಾರೆ.

ವಿವರ: ಗ್ರಾಮ ಲೆಕ್ಕಾಧಿಕಾರಿ ದೇವರಾಜು ಅವರು ತಮ್ಮ ಜಮೀನಿನ ಕೆಲಸಕ್ಕಾಗಿ ಸ್ಯಾಂಟ್ರೋ ಕಾರಿನಲ್ಲಿ ಗ್ರಾಮ ಸಹಾಯಕರಾದ ಮಂಜುನಾಥ್, ಸ್ವಾಮಿ ಹಾಗೂ ರೈತರೊಬ್ಬರನ್ನು ಪಾಂಡವಪುರದಿಂದ ಕರೆದುಕೊಂಡು ಬಂದಿದ್ದರು. ಕೆಲಸ ಮುಗಿದ ಬಳಿಕ ಕಾರಿನಲ್ಲಿ ಈ ಮೂವರನ್ನು ಪಾಂಡವಪುರಕ್ಕೆ ಕರೆದೊಯ್ಯುತ್ತಿದ್ದರು. ಈ ವೇಳೆ ನಾಗಮಂಗಲ ಹೊರವಲಯದ ವಿಸ್ಡಮ್ ಕಾಲೇಜಿನ ಬಳಿ ಮೈಸೂರು ಕಡೆಯಿಂದ ಬೆಳಗಾಂಗೆ ತೆರಳುತ್ತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಮೂವರು ಮೃತಪಟ್ಟಿದ್ದಾರೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದೆ. ಸ್ಥಳದಲ್ಲೇ ಮೃತಪಟ್ಟ ಮೂವರ ಶವಗಳನ್ನು ನಾಗಮಂಗಲ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಗಾಯಾಳು ಸ್ವಾಮಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಿ.ಜಿ.ನಗರದ ಆದಿ ಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ನಾಗಮಂಗಲ ಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಶಾಸಕರ ಕಚೇರಿಗಳು ಧ್ವಂಸ

ರಾಷ್ಟ್ರೀಯ ಕಾರ್ಯಕಾರಿ ಸಭೆ ನಡೆಸಿದ್ದಾರೆ. ಮತ್ತೊಂದೆಡೆ ಬಂಡಾಯ ಶಾಸಕರಿಗೆ ನೀಡಿದ್ದ ಭದ್ರತೆಯನ್ನು ಸರ್ಕಾರ ಹಿಂಪಡೆದಿದೆ ಎಂಬ ಆರೋಪಗಳು ಕೇಳಿ ಬಂದಿದ್ದು, ಅದಕ್ಕೆ ಪೂರಕವೆಂಬಂತೆ ಇಂದು ಮೂವರು ಬಂಡಾಯ ಶಾಸಕರ ಕಚೇರಿಗಳನ್ನು ಧ್ವಂಸಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಂಬೈ ಮತ್ತು ಥಾಣೆಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ನಡುವೆ ಶಾಸಕರಿಗೆ ನೀಡಿದ್ದ ಭದ್ರತೆ ಹಿಂಪಡೆದುಕೊಂಡಿರುವ ಆರೋಪವನ್ನು ಗೃಹ ಸಚಿವ ದೀಲಿಪ್ ವಾಲ್ಸೆ ಅಲ್ಲಗಳೆದಿದ್ದು, ಟ್ವೀಟರ್‌ನಲ್ಲಿ ಹರಿದಾಡುತ್ತಿರುವ ತಪ್ಪು ಸಂದೇಶದಿಂದ ಈ ಆರೋಪಗಳು ಕೇಳಿಬಂದಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಮತ್ತೊಂದೆಡೆ ಬಂಡಾಯ ಶಾಸಕರನ್ನು ಕಾನೂನಿನ ಹಿಡಿತದಲ್ಲಿ ಸಿಲುಕಿಸಲು ಕಾರ್ಯತಂತ್ರ ಹೆಣೆದಿರುವ ಉದ್ಧವ್ ಠಾಕ್ರೆ ಗುವಾಹಟಿಯಲ್ಲಿ ಬೀಡು ಬಿಟ್ಟಿರುವ 16 ಬಂಡಾಯ ಶಾಸಕರ ಅನರ್ಹತೆಗೆ ವಿಧಾನಸಭೆಯ ಉಪಾಧ್ಯಕ್ಷರಿಗೆ ಅರ್ಜಿ ನೀಡಿದ್ದು, ಸಿಎನ್‌ಪಿ ಶಾಸಕರಾಗಿರುವ ಉಪಾಧ್ಯಕ್ಷ ನರಹರಿ ಝೀರ್ವಾಲ್, ಈ ಶಾಸಕರಿಗೆ ಅನರ್ಹತೆಯ ನೋಟಿಸ್ ಜಾರಿ ಮಾಡಿದ್ದಾರೆ. ಜೂ.27ರೊಳಗೆ ಲಿಖಿತ ಉತ್ತರ ಸಲ್ಲಿಸುವಂತೆ ಸೂಚಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಇಂದು ಮಾತನಾಡಿದ ಉದ್ಧವ್ ಠಾಕ್ರೆ, ಬಿಜೆಪಿ ಮತ್ತು ಬಂಡಾಯ ನಾಯಕ ಏಕನಾಥ್ ಶಿಂಧೆ ವಿರುದ್ಧ ಹರಿಹಾಯ್ದಿದ್ದಾರೆ. ಬಿಜೆಪಿ ಚುನಾಯಿತ ಶಿವಸೇನಾ ನಾಯಕರನ್ನು ಕಿತ್ತುಕೊಳ್ಳಲು ಹಾಗೂ ಶಿವಸೇನೆಯನ್ನು ಮುಗಿಸಲು ಪ್ರಯತ್ನಿಸುತ್ತಿದೆ ಎಂದಿರುವ ಅವರು, ಬಿಜೆಪಿ ಜೊತೆ ಕೈ ಜೋಡಿಸುವಂತೆ ಶಾಸಕರು ಒತ್ತಡ ಹೇರುತ್ತಿದ್ದಾರೆ ಎಂದು ಏಕನಾಥ್ ಶಿಂಧೆ ಹೇಳಿದ್ದಾರೆ. ಆದರೆ ಆ ಶಾಸಕರನ್ನು ನನ್ನ ಬಳಿಗೆ ಕರೆತನ್ನಿ ಚರ್ಚಿಸೋಣ ಎಂದು ನಾನು ಹೇಳಿದ್ದೆ. ಆದರೆ ಅವರು ಹಾಗೆ ಮಾಡಲಿಲ್ಲ. ಅನೇಕ ಬಂಡಾಯ ಶಾಸಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಅವರು ಬಿಜೆಪಿ ಜೊತೆ ಹೋದರೆ ಕ್ಲೀನ್‌ಚಿಟ್ ದೊರೆಯುತ್ತದೆ. ನಮ್ಮ ಜೊತೆಗಿದ್ದರೆ ಜೈಲಿಗೆ ಹೋಗುತ್ತಾರೆ ಎಂಬ ಭಯ ಅವರಿಗೆ ಕಾಡುತ್ತಿದೆ ಎಂದರು.

ಪಕ್ಷ ನಡೆಸಲು ನಾನು ಅಸಮರ್ಥನೆಂದು ಕಾರ್ಯಕರ್ತರು ಭಾವಿಸಿದರೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವೆ. ಶಿವಸೇನೆಗೆ ಸಿದ್ಧಾಂತವಿದೆ. ಹಿಂದೂ ಮತ ಬ್ಯಾಂಕ್ ಅನ್ನು ಯಾರೊಂದಿಗೂ ಹಂಚಿಕೊಳ್ಳಲು ಶಿವಸೇನೆ ಬಯಸದ ಕಾರಣ ನಮ್ಮ ಪಕ್ಷವನ್ನೇ ಮುಗಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಬಾಳ ಠಾಕ್ರೆ ಅವರು ಹಿಂದುತ್ವದ ಮತ ವಿಭಜನೆಯಾಗಬಾರದೆಂದು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದರು. ಆದರೆ ಬಿಜೆಪಿ ನಮ್ಮನ್ನು ಕೆಟ್ಟದಾಗಿ ನಡೆಸಿಕೊಂಡಿದೆ ಎಂದರು. ಏಕನಾಥ್ ಶಿಂಧೆ ಅವರಿಗೆ ಸವಾಲು ಹಾಕಿದ ಉದ್ಧವ್ ಠಾಕ್ರೆ, ಶಿವಸೇನೆ ಮತದಾರರನ್ನು ಸೆಳೆಯಿರಿ ನೋಡೋಣ. ಚುನಾವಣೆಯಲ್ಲಿ ಆಯ್ಕೆಯಾದವರನ್ನು ನೀವು ಕಿತ್ತುಕೊಂಡಿದ್ದೀರಿ ಆದರೆ ನಿಮಗೆ ಧೈರ್ಯವಿದ್ದರೆ ನಿಮ್ಮನ್ನು ಆಯ್ಕೆ ಮಾಡಿದ ಜನರನ್ನು ಕರೆದುಕೊಂಡು ಹೋಗಲು ಸಾಧ್ಯವೇ ಎಂದು ಸವಾಲು ಹಾಕಿದ್ದಲ್ಲದೇ ಪಕ್ಷದಿಂದ ಹೊರ ಹೋಗಲು ಬಯಸುವವರು ಹೋಗಲಿ. ನಾನು ಹೊಸ ಶಿವಸೇನೆಯನ್ನು ರಚಿಸುತ್ತೇನೆ ಎಂದು ಗುಡುಗಿದರು.

ಪ್ರಕಾಶ್ ಪಡುಕೋಣೆ ಭಾಜನ

ಸ್ವೀಕರಿಸಬೇಕೆಂದು ಸರ್ಕಾರದ ಪರವಾಗಿ ಆಹ್ವಾನಿಸಿದರು. ಇದಕ್ಕೆ ಕೃಷ್ಣ ಅವರು ಸಮ್ಮತಿಸಿ, ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಿಸಿ ದರು. ಸಾಧಕರನ್ನು ಆಯ್ಕೆ ಮಾಡಲು ರಾಜ್ಯ ಸರ್ಕಾರದ ಸ್ಟಾರ್ಟಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿತ್ತು.

ಇದರಲ್ಲಿ ಉದ್ಯಮಿ ಮೋಹನದಾಸ್ ಪೈ, ವಿವೇಕಾನಂದ ಯೂತ್ ಮೂವ್‌ಮೆಂಟ್ ಸ್ಥಾಪಕ ಆರ್.ಬಾಲಸುಬ್ರಹ್ಮಣ್ಯಂ, ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಸದಸ್ಯರಾಗಿದ್ದರು. ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್.ವಿನಯದೀಪ್ ಅವರು ಸದಸ್ಯ ಕಾರ್ಯದರ್ಶಿ ಆಗಿದ್ದರು.

ಮತ್ತೆ ಭೂ ಕಂಪನ

ಅಲ್ಲಿನ ಗ್ರಾಮಸ್ಥರು ತಿಳಿಸಿದ್ದಾರೆ. ಬೆಳಗಿನ ವೇಳೆ ಈ ಘಟನೆ ನಡೆದ ಹಿನ್ನೆಲೆಯಲ್ಲಿ ಶಾಲೆಗೆ ತೆರಳಿದ್ದ ಮಕ್ಕಳಿಗೂ ಈ ಕಂಪನದ ಅನುಭವವಾಗಿದೆ. ಭೂಮಿ ಕಂಪಿಸಿದ ಬಗ್ಗೆ ಕೊಡಗು ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೂ ಸ್ಥಳೀಯರು ಮಾಹಿತಿ ರವಾನಿಸಿದರು. ಹಾಸನ, ಕೊಡಗು ಗಡಿ ಭಾಗದಲ್ಲಿ ಕಳೆದ 2 ದಿನಗಳ ಹಿಂದೆ ಲಘು ಭೂ ಕಂಪನವಾಗಿದ್ದು, ಇದರ ಮುಂದುವರೆದ ಭಾಗವಾಗಿ ಕೊಡಗು–ದಕ್ಷಿಣ ಕನ್ನಡ ಜಿಲ್ಲೆಗಳ ಗಡಿ ಭಾಗಗಳಲ್ಲಿ ಕಂಪನವಾಗಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಗೋಡೆ ಬಿರುಕು: ಲಘು ಭೂ ಕಂಪನದಿಂದ ಸಂಪಾಜೆ ಗ್ರಾಮ ಪಂಚಾಯಿತಿ ಸದಸ್ಯ ಅಬುಶಾಲಿ ಎಂಬುವರ ಮನೆಯ ಗೋಡೆಗಳು ಬಿರುಕು ಬಿಟ್ಟಿದೆ. ಮನೆಯ ತಳಪಾಯ, ಗೋಡೆ ಕೂಡ ಬಿರುಕು ಬಿಟ್ಟು ಹಾನಿಯಾಗಿದೆ. ಕೊಡಗು–ಸುಳ್ಯ ಗಡಿ ಗ್ರಾಮದ ಕೆಲವು ಮನೆಗಳ ಗೋಡೆಗಳಲ್ಲೂ ಬಿರುಕು ಕಾಣಿಸಿಕೊಂಡಿರುವ ಬಗ್ಗೆ ವರದಿಯಾಗಿದ್ದು, ಪ್ರಾಕೃತಿಕ ವಿಕೋಪದ ಕರಿ ಛಾಯೆ ಈ ಗ್ರಾಮಗಳಲ್ಲಿ ಮನೆ ಮಾಡಿದೆ.

ವಿಕೋಪ ಆತಂಕ: ಭೂಮಿ ಕಂಪಿಸಿದ ಕುರಿತು ಮಾಹಿತಿ ಹಂಚಿಕೊಂಡಿರುವ ಚೆಂಬು ನಿವಾಸಿ ಹೊಸೂರು ರವಿ, ಕಳೆದ 4 ವರ್ಷಗಳ ಹಿಂದೆ ಇದೇ ರೀತಿ ಭೂಮಿ ಕಂಪಿಸಿತ್ತು. ಆನಂತರ ಮಳೆಗಾಲದಲ್ಲಿ ಈ ಭಾಗದಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿತ್ತು. ಇದೀಗ ಮಳೆಗಾಲವಾಗಿರುವ ಕಾರಣ ಪ್ರಾಕೃತಿಕ ವಿಕೋಪದ ಆತಂಕ ಕಾಡುತ್ತಿದೆ ಎಂದು ತಿಳಿಸಿದ್ದಾರೆ. ಮತ್ತೋರ್ವ ಕರಿಕೆ ನಿವಾಸಿ ಕೇಶವ ಮಾತನಾಡಿ, ತೋಟದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಭೂಮಿ ಕಂಪಿಸಿದ ಅನುಭವದೊಂದಿಗೆ ಭೂ ಗರ್ಭದಿಂದ ಭಾರೀ ಶಬ್ದ ಕೇಳಿ ಬಂತು. ಇದೇ ವೇಳೆ ಮನೆಯಿಂದಲೂ ಕರೆ ಮಾಡಿ ಭೂ ಕಂಪನವಾದ ಬಗ್ಗೆ ಮಾಹಿತಿ ನೀಡಿದರು ಎಂದು ಹೇಳಿದರು.

ಆತಂಕ ಅನಗತ್ಯ: ಈ ಭೂಕಂಪನದಲ್ಲಿ ಜೀವ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಆದರೆ ಹಲವು ಸೆಕೆಂಡ್‌ಗಳಷ್ಟು ಸಮಯ ಕಂಪನದ ಅನುಭವವಾಗಿದೆ. ಕೊಡಗು ಜಿಲ್ಲೆ 'ಝೋನ್–3' ಬರುತ್ತದೆ. ಹೀಗಾಗಿ ಭೂ ಕಂಪನದ ಅನುಭವ ಸಂಪಾಜೆ, ಪೆರಾಜೆ ಸ್ಥಳಗಳಲ್ಲಿ ಆಗಿರುವ ಸಾಧ್ಯತೆ ಇದೆ. ಈ ಕಂಪನದಿಂದ ಭಯಪಡುವ ಅಗತ್ಯವಿಲ್ಲ ಎಂದು ಕಂಪನದಿಂದ ಮನೆಯಲ್ಲಿರುವ ವಸ್ತು ಅಲುಗಾಡಬಹುದು. ಜನತೆ ಗಾಬರಿ ಆಗುವ ಅವಶ್ಯಕತೆಯಿಲ್ಲ ಕೊಡಗು ಜಿಲ್ಲಾಡಳಿತ ಹೇಳಿದೆ.

'ಅಮೃತ ಭಾರತಿಗೆ ಕನ್ನಡದಾರತಿ'ಯಲ್ಲಿ ದೇಶಭಕ್ತಿ ಝೇಂಕಾರ

ಐತಿಹಾಸಿಕ ರಾಮಸ್ವಾಮಿ ವೃತ್ತದಲ್ಲಿ ವರ್ಣರಂಜಿತ ಸಾಂಸ್ಕೃತಿಕ ಮೆರವಣಿಗೆ



'ಅಮೃತ ಭಾರತಿಗೆ ಕನ್ನಡದಾರತಿ' ವಿದ್ಯಾರ್ಥಿಗಳ ಸಾಂಸ್ಕೃತಿಕ ಮೆರವಣಿಗೆಯ ವಿಹಂಗಮ ದೃಶ್ಯ



ನೃತ್ಯ ಪ್ರದರ್ಶಿಸುತ್ತಿರುವ ವಿದ್ಯಾರ್ಥಿಗಳು



ಮೈಸೂರು,ಜೂ.25(ಎಂಟಿವೈ)– ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದಲ್ಲಿ ನಗರದ ವಿವಿಧ ಶಾಲಾ–ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು, ವಿವಿಧ ಜಾನಪದ ಕಲಾತಂಡಗಳ ಕಲಾವಿದರು ಪಾಲ್ಗೊಂಡು ಭಾರತಾಂಭೆಗೆ ಜಯಕಾರ ಕೂಗುವ ಮೂಲಕ ದೇಶಭಕ್ತಿ ಮೆರೆದರು.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ದೂರವುಳಿದಿದ್ದ ವಿದ್ಯಾರ್ಥಿಗಳು ಇಂದು ನಡೆದ ಈ ಕಾರ್ಯಕ್ರಮದಲ್ಲಿ ಸಂಭ್ರಮದಿಂದ ಪಾಲ್ಗೊಂಡು ಗಮನ ಸೆಳೆದರು. ಕಾಲೇಜು ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಪು ಧರಿಸಿ ಆಗಮಿಸಿದ್ದರೆ, ವಿವಿಧ ನೃತ್ಯಶಾಲೆಗಳ ನೃತ್ಯ ಕಲಾವಿದರು ಭರತನಾಟ್ಯ ಉಡುಗೆಯಲ್ಲಿ ಆಗಮಿಸಿ ಮೆರಗು ಹೆಚ್ಚಿಸಿದರು. ಇದರೊಂದಿಗೆ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಕಾರ್ಯಕ್ರಮದ ವೈಭವವನ್ನು ಇಮ್ಮಡಿಗೊಳಿಸಿದವು. ಇದರಿಂದ ಹಲವು ದಿನಗಳ ಬಳಿಕ ಮೈಸೂರಲ್ಲಿ ದೊಡ್ಡ ಮಟ್ಟದಲ್ಲಿ ನಡೆದ ಸಾಂಸ್ಕೃತಿಕ ಹಬ್ಬಕ್ಕೆ ಸಾವಿರಾರು ಮಂದಿ ಸಾಕ್ಷಿಯಾದರು.

> **ವಿದ್ಯಾರ್ಥಿಗೆ ಕಪಾಳ ಮೋಕ್ಷ ಮಾಡಿದ ಮಹಿಳಾ ಸಬ್ ಇನ್ಸ್‌ಪೆಕ್ಟರ್**
>
> ಚಾಮರಾಜ ಜೋಡಿ ರಸ್ತೆಯಲ್ಲಿ ಮೆರವಣಿಗೆ ಸಾಗುತ್ತಿದ್ದ ವೇಳೆ ರಸ್ತೆಯ ಎರಡು ಬದಿಯಲ್ಲಿ ನೂರಾರು ಮಂದಿ ನಿಂತು ಮೆರವಣಿಗೆಯನ್ನು ಕಣ್ತುಂಬಿಕೊಳ್ಳುತ್ತಿದ್ದರು. ಈ ವೇಳೆ ರಸ್ತೆ ವಿಭಜಕದಲ್ಲಿ ನಿಂತು ಹಲವು ಮಂದಿ ಮೊಬೈಲ್‌ನಲ್ಲಿ ಈ ವೈಭವವನ್ನು ಚಿತ್ರೀಕರಿಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಯೊಬ್ಬ ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದ. ಈ ವೇಳೆ ವಿಭಜಕದಲ್ಲಿ ನೆಡಲಾಗಿದ್ದ ಗಿಡ ಎಡವಿದ ಆ ವಿದ್ಯಾರ್ಥಿ ರಸ್ತೆ ಮೇಲೆ ಮುಗ್ಗರಿಸಿದ. ಬ್ಯಾಲೆನ್ಸ್ ತಪ್ಪಿದ ವಿದ್ಯಾರ್ಥಿ ಆಕಸ್ಮಿಕವಾಗಿ ಮಹಿಳಾ ಸಬ್ ಇನ್ಸ್‌ಪೆಕ್ಟರ್‌ನ ಭುಜ ತಾಗಿಸಿದ. ಇದರಿಂದ ಗಾಬರಿಗೊಂಡು ವಿದ್ಯಾರ್ಥಿ 'ಸಾರಿ' ಕೇಳಿದರೂ ಸಬ್ ಇನ್ಸ್‌ಪೆಕ್ಟರ್ ವಿದ್ಯಾರ್ಥಿ ಕಪಾಳಕ್ಕೆ ಭಾರಿಸಿದರು.

ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಐತಿಹಾಸಿಕ ರಾಮಸ್ವಾಮಿ ವೃತ್ತದಲ್ಲಿ ಆಯೋಜಿಸಿದ್ದ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಮುಡಾ ವೃತ್ತ ಆರ್‌ಟಿಓ ವೃತ್ತ ಶಾಂತಲಾ ವೃತ್ತ ಕೌಟಿಲ್ಯ ಮತ್ತು ಏಕಲವ್ಯ ವೃತ್ತದಿಂದ ರಾಮಸ್ವಾಮಿ ವೃತ್ತಕ್ಕೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು ಸಾವಿರಾರು ಮಂದಿ ವಿದ್ಯಾರ್ಥಿಗಳು ರಾಮಸ್ವಾಮಿ ವೃತ್ತದಲ್ಲಿ ಸೇರಿದ್ದರಿಂದ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಮೆರವಣಿಗೆಗೆ ಚಾಲನೆ: ರಾಮಸ್ವಾಮಿ ವೃತ್ತದಲ್ಲಿ ನೂತನವಾಗಿ ಪ್ರತಿಷ್ಠಾಪಿಸಲಾಗಿದ್ದ 'ಅಮೃತ ಭಾರತಿಗೆ ಕನ್ನಡದಾರತಿ' ಫಲಕವನ್ನು ಶಾಸಕ ಎಸ್.ಎ. ರಾಮದಾಸ್ ಅನಾವರಣಗೊಳಿಸಿ, ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಭಾರತಾಂಭೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥ್ ಸ್ವಾಮಿ, ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೆರವಣಿಗೆಯಲ್ಲಿ ಮೇಳೈಸಿದ ದೇಶಭಕ್ತಿಯ ಝೇಂಕಾರ: ಮೆರವಣಿಗೆಗೆ ಚಾಲನೆ ದೊರೆಯುತ್ತಿದ್ದಂತೆ ಸಾವಿರಾರು ನೃತ್ಯಗಾರ್ತಿಯರು ನೃತ್ಯ ಮಾಡಿಕೊಂಡೇ ಮೆರವಣಿಗೆಯಲ್ಲಿ ಸಾಗಿದರು. ಕೆಲವರು ಭರತನಾಟ್ಯದ ಮಾದರಿಯಲ್ಲಿ ನೃತ್ಯ ಮಾಡಿಕೊಂಡು ಸಾಗಿದರೆ, ಮತ್ತೆ ಕೆಲವರು ತಮಟೆ, ಡೊಳ್ಳು ಕುಣಿತ, ಚಂಡೆ ಮದ್ದಳೆ ವಾದಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಗಮನ ಸೆಳೆದರು. ಚಿಕ್ಕ ಮಕ್ಕಳಾದಿಯಾಗಿ ಗೃಹಿಣಿಯರು ನೃತ್ಯ ಮಾಡಿದ್ದು ವಿಶೇಷವಾಗಿತ್ತು. ಮೆರವಣಿಗೆಯಲ್ಲಿ ವಿವಿಧ ನೃತ್ಯ ಶಾಲೆ ಹಾಗೂ ಶಾಲಾ–ಕಾಲೇಜು ಗಳ ಸುಮಾರು 6 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರಿಂದ ಕಾರ್ಯಕ್ರಮದ ಮೆರಗು ಹೆಚ್ಚಿಸಿತ್ತು.

ಇದರೊಂದಿಗೆ ಕಂಸಾಳೆ, ಗೊಂಬೆ ಕುಣಿತ, ಡೊಳ್ಳು ಕುಣಿತ, ಕೊಂಬು–ಕಹಳೆ, ಮಂಗಳವಾದ್ಯ, ತಮಟೆ, ನಗಾರಿ, ಚಂಡೆ ಮದ್ದಳೆ, ವಿವಿಧ ವೇಷ ಧರಿಸಿದ್ದ ಕಲಾವಿದರು ಸೇರಿದಂತೆ 15ಕ್ಕೂ ಹೆಚ್ಚು ಕಲಾತಂಡಗಳು ಮೆರವಣಿಗೆಯುದ್ದಕ್ಕೂ ಪ್ರದರ್ಶನ ನೀಡಿ ಗಮನ ಸೆಳೆದವು.

ರಾರಾಜಿಸಿದ ತ್ರಿವರ್ಣ ಧ್ವಜ: ಮೆರವಣಿಗೆಯಲ್ಲಿ 250 ಮೀಟರ್‌ಗಿಂತ ದೊಡ್ಡ ತ್ರಿವರ್ಣ ಧ್ವಜವನ್ನು ವಿದ್ಯಾರ್ಥಿಗಳು ಕೊಂಡೊಯ್ಯುವ ಮೂಲಕ ಗಮನ ಸೆಳೆದರು. ಭಾರತಾಂಭೆಗೆ ಜಯ ಘೋಷ ಹಾಕುತ್ತಾ ತ್ರಿವರ್ಣ ಧ್ವಜ ಹೊತ್ತು ಸಾಗಿದ ವಿದ್ಯಾರ್ಥಿಗಳು ದೇಶಭಕ್ತಿ ಮೆರೆದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಮಹತ್ವ ಸಾರಿದ ಶಾಸಕ ರಾಮದಾಸ್

ಮೈಸೂರು,ಜೂ.25(ಎಂಟಿವೈ)– ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಛಾಪು ಮೂಡಿಸಿರುವ ರಾಮಸ್ವಾಮಿಯವರಂತಹ ದೇಶಭಕ್ತರು ಮೈಸೂರಲ್ಲಿ ಇನ್ನೂ ಹೆಚ್ಚಾಗಬೇಕು ಎಂದು ಶಾಸಕ ಎಸ್. ಎ.ರಾಮದಾಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ದೇಶಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ನಿಟ್ಟಿನಲ್ಲಿ ನಡೆದ ಹೋರಾಟದಲ್ಲಿ ಮೈಸೂರಿನ ಪಾತ್ರ ಹೆಚ್ಚಾಗಿದೆ. ಅಸಹಕಾರ ಚಳುವಳಿ ಮಾತ್ರವಲ್ಲದೆ, ವಿದೇಶಿ ವಸ್ತುಗಳನ್ನು ಸುಡುವ ಮೂಲಕ ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರಿಗೆ ಸಡ್ಡು ಹೊಡೆದಿದ್ದರು. ಅಂತಹವರಲ್ಲಿ ರಾಮಸ್ವಾಮಿ ಒಬ್ಬರು ಎಂದರು.

ಮೈಸೂರಿನ ಮಹಾರಾಜ ಕಾಲೇಜು ವಿದ್ಯಾರ್ಥಿಯಾಗಿದ್ದ ರಾಮಸ್ವಾಮಿ ಅವರು ಅಪ್ರತಿಮ ದೇಶಭಕ್ತರು. ಪ್ರಥಮ ವರ್ಷದ ಪದವಿ ವಿದ್ಯಾರ್ಥಿಯಾಗಿದ್ದ ವೇಳೆ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪ್ರಸ್ತುತ ಇರುವ ರಾಮಸ್ವಾಮಿ ವೃತ್ತದ ಸ್ಥಳದಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಪಾಲ್ಗೊಂಡಿದ್ದ ರಾಮಸ್ವಾಮಿ, ವಿದೇಶಿ ಬಟ್ಟೆ ಸುಡುವ ವೇಳೆ ಬ್ರಿಟಿಷರು ಹಾರಿಸಿದ ಎರಡು ಗುಂಡು ರಾಮಸ್ವಾಮಿ ಅವರ ದೇಹ ಹೊಕ್ಕಿದವು. ಅವರು ವೀರ ಮರಣವನ್ನಪ್ಪಿದ ಪುಣ್ಯಸ್ಥಳ ಇದಾಗಿದೆ. ಕೇವಲ 19ನೇ ವಯಸ್ಸಲ್ಲಿ ರಾಮಸ್ವಾಮಿ ಅವರು ವೀರಮರಣವನ್ನಪ್ಪಿದರು ಎಂದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ 75 ವರ್ಷದ ಸಂಭ್ರಮಾಚರಣೆಯನ್ನು ದೇಶದುದ್ದಗಲಕ್ಕೂ ಆಚರಿಸಲಾಗುತ್ತಿದೆ. ಮೈಸೂರಲ್ಲೂ ಅಮೃತ ಭಾರತಿಗೆ ಕನ್ನಡದಾರತಿ ಹೆಸರಲ್ಲಿ ಆಚರಿಸಲಾಗುತ್ತಿದೆ. ರಾಮಸ್ವಾಮಿಯಂತಹ ಅಪ್ಪಟ ದೇಶಭಕ್ತರ ಸಂಖ್ಯೆ ಮೈಸೂರಲ್ಲಿ ಹೆಚ್ಚಾಗಬೇಕು. ಆ ನಿಟ್ಟಿನಲ್ಲಿ ರಾಮಸ್ವಾಮಿ ವೃತ್ತದ ಮಹತ್ವವನ್ನು ಎಲ್ಲರಿಗೂ ಮನ ವರಿಕೆ ಮಾಡಿಕೊಡಲು ಈ ಕಾರ್ಯಕ್ರಮ ವನ್ನು ರಾಮಸ್ವಾಮಿ ವೃತ್ತದಲ್ಲೇ ಆಯೋಜಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಪ್ರೇರಣೆ ಇನ್ನಷ್ಟು ಮಂದಿಗೆ ದೊರಕಲೆಂಬ ಮುಂದಾಲೋಚನೆಯಿಂದ ರಾಮಸ್ವಾಮಿ ವೃತ್ತ ನಮ್ಮ ಆಯ್ಕೆಯಾಗಿದೆ ಎಂದರು.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದ ಅಂಗವಾಗಿ ಪ್ರತಿಷ್ಠಾಪಿಸಲಾಗಿರುವ ಫಲಕಕ್ಕೆ ಶಾಸಕ ಎಸ್.ಎ.ರಾಮದಾಸ್ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಹಾಗೂ ಇನ್ನಿತರರನ್ನು ಕಾಣಬಹುದು.

3 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ ಅಭಿವೃದ್ಧಿ



ಮೈಸೂರು, ಜೂ.25(ಎಸ್‌ಪಿಎನ್)–ಕುವೆಂಪುನಗರ ವಿಶ್ವ ಮಾನವ ಜೋಡಿ ರಸ್ತೆಯಲ್ಲಿರುವ ಶ್ರೀ ಶಿವಕುಮಾರಸ್ವಾಮೀಜಿ ವೃತ್ತದದಲ್ಲಿ ಪಾಲಿಕೆ ವತಿಯಿಂದ ಮೂರು ಕೋಟಿ ರೂ. ವೆಚ್ಚದಲ್ಲಿ ವೃತ್ತದ ಅಭಿವೃದ್ಧಿ ಹಾಗೂ ಶ್ರೀ ಶಿವಕುಮಾರ ಸ್ವಾಮೀಜಿ ಪುತ್ಥಳಿ ಸ್ಥಾಪನೆಗೆ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶ್ರೀಗಳು, ಯಾವುದೇ ಸೌಕರ್ಯಗಳು ಇಲ್ಲದ ಸಂದರ್ಭದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳನ್ನು ತೆರೆದು ಲಕ್ಷಾಂತರ ಮಕ್ಕಳಿಗೆ ವಿದ್ಯೆ ನೀಡಲು ಸಹಕಾರಿಯಾಗಿದ್ದಾರೆ. ಹಾಗಾಗಿ ಶ್ರೀಗಳ ಪುತ್ಥಳಿ ನಿರ್ಮಾಣದ ಜೊತೆಗೆ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿದರು. ಈ ವೇಳೆ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪಾಲಿಕೆ ಸದಸ್ಯರಾದ ಶಿವಕುಮಾರ್, ಜಗದೀಶ್, ವಲಯ ಕಚೇರಿ –3ರ ಆಯುಕ್ತ ಸತ್ಯಮೂರ್ತಿ, ಎನ್.ಜಿ.ಗಿರೀಶ್, ಅಧೀಕ್ಷಕ ಅಭಿಯಂತರ ಮಹೇಶ್ ಇತರರಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಜೂ. 25– ಮೈಸೂರಿನ ಸದ್ವಿದ್ಯಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಪುಣ್ಯ ವಿ. ಗೌಡ ದ್ವಿತೀಯ ಪಿಯು ಪರೀಕ್ಷೆಯಲ್ಲಿ 557 (ಶೇ. 93) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ಖ್ಯಾತ ಸಮಾಜ ಸೇವಕ ದಿವಂಗತ ಛತ್ರದ ಪುಟ್ಟಸ್ವಾಮಯ್ಯ ನವರ ಮೊಮ್ಮಗ ವೆಂಕಟೇಶ್ ಅವರ ಪುತ್ರಿ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಜೂ. 25– ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಕುರುಬಾರಹಳ್ಳಿ ನಿವಾಸಿ ಎಂ.ಎ. ಕಮಲ ಅವರನ್ನು ನೇಮಕ ಮಾಡಲಾಗಿದೆ

ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ನಮ್ಮ ಆದ್ಯ ಕರ್ತವ್ಯ

- ಸಂಸದ ಪ್ರತಾಪ್ ಸಿಂಹ ಕಿವಿಮಾತು
- ಯುವಜನರಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅರಿವು ಮೂಡಿಸುವುದು ಅವಶ್ಯ

ಮೈಸೂರು,ಜೂ.25(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಶ್ರಮಿಸಿದ ಸ್ವಾತಂತ್ರ್ಯ ಹೋರಾಟಗಾರರ ಸ್ಮರಿಸುವುದರೊಂದಿಗೆ ಅವರ ತ್ಯಾಗ ಬಲಿದಾನಗಳನ್ನು ಗೌರವಿಸಬೇಕು ಎಂದು ಸಂಸದ ಪ್ರತಾಪ ಸಿಂಹ ಸಲಹೆ ನೀಡಿದ್ದಾರೆ.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಶನಿವಾರ ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಈ ಶುಭ ಅಮೃತ ಮಹೋತ್ಸವ ದೇಶದಾದ್ಯಂತ ಮೊಳಗುತ್ತಿದೆ. ಸ್ವಾತಂತ್ರ್ಯ ಹೋರಾಟದ ಕಹಳೆ ಮೊಳಗಿದ್ದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು ಎಂಬ ಉದ್ದೇಶದಿಂದ ಇಂದು 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ದೇಶದಾದ್ಯಂತ ಆಜಾದಿ ಕಾ ಅಮೃತ ಮಹೋತ್ಸವ ಹೆಸರಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಲಾಗುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ವಿಧಾನಪರಿಷತ್ ಸದಸ್ಯ ಕೆ.ಎಸ್.ಕೇಶವ ಪ್ರಸಾದ್, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ಕನ್ನಡ ನಾಡಿನ ವೀರರನ್ನು ಕುರಿತ ಕಥನ, ಕಿರು ಹೊತ್ತಿಗೆಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು. ತನ್ಮೂಲಕ ಅವರ ಆದರ್ಶ–ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಭಾರತಕ್ಕೆ ತನ್ನದೇ ಅದ್ಭುತವಾದ ಇತಿಹಾಸವಿದೆ. ನಮ್ಮ ಸಂಸ್ಕೃತಿ ಪ್ರಾಚೀನ ಸಂಸ್ಕೃತಿಯಾಗಿದ್ದು, ತುಂಬಾ ಮಹತ್ವ ಪಡೆದಿದೆ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮೊಘಲರ ವಿರುದ್ಧ ಹೋರಾಟದಲ್ಲಿ ಭಾರತೀಯರು ನಾವೆಲ್ಲರೂ ಒಂದೇ ಎಂಬುದನ್ನು ತೋರಿಸಿಕೊಟ್ಟರು. ಇಂತಹ ಹೋರಾಟಗಳು 1820ರಲ್ಲೇ ನಡೆದಿತ್ತು. ಉಪ್ಪಿನ ಸತ್ಯಾಗ್ರಹವೂ ಐಕ್ಯತೆಯ ಭಾವವನ್ನು ಮೂಡಿಸಿತು. ಡಾ.ಬಿ.ಆರ್. ಅಂಬೇಡ್ಕರ್ ದಲಿತರು, ಶೋಷಿತರು, ಹಿಂದುಳಿದ ವರ್ಗಗಳಲ್ಲಿಯೂ ಸ್ವಾತಂತ್ರ್ಯದ ಅರಿವು ಮೂಡಿಸಿ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮನದಟ್ಟು ಮಾಡಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಸೇರಿದ್ದ ಪ್ರಥಮ ಮಹಿಳೆ ಸುಬ್ಬಮ್ಮನವರು. ಇವರು ಒಂದು ವರ್ಷದ ಮಗುವಿನೊಂದಿಗೆ ಜೈಲು ಸೇರಿದ್ದರು ಎಂದು ಸ್ಮರಿಸಿದರು.

ಹೋರಾಟಗಾರರಿಗೆ ಸನ್ಮಾನ: ಇದೇ ವೇಳೆ ಸ್ವಾತಂತ್ರ್ಯ ಹೋರಾಟಗಳಲ್ಲಿ ಪಾಲ್ಗೊಂಡಿದ್ದ ಮೈಸೂರಿನ ರೇವಣ್ಣ, ರಂಗಶೆಟ್ಟಿ, ಸೋಮಶೇಖರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೃತ್ಯ ಶಾಲೆಗಳಾದ ಗುರುದೇವ ಅಕಾಡೆಮಿ, ನೃತ್ಯಾಲಯ ಟ್ರಸ್ಟ್, ಲಾಸ್ಯ ರಂಜನ ನೃತ್ಯಶಾಲೆ, ರಂಗ ಲಕ್ಷಣಂ ಫೌಂಡೇಶನ್ ಮೈಸೂರು, ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾನಿಲಯ, ಚಂಪಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಶ್ರೀ ನೃತ್ಯಾನಿಕೇತನ ನೃತ್ಯ ಶಾಲೆಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಎಂ.ಆರ್.ಕೃಷ್ಣಪ್ಪ ಗೌಡ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಆಶಾ ನಾಗಭೂಷಣ ಸಿಂಗ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಪಾಲಿಕೆ ಹೆಚ್ಚುವರಿ ಆಯುಕ್ತರಾದ ಎಂ.ರೂಪಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 26 ಜೂನ್ 2022

ಒಂದೂವರೆ ತಿಂಗಳಲ್ಲಿ ದುದ್ದ ವ್ಯಾಪ್ತಿಯ ಕೆರೆಗಳಿಗೆ ನೀರು

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಸಿಎಸ್‌ಪಿ

ಮಂಡ್ಯ, ಜೂ.25(ಮೋಹನ್‌ರಾಜ್)– ಶ್ರೀರಂಗಪಟ್ಟಣದ ನಿಮಿಷಾಂಭ ದೇವಾಲಯದ ಮಡಿಲಿನಿಂದ ಕಾವೇರಿ ನೀರು ತರುವ ಮೂಲಕ ದುದ್ದ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯನ್ನು ಮುಂದಿನ ಒಂದೂವರೆ ತಿಂಗಳಲ್ಲಿ ಉದ್ಘಾಟಿಸಿ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಮೇಲುಕೋಟೆ ವಿಧಾನಸಭಾ ಕ್ಷೇತ್ರದ ದುದ್ದ ಹೋಬಳಿಯ ಮುದಗಂದೂರು ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, 32 ಲಕ್ಷ ರೂ. ವೆಚ್ಚದಲ್ಲಿ ಸರ್ಕಾರಿ ಪ್ರೌಢಶಾಲೆಯ 8 ಕೊಠಡಿ ಕಾಮಗಾರಿಗಳು, 30 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಭವನ, 16 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿ, 5 ಲಕ್ಷ ವೆಚ್ಚದಲ್ಲಿ ಮಾಸ್ತಮ್ಮ ದೇವಾಲಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ಮೇಲುಕೋಟೆ ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಶಿವಳ್ಳಿ ಮುಖ್ಯರಸ್ತೆಯಿಂದ ಮುದಗಂದೂರು– ಬೊಮ್ಮನಹಳ್ಳಿ ಸೇರುವ ರಸ್ತೆ ಅಭಿವೃದ್ಧಿಗೆ 5 ಕೋಟಿ, ಬೆಟ್ಟಹಳ್ಳಿ ರಸ್ತೆ ಅಭಿವೃದ್ಧಿಗೆ 5 ಕೋಟಿ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ. ಮುಂದಿನ ದಿನಗಳಲ್ಲಿ ಈ ಭಾಗದ ಗ್ರಾಮಗಳ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಕೆರೆಗೆ ನೀರು ತುಂಬಿಸಿ, ವಿದ್ಯುಚ್ಛಕ್ತಿ ಸರಿಯಾಗಿ ಕೊಟ್ಟರೆ ರೈತರ ಬದುಕು ಹಸನಾಗುತ್ತದೆ. ಈಗಾಗಲೇ ದುದ್ದ ಹೋಬಳಿ ವಿ.ಸಿ.ಫಾರಂ ಹಾಗೂ ಜಿ.ಮಲ್ಲಿಗೆರೆ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಸಬ್ ಸ್ಟೇಷನ್‌ಗಳಿದ್ದು, ಮುಂದಿನ



ನಾನು 1ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ಸಂದರ್ಭ ಮಾನಿಟರ್ ಕೆಲಸ ನಿರ್ವಹಿಸಿ ನಾಯಕತ್ವದ ಗುಣ ಬೆಳೆಸಿ ಕೊಂಡಿದ್ದರಿಂದ ಜಿಪಂ ಸದಸ್ಯನಾಗುವ ಮೂಲಕ, ಶಾಸಕ, ಸಂಸದ, ಸಚಿವನಾಗಿ ಕಾರ್ಯ ನಿರ್ವಹಿಸಿದ್ದೇನೆ.
–ಸಿ.ಎಸ್.ಪುಟ್ಟರಾಜು, **ಶಾಸಕರು.**

ದಿನಗಳಲ್ಲಿ ಅವಶ್ಯಕತೆ ಇರುವ ಕಡೆ ಮತ್ತೊಂದು ಸಬ್‌ಸ್ಟೇಷನ್ ಅಳವಡಿಸುವ ಮೂಲಕ ಈ ಭಾಗದ ವಿದ್ಯುತ್ ಸಮಸ್ಯೆ ಪರಿಹರಿಸಲಾಗುವುದು ಎಂದರು.

ವಿದ್ಯುತ್ ಇಲಾಖೆ ಅಧಿಕಾರಿಗಳು ಜನರಿಗೆ ಸ್ಪಂದಿಸಬೇಕು. ಜು.2ರಂದು ಮುದಗಂದೂರಲ್ಲಿ ವಿದ್ಯುತ್ ಸಮಸ್ಯೆ ಕುರಿತಂತೆ ವಿದ್ಯುತ್ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ಮಾಡುತ್ತೇನೆ ಎಂದು ಸಾರ್ವಜನಿಕರಿಗೆ ತಿಳಿಸಿದರು.

ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮುದಗಂದೂರಲ್ಲಿ ಹಾಸ್ಟೆಲ್ ನಿರ್ಮಾಣವಾಗಿದೆ. ಇಲ್ಲಿನ ಸರ್ಕಾರಿ ಪ್ರೌಢಶಾಲೆಗೆ ರಂಗಮಂದಿರ, ವಿದ್ಯಾರ್ಥಿಗಳ ವ್ಯಾಸಂಗದ ಅಭಿವೃದ್ಧಿ ದೃಷ್ಟಿಯಿಂದ 8 ಶಾಲಾ ಕೊಠಡಿಗಳನ್ನು ಕೆಆರ್‌ಐಡಿಎಲ್‌ನವರು ನಿರ್ಮಾಣ ಮಾಡುತ್ತಿದ್ದು, ಮುಂದಿನ 3 ತಿಂಗಳೊಳಗೆ ಗುಣಮಟ್ಟದ ಶಾಲಾ ಕೊಠಡಿ ನಿರ್ಮಿಸುತ್ತಾರೆ ಎಂದರು.

ವಿದ್ಯಾರ್ಥಿಗಳು ಉತ್ತಮವಾಗಿ ಅಧ್ಯಯನ ಮಾಡುವ ಮೂಲಕ ತಮ್ಮ ಭವಿಷ್ಯ ರೂಪಿಸಿಕೊಳ್ಳಿ. ತಂದೆ–ತಾಯಿ, ಶಾಲೆ, ಗುರುಗಳಿಗೆ ಗೌರವ ಕೊಡುವ ಕೆಲಸ ಮಾಡಿ. ಮುದಗಂದೂರು ಸರ್ಕಾರಿ ಪ್ರೌಢಶಾಲೆಯನ್ನು ಮಾದರಿ ಶಾಲೆ ಮಾಡುವ ಜವಾಬ್ದಾರಿ ನನ್ನದು ಎಂದರು.

ಮುದಗಂದೂರು ಗ್ರಾಪಂ ಅಧ್ಯಕ್ಷ ಶಂಕರೇಗೌಡ ಮಾತನಾಡಿ, ಇಲ್ಲಿನ ಗ್ರಾಪಂ ಅಮೃತ್ ಗ್ರಾಪಂ ಆಗಿ ಆಯ್ಕೆಯಾಗಿದ್ದು, ಇಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಪ್ರಾರಂಭವಾಗಬೇಕು. ರಾಜೀವ್ ಗಾಂಧಿ ಸೇವಾ ಕೇಂದ್ರ ಆಗಬೇಕು, ಈ ಭಾಗದ ವಿದ್ಯುತ್ ಸಮಸ್ಯೆ ಪರಿಹರಿಸುವ ಕೆಲಸ ಮಾಡಿಕೊಡಿ ಎಂದು ಶಾಸಕರಿಗೆ ಮನವಿ ಮಾಡಿದರು.

ಈ ವೇಳೆ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಜೆಡಿಎಸ್ ಮುಖಂಡ ಹೆಚ್.ಡಿ.ಬಾಲರಾಜು, ತಾಪಂ ಮಾಜಿ ಸದಸ್ಯ ಚಿಕ್ಕಹೊನ್ನೇಗೌಡ, ಗ್ರಾಪಂ ಉಪಾಧ್ಯಕ್ಷೆ ಸವಿತಾ, ಸದಸ್ಯರಾದ ಸತೀಶ್, ರವಿ ನಾಗೇಶ, ಸುಜಾತ, ದ್ರಾಕ್ಷಾಯಿಣಿ, ಸೇರಿದಂತೆ ಇತರರಿದ್ದರು.

ಸ್ಕೂಟರ್ ಹೊತ್ತಿ ಉರಿದ ಪ್ರಕರಣ: ಗಾಯಾಳು ಸಾವು

ಶ್ರೀರಂಗಪಟ್ಟಣ, ಜೂ.25(ಮೋಹನ್‌ರಾಜ್)– ತಾಲೂಕಿನ ದರಸಗುಪ್ಪೆ ಬಳಿ ಸ್ಕೂಟರ್ ಹೊತ್ತಿ ಉರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸವಾರ ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಸಾವನ್ನಪ್ಪಿದ್ದಾರೆ.

ಶಿವರಾಮಯ್ಯ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದವರು. ಶುಕ್ರವಾರ ಸ್ಕೂಟರ್ ಚಾಲನೆ ವೇಳೆ ಇದ್ದಕ್ಕಿದ್ದಂತೆ ಬೆಂಕಿ ಹೊತ್ತುಕೊಂಡು ಬೈಕ್ ಬೆಂಕಿಗೆ ಆಹುತಿಯಾಗಿತ್ತು. ಈ ವೇಳೆ ಸ್ಕೂಟರ್ ಚಾಲನೆ ಮಾಡುತ್ತಿದ್ದ ಶಿವರಾಮಯ್ಯ ಗಂಭೀರವಾಗಿ ಗಾಯಗೊಂಡರೆ ಹಿಂಬದಿ ಸವಾರ ಅನಂತರಾಮಯ್ಯಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ಇಬ್ಬರನ್ನು ರಕ್ಷಿಸಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಶಿವರಾಮಯ್ಯ ಅವರಿಗೆ ಸುಟ್ಟ ಗಾಯಗಳಿಂದ ಲಿವರ್ ಮತ್ತು ಕಿಡ್ನಿಗೆ ಹಾನಿಯುಂಟಾಗಿತ್ತು. ನಿನ್ನೆ ತಡರಾತ್ರಿ ಚಿಕಿತ್ಸೆ ಫಲಕಾರಿಯಾಗದೇ ಶಿವರಾಮಯ್ಯ ಸಾವನ್ನಪ್ಪಿದ್ದಾರೆ.

ನೀರು ಸರಬರಾಜಿನಲ್ಲಿ ವ್ಯತ್ಯಯ

ಮಂಡ್ಯ, ಜೂ.24– ಶ್ರೀರಂಗಪಟ್ಟಣ ಸಮೀಪದ ಮೂಲ ಸ್ಥಾವರದಲ್ಲಿ ಜೂ.27ರಂದು ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಸದರಿ ದಿನದಂದು ಮಂಡ್ಯ ನಗರಕ್ಕೆ ನೀರನ್ನು ಪಂಪು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಜೂ.27 ಮತ್ತು 28ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಣ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗ್ರಹಾರಬಾಚಹಳ್ಳಿ ಗ್ರಾಪಂಗೆ ಸಾವಿತ್ರಮ್ಮ ಅಧ್ಯಕ್ಷೆ

ಕೆ.ಆರ್.ಪೇಟೆ, ಜೂ.25(ಶ್ರೀನಿವಾಸ್)– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಸಾವಿತ್ರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಭಾಗ್ಯಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸಾವಿತ್ರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಸತೀಶ್ ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಕೆ.ದೇವೇಗೌಡ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ ಸಾವಿತ್ರಮ್ಮ ಅವರನ್ನು ಜೆಡಿಎಸ್ ಮುಖಂಡರಾದ ಹೆಚ್.ಟಿ.ಮಂಜು,



ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ತಾಪಂ ಮಾಜಿ ಅಧ್ಯಕ್ಷ ವಿ.ಎನ್.ಮಹದೇವೇಗೌಡ, ಮಾಜಿ ಸದಸ್ಯ ಮೋಹನ್, ಮುಖಂಡರಾದ ಬಿ.ವಿ.ನಾಗೇಶ್, ರಘು, ಪಟೇಲ್ ನಾಗೇಗೌಡ, ರಾಮಕೃಷ್ಣೇಗೌಡ, ಕಿರಣ್, ಜಿ.ಕೆ.ಪ್ರದೀಪ್, ಟಿಎಪಿಸಿಎಂಎಸ್ ನಿರ್ದೇಶಕ ಅಶೋಕ್, ಜಿಪಂ ಮಾಜಿ ಸದಸ್ಯ ಎ.ಬಿ.ಕುಮಾರ್, ಗ್ರಾಪಂ ಉಪಾಧ್ಯಕ್ಷ ಕುಮಾರಗೌಡ, ಸದಸ್ಯರಾದ ಆರ್.ರಮೇಶ್, ಚನ್ನೇಗೌಡ, ಫಯಾಜ್ ಉಲ್ಲಾ ಖಾನ್, ರಮಾನಂದ್, ನೇತ್ರಾವತಿ, ಶಶಿರೇಖಾ, ಚಿಲ್ಲದಹಳ್ಳಿ ಆರ್.ಶ್ರೀನಿವಾಸ್, ರೇಣುಕಾ, ಪ್ರೇಮಾ, ನಂಜೇಗೌಡ, ದಿನೇಶ್ ಮತ್ತಿತರರು ಅಭಿನಂದಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಶ್ರೀರಂಗಪಟ್ಟಣ, ಜೂ.25(ವಿನಯ್ ಕಾರೇಕುರ)– ದಿ.ಜಿ.ಮಾದೇಗೌಡರ ವರ್ಚಸ್ಸಿನಿಂದ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ಜಯಗಳಿಸಿದ್ದಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ತಾಲೂಕಿನ ಬಾಬುರಾಯನಕೊಪ್ಪಲು ಹಾಗೂ ಮಿಣಜಿ ಬೋರನ ಕೊಪ್ಪಲು ಗ್ರಾಮದಲ್ಲಿ 23 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆ ಈಗಲೂ ಜೆಡಿಎಸ್ ಭದ್ರಕೋಟೆ. ಪದವೀಧರ ಚುನಾವಣೆ ಸೋಲಿನಿಂದ ಪಕ್ಷದ ವರ್ಚಸ್ಸು ಕುಗ್ಗಿಲ್ಲ. ಕಾವೇರಿ ಸೇರಿದಂತೆ ಜಿಲ್ಲೆಯ ಹಲವು ಸಮಸ್ಯೆಗಳ ಬಗ್ಗೆ ಜಿ.ಮಾದೇಗೌಡರು ನಡೆಸಿದ ಹೋರಾಟ ಇಂದಿಗೂ ಜಿಲ್ಲೆಯ ಜನಮಾನಸದಲ್ಲಿ ಉಳಿದಿದ್ದು, ಅವರ ವರ್ಚಸ್ಸು ಹಾಗೂ ಇತ್ತೀಚೆಗೆ ಮಾದೇಗೌಡರು ನಿಧನರಾದ ಹಿನ್ನೆಲೆಯಲ್ಲಿ ಅನುಕಂಪದ ಮತಗಳು ಚುನಾವಣೆಯಲ್ಲಿ ಮಧು ಮಾದೇಗೌಡರ ಕೈ ಹಿಡಿದಿದೆ ಎಂದರು.

ಪಿರಿಯಾಪಟ್ಟಣ, ನಾಗಮಂಗಲ, ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಹಾಗೂ ನೀವು ಜೆಡಿಎಸ್‌ನಿಂದ ಹೊರ ಹೋಗುವಿರಾ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಲಾಭಕ್ಕಾಗಿ ರಾಜಕಾರಣ ಮಾಡುವುದಿಲ್ಲ. ಮಾಜಿ



ಸಿಎಂ ಎಸ್.ಎಂ.ಕೃಷ್ಣ ಅವರ ನಾಯಕತ್ವ ಮೆಚ್ಚಿ ರಾಜಕೀಯಕ್ಕೆ ಬಂದೆ. ನಂತರ ಮಾಜಿ ಸಿಎಂ ಕುಮಾರಸ್ವಾಮಿ ಅವರ ನಾಯಕತ್ವ ಮೆಚ್ಚಿ ರಾಜಕಾರಣ ಮಾಡುತ್ತಿದ್ದೇನೆ. ನಾನಂತು ಲಾಭ ನಷ್ಟಕ್ಕಾಗಿ ರಾಜಕೀಯ ಮಾಡುವುದಿಲ್ಲ. ಕುಮಾರಸ್ವಾಮಿ ಹಾಗೂ ಜೆಡಿಎಸ್ ಬಿಟ್ಟು ಯಾರೂ ಪಕ್ಷ ಬಿಟ್ಟು ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ಯಜಮಾನ್ ನಾಗರಾಜು, ಗ್ರಾಪಂ ಉಪಾಧ್ಯಕ್ಷೆ ಕೆಂಪಮ್ಮ, ತಿಲಕ್ ಕುಮಾರ್, ಮರೀಗೌಡ, ಗುಂಡಪ್ಪ, ಗ್ರಾಪಂ ಸದಸ್ಯ ಶ್ರೀನಿವಾಸ್, ಸುಖೇಶ್, ಕುಮಾರ್ ಸೇರಿದಂತೆ ಪಿಡಿಓ ಅಧಿಕಾರಿವರ್ಗ ಉಪಸ್ಥಿತರಿದ್ದರು.

‘ಬೈರಾಗಿ’ ಶಿವಣ್ಣನಿಗೆ ಅದ್ದೂರಿ ಅಭಿಮಾನ

ಚಾಮರಾಜನಗರ ಜೂ.25 (ಎಸ್‌ಎಸ್)– ಬೈರಾಗಿ ಚಿತ್ರದ ಈವೆಂಟ್ಸ್ ಮತ್ತು ಪ್ರೋಮೋ ಬಿಡುಗಡೆಗಾಗಿ ಶನಿವಾರ ಮಧ್ಯಾಹ್ನ ಚಾ.ನಗರಕ್ಕೆ ಆಗಮಿಸಿದ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರಿಗೆ ಅಭಿಮಾನಿಗಳ ಬಳಗದಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ನಗರಕ್ಕೆ ನಟ ಶಿವರಾಜ್ ಕುಮಾರ್ ಹಾಗೂ ಡಾಲಿ ಧನಂಜಯ ಆಗಮಿಸುತ್ತಿದ್ದಂತೆ ಸಂತೇಮರಹಳ್ಳಿ ವೃತ್ತದಲ್ಲಿ ಅಭಿಮಾನಿಗಳು ಪಟಾಕಿ ಸಿಡಿಸಿ, ಕ್ರೇನ್ ಮೂಲಕ ಬೃಹತ್ ಸೇಬಿನ ಹಾರ ಹಾಕಿ, ಹೂಮಳೆಗೈದು ಅದ್ದೂರಿಯಾಗಿ ಬರಮಾಡಿಕೊಂಡರು.

ಅಭಿಮಾನಿಗಳ ಒತ್ತಾಯದ ಮೇರೆಗೆ ಚಲನಚಿತ್ರ ಪ್ರಚಾರ ವಾಹನ ಮೇಲೆ ನಿಂತು ಮಾತನಾಡಿದ ನಟ ಶಿವರಾಜ್‌ಕುಮಾರ್, ‘ಚಾಮರಾಜನಗರ ನಮ್ಮೂರು’ ಎಂದು ಮಾತು ಆರಂಭಿಸುವ ಮೂಲಕ ತವರಿನ ಅಭಿಮಾನ ತೋರ್ಪಡಿಸಿದರು. ಈ ವೇಳೆ ನೆರೆದಿದ್ದ ಅಭಿಮಾನಿಗಳು, ಚಪ್ಪಾಳೆ ತಟ್ಟಿ, ಜೈಕಾರ ಕೂಗಿ ಅಭಿಮಾನ ಮೆರೆದರು.

ಬಳಿಕ ಮಾತು ಮುಂದುವರೆಸಿದ ಶಿವರಾಜ್ ಕುಮಾರ್, ಸಂಜೆ ನಡೆಯುವ ಬೈರಾಗಿ ಚಿತ್ರದ ಪ್ರಮೋಷನ್ ಕಾರ್ಯಕ್ರಮಕ್ಕೆ ಎಲ್ಲರೂ ಬನ್ನಿ, ಅಲ್ಲಿ ಹಾಡು ಹಾಡೋಣ, ಡ್ಯಾನ್ಸ್ ಮಾಡೋಣ ಎಂದು ಮನವಿ ಮಾಡಿದರು.

ಅಭಿಮಾನಿಗಳ ಒತ್ತಾಯದ ಮೇರೆಗೆ ವಾಹನದ ಮೇಲೆಯೇ ಕೆಲ ಡೈಲಾಗ್ ಹೇಳಿ ಡ್ಯಾನ್ಸ್ ಮಾಡಿದರು. ಈ ದೃಶ್ಯ ಅಭಿಮಾನಿಗಳು ಹುಚ್ಚೆದ್ದು, ಕುಣಿಯುವಂತೆ ಮಾಡಿತು. ನಂತರ ಎಲ್ಲರಿಗೂ ಕೈ ಮುಗಿಯುವ ಮೂಲಕ ಧನ್ಯವಾದ ಸಮರ್ಪಿಸಿದರು. ನಟ ಡಾಲಿ ಧನಂಜಯ ಅಮ ಟಗರು ಚಿತ್ರದ ಡೈಲಾಗ್ ಹೇಳಿ ಅಭಿಮಾನಿಗಳನ್ನು ರಂಜಿಸಿದರು.

ಶಿವರಾಜ್‌ಕುಮಾರ್ ಹಾಗೂ ಇತರ ನಟರು ನಗರಕ್ಕೆ ಆಗಮಿಸುವ ವಿಷಯ




ತಿಳಿದ ನೂರಾರು ಅಭಿಮಾನಿಗಳು ನೆಚ್ಚಿನ ನಟನನ್ನು ಕಾಣಲು ಸಂತೇಮರಹಳ್ಳಿ ವೃತ್ತದಲ್ಲಿ ಜಮಾಯಿಸಿದ್ದರು. ಇದರಿಂದ ಕೆಲ ಸಮಯ ವಾಹನ ದಟ್ಟಣೆ ಉಂಟಾಯಿತು. ಸಂಚಾರಿ ಪೊಲೀಸರು ಅಭಿಮಾನಿಗಳನ್ನು ನಿಯಂತ್ರಿಸಲು ಹರಸಾಹಸಪಟ್ಟರು.

ನಂತರ ನಟ ಶಿವರಾಜ್‌ಕುಮಾರ್ ಅವರೇ ಸ್ವತಃ ಕಾರನ್ನು ಚಾಲನೆ ಮಾಡಿಕೊಂಡು ತಾಳವಾಡಿ ಸಮೀಪದ ದೊಡ್ಡ ಗಾಜನೂರಿಗೆ ತೆರಳಿ ಅವರ ಸೋದರತ್ತೆ ನಾಗಮ್ಮ ಅವರ ಆರೋಗ್ಯ ವಿಚಾರಿಸಿದರು. ನಟ, ಸಹೋದರ ಪುನೀತ್ ರಾಜ್ ಕುಮಾರ್ ನಿಧನದ ನಂತರ ದೊಡ್ಡ ಗಾಜನೂರಿಗೆ ಶಿವರಾಜ್‌ಕುಮಾರ್ ಇದೇ ಮೊದಲ ಬಾರಿಗೆ ಭೇಟಿ ನೀಡಿದರು.

ಜನೌಷಧಿ ಕೇಂದ್ರ, ರೆಡ್‌ಕ್ರಾಸ್ ಶತಮಾನೋತ್ಸವ ಭವನ ನಿರ್ಮಾಣಕ್ಕೆ ಚಾಲನೆ

ಚಾಮರಾಜನಗರ, ಜೂ.25–ಯಡಪುರದಲ್ಲಿರುವ ಚಾಮ ರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಬೋಧನಾ ಆಸ್ಪತ್ರೆಯಲ್ಲಿ ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಕೇಂದ್ರವನ್ನು ಉದ್ಘಾಟಿಸಿದ ಸಂಸದ ವಿ. ಶ್ರೀನಿವಾಸಪ್ರಸಾದ್ ಆಸ್ಪತ್ರೆಯ ಮುಂಭಾಗದಲ್ಲಿ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಶತಮಾನೋತ್ಸವ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಡಾ.ಸಂಜೀವ್, ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್, ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಜಿಲ್ಲಾ ಕಾರ್ಯದರ್ಶಿ ಡಾ.ಮಹೇಶ್, ರಾಜ್ಯಶಾಖೆಯ ಆಡಳಿತ ಮಂಡಳಿಯ ಡಾ. ರೇಣುಕಾದೇವಿ, ಡಾ.ಅಜಯ್ ಇದ್ದರು.



ಮಠಗಳಲ್ಲಿ ಮಾತ್ರ ದೇವರನ್ನು ಕಾಣಲು ಸಾಧ್ಯ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅಭಿಮತ

ಚಾಮರಾಜನಗರ, ಜೂ.25(ಎಸ್‌ಎಸ್)– ದೇವರನ್ನು ಕಾಣಬೇಕಾದರೆ, ಅದು ಮಠಗಳಲ್ಲಿ ಮಾತ್ರ ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟರು.

ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠ ದಲ್ಲಿ ಮಠದ ಶತಮಾನೋತ್ಸವ ಹಾಗೂ ಶ್ರೀ ಬಸವೇಶ್ವರ ಪುತ್ಥಳಿ ಅನಾವರಣ ಕಾರ್ಯಕ್ರಮದ ನಿಮಿತ್ತ ಶನಿವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ದಿನಮಾನಗಳಲ್ಲಿ ಮಠಮಾನ್ಯಗಳನ್ನು ಮುನ್ನಡೆಸುವುದು ಕಷ್ಟದ ಕೆಲಸ. ದೇವರ ಅನುಗ್ರಹ ಇದ್ದರೆ ಮಾತ್ರ ಮಠಮಾನ್ಯಗಳು ಮುನ್ನಡೆಯುತ್ತವೆ. ದೇವರ ಅನುಗ್ರಹ ಸಿದ್ದಮಲ್ಲೇಶ್ವರ ವಿರಕ್ತಮಠಕ್ಕೆ ಇರುವುದರಿಂದ ಭಕ್ತದಿಗಳ ಮೂಲಕ ಪ್ರಗತಿ ಹೊಂದುತ್ತಿದ್ದು, ತಾವೂ ಸಹ ಮಠದ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಠ–ಮಾನ್ಯಗಳು ಈ ದೇಶದ ಸಂಪತ್ತು ಎಂದ ಸಚಿವರು, ಎಲ್ಲಾ ಸಮುದಾಯ



ದವರನ್ನು ಸಮಾನತೆಯಿಂದ ಕೊಂಡೊಯ್ಯುವ ಯಾವುದಾದರೂ ಸಮಾಜ ಇದೆ ಎಂದರೆ ಅದು ವೀರಶೈವ–ಲಿಂಗಾಯತ ಸಮಾಜ ಎಂದರು.

ಸಿದ್ದಮಲ್ಲೇಶ್ವರ ವಿರಕ್ತಮಠದ ಪೀಠಾಧಿಪತಿ ಶ್ರೀ ಚನ್ನಬಸವೇಶ್ವರ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿ ಶ್ರೀ ಮಠದ ಅಭಿವೃದ್ಧಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಈ ವೇಳೆ ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಗೌಡಹಳ್ಳಿ ಮಠದ ಮರಿತೋಂಟದಾರ್ಯ ಸ್ವಾಮೀಜಿ, ಕೊತ್ತಲವಾಡಿ ಮಠದ ಶ್ರೀಗುರುಸ್ವಾಮೀಜಿ, ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷ ಮುಡ್ಲುಪುರ ನಂದೀಶ್, ಜಿಪಂ ಮಾಜಿ ಅಧ್ಯಕ್ಷೆ ಜಿ.ನಾಗಶ್ರೀ ಪ್ರತಾಪ, ಮುಖಂಡರಾದ ಅಮ್ಮನಪುರ ಮಲ್ಲೇಶ್, ವಿ.ಮರಿಸ್ವಾಮಿ, ಕೆ.ವೀರಭದ್ರಸ್ವಾಮಿ, ಆರ್.ಸುಂದರ್, ನಟೇಶ್ ಇತರರಿದ್ದರು.

ಲಾರಿ ಡಿಕ್ಕಿ: ಆಟೋ ಚಾಲಕನಿಗೆ ಗಾಯ

ಕೊಳ್ಳೇಗಾಲ, ಜೂ.25(ನಾಗೇಂದ್ರಸ್ವಾಮಿ)– ಲಾರಿ ಕ್ರಾಸ್ ಮಾಡುತ್ತಿದ್ದ ವೇಳೆ ಹಿಂಬದಿಯಲ್ಲಿದ್ದ ಆಟೋಗೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕನ ಮುಂಗೈ ತುಂಡಾದ ಘಟನೆ ಶನಿವಾರ ಬೆಳಗ್ಗೆ ನಡೆದಿದೆ.

ನೂರ್ ಮೊಹಲ್ಲಾ ನಿವಾಸಿ ಅಜಾಂಖಾನ್(35)ಗಾಯಗೊಂಡ ಆಟೋ ಚಾಲಕ. ಪಟ್ಟಣದ ಆರ್‌ಎಂಸಿ ರಸ್ತೆಯಲ್ಲಿ ಲಾರಿಯು ಕ್ರಾಸ್ ಮಾಡುವಾಗ ಹಿಂಬದಿಯಿಂದ ಆಟೋಗೆ ಡಿಕ್ಕಿ ಹೊಡೆದಿದೆ. ಇದರಿಂದ ಆಟೋ ಚಾಲಕ ಅಜಾಂಖಾನ್ ರಸ್ತೆಯ ಮೇಲೆ ಬಿದ್ದು, ಮುಂಗೈ ತುಂಡಾಗಿದೆ. ತಕ್ಷಣ ಗಾಯಾಳುವನ್ನು ಸಾರ್ವಜನಿಕರು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆಗಾಗಿ ಮೈಸೂರಿಗೆ ರವಾನಿಸಿದ್ದಾರೆ.

ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಪಘಾತಗೊಂಡ ಎರಡು ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾಳೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವ

ಗುಡ್ಡೆಹೊಸೂರು ಬಳಿ ನೂತನ ವಾಣಿಜ್ಯ ಸಮುಚ್ಚಯ ಭವನಕ್ಕೆ ಶಂಕುಸ್ಥಾಪನೆ

ಕುಶಾಲನಗರದ, ಜೂ.25– ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವ ಸಮಾರಂಭ ಹಾಗೂ ನೂತನ ಕಟ್ಟಡದ ಶಂಕುಸ್ಥಾಪನೆ ಜೂ. 27 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಟಿ.ಆರ್.ಶರವಣಕುಮಾರ್ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1921 ರಲ್ಲಿ ಬೆರಳೆಣಿಕೆ ಮಂದಿಯಿಂದ ಆರಂಭಗೊಂಡ ಸಂಘವು ಕಾಲಕ್ರಮೇಣ ಬದಲಾವಣೆಗಳೊಂದಿಗೆ ಬೆಳೆದು ಬಂದಿದೆ. ಕಳೆದ 26 ವರ್ಷಗಳ ಅವಧಿಯಲ್ಲಿ ಅಮೂಲಾಗ್ರ ಬದಲಾವಣೆ ಕಂಡ ಸಂಘದ ಯಶಸ್ಸಿನಲ್ಲಿ ಆಡಳಿತ ಮಂಡಳಿಯ ಪದಾಧಿಕಾರಿಗಳ ಸಹಕಾರ ಪ್ರಮುಖವಾಗಿದೆ ಎಂದರು.

ಶತಮಾನೋತ್ಸವದ ಅಂಗವಾಗಿ ಗುಡ್ಡೆಹೊಸೂರಿನಲ್ಲಿ ಸಂಘದ 120 ಸೆಂಟ್ ಜಾಗದಲ್ಲಿ ರೂ.12 ಕೋಟಿ ರೂ.ವೆಚ್ಚದಲ್ಲಿ ಶತಮಾನೋತ್ಸವ ಭವನ, ವಾಣಿಜ್ಯ ಸಂಕೀರ್ಣ, ಸಮುಚ್ಚಯ ಭವನ, ಆರೋಗ್ಯ ಕೇಂದ್ರ, ಸೂಪರ್ ಮಾರ್ಕೆಟ್, ಕಾಫಿ ಕೆಫೆ, ರೆಸ್ಟೋರೆಂಟ್ ಹಾಗೂ ಹಾಗೂ ಕೊಠಡಿಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದರು.

ಸೋಮವಾರ ಬೆಳಗ್ಗೆ 9.30ಕ್ಕೆ ಗುಡ್ಡೆಹೊಸೂರಿನಲ್ಲಿ ಸಂಘದ ಶತಮಾನೋತ್ಸವದ ಅಂಗವಾಗಿ ನಿರ್ಮಿಸಲು ಉದ್ದೇಶಿಸಿರುವ ವಾಣಿಜ್ಯ ಸಮುಚ್ಚಯ ಭವನಕ್ಕೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಸಮುದಾಯ ಭವನಕ್ಕೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಶಂಕು



ಸ್ಥಾಪನೆ ನೆರವೇರಿಸಲಿದ್ದಾರೆ.

ಕುಶಾಲನಗರದ ರೈತ ಸಹಕಾರ ಭವನದಲ್ಲಿ ಬೆಳಗ್ಗೆ 10.30ಕ್ಕೆ ನಡೆಯಲಿರುವ ಸಭಾ ಕಾರ್ಯಕ್ರಮವನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಟಿ.ಆರ್.ಶರವಣಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶಾಸಕ ಅಪ್ಪಚ್ಚು ರಂಜನ್ ಸಹಕಾರ ಧ್ವಜಾರೋಹಣ ನೆರವೇರಸಲಿದ್ದು, ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ಶಾಸಕ ಕೆ.ಜಿ.ಬೋಪಯ್ಯ, ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಪಿ.ಬಾಂಡ್ ಗಣಪತಿ ಪಾಲ್ಗೊಳ್ಳಲಿದ್ದು ವಿರಾಜಪೇಟೆಯ ಅರಮೇರಿ ಕಳಂಚೇರಿ ಮಠದ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ.ಉಮೇಶ್ ಜಿ, ಉಪನಿಬಂಧಕ ಎಚ್.ಎನ್.ರಮೇಶ್, ಸಹಾಯಕ ನಿಬಂಧಕ ಎಂ.ಈ.ಮೋಹನ್ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ವಿ.ಎಸ್.ಆನಂದ್ ಕುಮಾರ್, ನಿರ್ದೇಶಕರಾದ ಅಬ್ದುಲ್ ಖಾದರ್,ಪಿ.ಬಿ.ಯತೀಶ್, ಬಿ.ರಾಮಕೃಷ್ಣಯ್ಯ, ಗಣೇಶ್,ಮಧುಸೂದನ್, ಡಿ.ವಿ.ರಾಜೇಶ್, ಮಧುಕುಮಾರ್, ಜಗದೀಶ್, ಕವಿತಾ, ನೇತ್ರಾವತಿ, ಕಾರ್ಯನಿರ್ವಹಣಾಧಿಕಾರಿ ಎಸ್.ಬಿ.ಲೋಕೇಶ್ ಇದ್ದರು.

ಅಗ್ನಿಪಥ್ ವಿರೋಧಿಸಿ ನಾಳೆ ಕಾಂಗ್ರೆಸ್ ಪ್ರತಿಭಟನೆ

ಮಡಿಕೇರಿ,ಜೂ.25– ಕೇಂದ್ರ ಸರಕಾರ ಜಾರಿಗೆ ತರಲು ಹೊರಟಿರುವ ಅಗ್ನಿಪಥ್ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿ ಕೊಡಗು ಜಿಲ್ಲಾ ಯುವ ಕಾಂಗ್ರೆಸ್ ಹಾಗೂ ಎನ್‌ಎಸ್‌ಯುಐ ವತಿಯಿಂದ ಜೂ.27 ರಂದು ಬೆಳಗ್ಗೆ 11 ಗಂಟೆಗೆ ಮಡಿಕೇರಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾ ಹೇಳಿಕೆ ನೀಡಿರುವ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಿಥುನ್ ಗೌಡ ಹಾಗೂ ಎನ್‌ಎಸ್‌ಯುಐ ಅಧ್ಯಕ್ಷ ರೋಶನ್ ಗಣಪತಿ, ದೇಶದ ಯುವ ಜನತೆಯ ಭವಿಷ್ಯಕ್ಕೆ ಅಗ್ನಿಪಥ್ ಯೋಜನೆ ಮಾರಕವಾಗಿದೆ ಎಂದು ಆರೋಪಿಸಿದ್ದಾರೆ. ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸುವಂತೆ ಪಕ್ಷದ ಪ್ರಕಟಣೆ ಮನವಿ ಮಾಡಿದೆ.

ಕೆಲಸ ಕೊಟ್ಟ ಸಂಸ್ಥೆಯಲ್ಲೇ ದೋಚಿದ್ದ ಇಬ್ಬರ ಬಂಧನ

ವೆಬ್ ಸಿರೀಸ್ ಮಾದರಿಯಲ್ಲಿ ಕಳ್ಳತನ ಮಾಡಿದ್ದ ಕೆಲಸಗಾರರು

ವಿರಾಜಪೇಟೆ, ಜೂ.25– ಕೆಲಸ ಕೊಟ್ಟ ಸಂಸ್ಥೆಯ ಕಚೇರಿಯ ಬೀಗವನ್ನೇ ಮುರಿದು ನಗದು ದೋಚಿದ್ದ ಇಬ್ಬರು ಆರೋಪಿಗಳನ್ನು ವಿರಾಜಪೇಟೆ ಪೊಲೀಸರು ಬಂಧಿಸಿದ್ದಾರೆ. ವೀರಾಜಪೇಟೆ ತಾಲೂಕಿನ ಬೇಟೋಳಿಯ ಹೆಗ್ಗಳ ನಿರ್ಮಲಗಿರಿ ಗ್ರಾಮದ ನಿವಾಸಿ ಎಸ್.ಸಿವಿನ್(20) ಹಾಗೂ ಸೆಬಾಸ್ಟಿನ್ ಡಿಸೋಜಾ (20) ಬಂಧಿತ ಆರೋಪಿಗಳು.

ಪಟ್ಟಣದ ಮಲಬಾರ್ ರಸ್ತೆಯಲ್ಲಿರುವ ಖಾಸಗಿ ಸಂಸ್ಥೆಯಲ್ಲಿ ಡೆಲಿವರಿ ಬಾಯ್ಸ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಇದೇ ಜೂ.12ರಂದು ರಾತ್ರಿ ಕಚೇರಿಯ ಬೀಗ ಮುರಿದು ನಗದು ಪೆಟ್ಟಿಗೆಯಲ್ಲಿದ್ದ 1.02 ಲಕ್ಷ ರೂ.ಗಳನ್ನು ದೋಚಿದ್ದರು. ಈ ಸಂಬಂಧ ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ದೂರುದಾಖಲಾಗಿತ್ತು.

ತನಿಖೆ ಕೈಗೊಂಡ ಪೊಲೀಸರು ಅಮ್ಮತ್ತಿ ಕಾವಾಡಿ ರಸ್ತೆಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದ ಆರೋಪಿಗಳಿಬ್ಬರನ್ನು ವಿಚಾರಿಸಿದಾಗ ಕಳ್ಳತನ ಪ್ರಕರಣ ಬಯಲಿಗೆ ಬಂದಿದೆ. ಕಳವು ಮಾಡಿದ್ದ ಹಣದಲ್ಲಿ 82 ಸಾವಿರ ರೂ.ಗಳನ್ನು ವಶಪಡಿಸಿಕೊಂಡಿದ್ದು, ಉಳಿದ ಮೊತ್ತವನ್ನು ಆರೋಪಿಗಳು ಬಳಸಿಕೊಂಡಿದ್ದಾರೆ. ಕೃತ್ಯಕ್ಕೆ ಬಳಸಿದ್ದ ಬೈಕ್‌ನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳಿಬ್ಬರು ವೆಬ್ ಸಿರೀಸ್‌ನಲ್ಲಿ ಬರುತ್ತಿದ್ದ ಚಲನಚಿತ್ರದ ಕಳವು ಪ್ರಕರಣಗಳಂತೆಯೇ ಸಂಸ್ಥೆಯಿಂದ ಹಣ ದೋಚಲು ಸಂಚು ರೂಪಿಸಿದ್ದರು ಎಂದು ಹೇಳಲಾಗಿದೆ. ಗುರುತು ಪತ್ತೆಯಾಗದಂತೆ ರೈನ್ ಕೋಟ್ ಮತ್ತು ಗ್ಲೌಸ್ ಧರಿಸಿ, ಮುಖ ಮುಚ್ಚಿಕೊಂಡು, ಕಚೇರಿಯ ಬೀಗ ಒಡೆದು, ಸಿ.ಸಿ. ಟಿವಿಗೆ ಸ್ಪ್ರೇ ಮಾಡಿ ಕೃತ್ಯ ಎಸಗಿದ್ದರು ಎನ್ನಲಾಗಿದೆ.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಹಾಗೂ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜ್ ಅರಸ್ ಅವರ ಮಾರ್ಗದರ್ಶನದಲ್ಲಿ ವಿರಾಜಪೇಟೆ ವೃತ್ತ ನಿರೀಕ್ಷಕ ಶಿವರುದ್ರ ಅವರ ನಿರ್ದೇಶನದಂತೆ ವಿರಾಜಪೇಟೆ ನಗರ ಎಸ್‌ಐ ಸಿ.ವಿ.ಶ್ರೀಧರ, ಎಎಸ್‌ಐ ಎಂ.ಎಂ.ಮೊಹಮ್ಮದ್, ಸಿಬ್ಬಂದಿಗಳಾದ ಸುಬ್ರಮಣಿ, ಗಿರೀಶ್, ರಜನ್ ಕುಮಾರ್, ಧರ್ಮ, ಗೀತಾ, ಮಧು, ಕಿರಣ್, ಮಹಂತೇಶ್ ಪೂಜಾರಿ, ಸಂತೋಷ್ ಹಾಗೂ ಚಾಲಕ ರಮೇಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರೈತರಿಗೆ ಸಹಾಯಧನ

ಸೋಮವಾರಪೇಟೆ, ಜೂ.25– ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅಡಿಕೆ. ತೆಂಗು, ಕಿತ್ತಳೆ, ಕಾಳು ಮೆಣಸು ಹಾಗೂ ಇತರೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆಗೆ ಸಹಾಯಧನ ಲಭ್ಯವಿದ್ದು, ರೈತರು ಸದರಿ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಡಾ.ಮಂಜುನಾಥ್ ಜೆ.ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಮಾರ್ಗೊಲ್ಲಿ ಕಾಫಿ ತೋಟದಲ್ಲಿ ಮತ್ತೆ ಹುಲಿ ದಾಳಿಗೆ ಹಸು ಬಲಿ

ಕೂಂಬಿಂಗ್ ಕಾರ್ಯಾಚರಣೆ, ಬೋನ್ ಅಳವಡಿಕೆ

ಸಿದ್ದಾಪುರ, ಜೂ.25– ಮತ್ತೆ ಹುಲಿ ದಾಳಿ ಮುಂದುವರೆದಿದ್ದು, ಮತ್ತೊಂದು ಹಸುವನ್ನು ಕೊಂದು ತಿಂದು ಹಾಕಿರುವ ಘಟನೆ ಮಾಲ್ದಾರೆ ಸಮೀಪದ ಮಾರ್ಗೊಲ್ಲಿ ತೋಟದಲ್ಲಿ ನಡೆದಿದೆ.

ಮಾರ್ಗೊಲ್ಲಿ, ಮೈಲಾಪುರ, ಬಾಡಗ ವ್ಯಾಪ್ತಿಯಲ್ಲೇ ಕಾಣಿಸಿಕೊಳ್ಳುತ್ತಿರುವ ಹುಲಿ ಇಂದು ಹಾಡಹಗಲೇ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುವ ಚಾಲಕನ ಹಸುವೊಂದನ್ನು ಮೇಯಲು ಬಿಟ್ಟ ಸಂದರ್ಭ ಹಠಾತ್ತನೆ ದಾಳಿ ಮಾಡಿ ಬಲಿ ತೆಗೆದುಕೊಂಡಿದೆ.

ಎರಡನೇ ದಿನವೂ ಮುಂದುವರಿದ ದಾಳಿಗೆ ಕಾರ್ಮಿಕರು ಮತ್ತು ಬೆಳೆಗಾರರು ಭಯಭೀತರಾಗಿದ್ದಾರೆ.

ಹುಲಿ ಹಾವಳಿಯಿಂದ ಬಹುತೇಕ ಕಾರ್ಮಿಕರು ಕೆಲಸಕ್ಕೆ ತೆರಳಲು ಹಿಂದೇಟು ಹಾಕಿದ್ದಾರೆ. ಹುಲಿ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ 2 ದಿನಗಳಿಂದ 25 ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ಮೂಲಕ ಸೆರೆ ಹಿಡಿಯಲು ಮುಂದಾಗಿದ್ದಾರೆ.

ಈಗಾಗಲೇ 3 ಕಡೆ ಕ್ಯಾಮೆರಾ ಅಳವಡಿಸಲಾಗಿದ್ದು ಹತ್ತು ಕ್ಯಾಮೆರಾಗಳನ್ನು ಅಲ್ಲಲ್ಲಿ ಇಡಲಾಗಿದೆ. ಜೊತೆಗೆ ಹುಲಿ ಸೆರೆಗೆ ಬೋನ್ ಕೂಡ ಇಡಲಾಗಿದೆ. ಮೂರು ಕಡೆ ಮರದ ಮೇಲೆ ಅಟ್ಟಣಿಗೆಗಳನ್ನು ಇಡಲಾಗಿದ್ದು, ರಾತ್ರಿ ವೇಳೆ ಪ್ರತ್ಯಕ್ಷವಾದರೆ ಅರವಳಿಕೆ ಮದ್ದು ಮೂಲಕ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಗಿದ್ದು, ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ.


ರಾಮ್ ರಾಮ್ ಖ್ಯಾತಿಯ ಕೊಂಗೇಟಿರ ಲೋಕೇಶ್ ಅಚ್ಚಪ್ಪ ಇನ್ನಿಲ್ಲ

ಶ್ರೀಮಂಗಲ, ಜೂ.25– ಮಾಜಿ ಸೈನಿಕ, ರಾಮ್ ರಾಮ್ ಖ್ಯಾತಿಯ ಕೊಂಗೇಟಿರ ಲೋಕೇಶ್ ಅಚ್ಚಪ್ಪ (62) ಇಂದು (ಶನಿವಾರ) ನಿಧನರಾದರು. ಇಲ್ಲಿಗೆ ಸಮೀಪದ ಚೆಟ್ಟಳ್ಳಿ ನಿವಾಸಿಯಾದ ಇವರು ದೊಡ್ಡಮೀಸೆ ಹೊಂದಿದ್ದು, ಸದಾ ಕಾಲ ಬಾಲ್ ವಸ್ತ್ರ ಧರಿಸಿ ಗಮನ ಸೆಳೆದಿದ್ದರು. ಯಾರನ್ನು ನೋಡಿದರೂ ಮೊದಲಿಗೆ ‘ರಾಮ್ ರಾಮ್’ ಎಂದೇ ಹೇಳುತ್ತಿದ್ದರಿಂದ ಅವರು ಈ ಭಾಗದಲ್ಲಿ ‘ರಾಮ್ ರಾಮ್’ ಎಂದೇ ಖ್ಯಾತಿ ಪಡೆದಿದ್ದರು.

ಯುಕೋ ಸಂಘಟನೆ ನಡೆಸುವ ಮಂದ್ ನಮ್ಮೆಯಲ್ಲಿ ಸತತವಾಗಿ ಮೂರು ಬಾರಿ ‘ಕೊಂಬ ಮೀಸೆರಾ ಬಂಬ’ ಪ್ರಶಸ್ತಿ ಪಡೆದಿದ್ದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ



ಬಂಧು–ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಚೆಟ್ಟಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಾರದಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
26-6-2022

ಮಾದಕ ಮಾರಿ

ಜೂನ್ 26, ಅಂತರಾಷ್ಟ್ರೀಯ ಮಾದಕ ದ್ರವ್ಯ ಮತ್ತು ಕಳ್ಳಸಾಗಣೆ ವಿರೋಧಿ ದಿನ. 1989ರ ಜೂನ್ 26ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಅನುಮತಿಯೊಂದಿಗೆ ಈ ಆಚರಣೆ ಜಾರಿಗೆ ಬಂತು. ವಿಶ್ವಾದ್ಯಂತ ಮಾದಕ ದ್ರವ್ಯ (ಡ್ರಗ್ಸ್) ಬಳಕೆ ಮತ್ತು ಸಾಗಾಟದ ನಿಷೇಧವೇ ಇದರ ಗುರಿ. ವಿಶ್ವಸಂಸ್ಥೆಯು 1997ರಲ್ಲಿ 'ಮಾದಕ ದ್ರವ್ಯ ಮತ್ತು ಅಪರಾಧ ವಿಭಾಗ'ವನ್ನು ಪ್ರತ್ಯೇಕವಾಗಿ ಪ್ರಾರಂಭಿಸಿ, ಪ್ರತಿ ವರ್ಷ ಈ ಮಾದಕ ವ್ಯಸನದ ಜಾಗತಿಕ ವರದಿಯನ್ನು ಬಿಡುಗಡೆಗೊಳಿಸುತ್ತಾ ಬಂದಿದೆ. 2021ರ ವರದಿಯ ಪ್ರಕಾರ ಜಗತ್ತಿನ ಸುಮಾರು 28 ಕೋಟಿಯಷ್ಟು ಜನರು ಈ ಮಾದಕ ದ್ರವ್ಯಗಳ ದಾಸರಾಗಿದ್ದಾರೆ.

ಚಲನಚಿತ್ರಗಳಲ್ಲಂತೂ ಮಾದಕ ವಸ್ತು ಸೇವನೆ ಅತಿರೇಕಕ್ಕೆ ಹೋಗಿದೆ. ಮನಸ್ಸಿಗೆ ಒತ್ತಡವಾದಾಗ ಮಾದಕ ದ್ರವ್ಯ, ಸಿಗರೇಟು, ಮಾದಕ ವಸ್ತು ಸೇವನೆ ಮಾಡುವ ದೃಶ್ಯಗಳು ಸರ್ವೆ ಸಾಮಾನ್ಯವಾಗಿದೆ. ಇದು ವೀಕ್ಷಕರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ವ್ಯಕ್ತಿಯೊಬ್ಬ ತನ್ನ ಜೀವನವನ್ನು ಮಾದಕ ವಸ್ತುಗಳ ಬಳಕೆಗೆ ಮೀಸಲಿರುವ ಪ್ರವೃತ್ತಿ ಇಂದಿನ ದಿನಗಳಲ್ಲಿ ವಿಪರೀತವಾಗಿ ಹೆಚ್ಚುತ್ತಿದೆ. ಮಾದಕ ವ್ಯಸನಿಗಳು ಅದನ್ನು ಬಿಡಲಾಗದ ಪರಿತಪಿಸುವ ಪರಿಸ್ಥಿತಿಯನ್ನು ತಮ್ಮ ತಾವೇ ಕೈಯ್ಯಾರೆ ನಿರ್ಮಿಸಿಕೊಂಡು ಅದರಿಂದ ಹೊರಬರಲಾಗದೆ ತೊಳಲಾಡುತ್ತಿದ್ದಾರೆ. ಮಾದಕ ವಸ್ತುಗಳನ್ನು ಸೇವಿಸಿದರೆ ಮಾತ್ರ ತಮ್ಮಿಂದ ಸ್ವಾಭಾವಿಕವಾಗಿ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯ ಎಂಬ ಭ್ರಮೆಯಲ್ಲಿ ಇದಕ್ಕೆ ದಾಸರಾಗುವ ಭಾವಿಸುತ್ತಾರೆ. ಪ್ರತಿದಿನ ಇಂತಿಷ್ಟು ಎಂದು ಮಾದಕ ವಸ್ತುಗಳನ್ನು ಬಳಸುವುದಕ್ಕಾಗಿ ಎಂತಹ ಕಾರ್ಯಕ್ಕೂ ಮುಂದಾಗುತ್ತಾರೆ. ಇದನ್ನು ಸೇವಿಸದ ಹೊರತಾಗಿ ತಮಗೆ ಬದುಕಲು ಸಾಧ್ಯವೇ ಇಲ್ಲ ಎಂಬಂತೆ ಈ ಚಟಕ್ಕೆ ಬಲಿಯಾಗುತ್ತಿದ್ದಾರೆ. ಮಾದಕ ವ್ಯಸನವು ವ್ಯಕ್ತಿಯನ್ನು ಮಾನಸಿಕವಾಗಿ ಕುಗ್ಗಿಸುತ್ತದೆ. ಭಾವನಾತ್ಮಕ, ದೈಹಿಕ ಹಾಗೂ ಸಾಮಾಜಿಕ ಸಂಬಂಧಗಳಿಗೆ ಮಾರಕವಾಗುವ ಸಂದರ್ಭಗಳನ್ನು ಇದು ಸೃಷ್ಟಿಸುತ್ತದೆ. ಯಾರಾದರೂ ಇದಕ್ಕೆ ಒಮ್ಮೆ ದಾಸನಾದರೆ ಅದರಿಂದ ಹೊರ ಬರುವುದು ಅಷ್ಟು ಸುಲಭದ ಮಾತೇನಲ್ಲ.

ಮಾದಕ ವ್ಯಸನಿಗಳು ತಮ್ಮ ಮನಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಇದೊಂದು ರೀತಿಯ ಹವ್ಯಾಸವೇನೋ ಎಂಬಂತಹ ಸ್ಥಿತಿಗೆ ತಲುಪುವುದು ವಿಪರ್ಯಾಸ. ಮನುಷ್ಯನ ಮಿದುಳಿನೊಡನೆ ಆಟವಾಡುವ ಈ ದ್ರವ್ಯಗಳು ಇಲ್ಲದಿದ್ದರೆ ತಮಗೆ ಬದುಕೇ ಇಲ್ಲವೇನೋ ಎಂದು ಭಾವಿಸುವುದು ವ್ಯಸನಿಗಳಲ್ಲಿ ಕಂಡುಬರುತ್ತಿದೆ. ಮಿದುಳಿನಲ್ಲಿ ನೈಸರ್ಗಿಕವಾಗಿ ಉತ್ಪಾದನೆಯಾಗುವ ರಾಸಾಯನಿಕಗಳ ಪ್ರಮಾಣ ಕ್ರಮೇಣ ಕುಗ್ಗುತ್ತಾ ಸಾಗುತ್ತದೆ. ಕಾಫಿ, ಮದ್ಯ, ತಂಬಾಕು, ದೀರ್ಘಕಾಲದ ಔಷಧ ಸೇವನೆ, ಮನೋಲ್ಲಾಸಕ್ಕಾಗಿ ಬಳಸುವ ಕೃತಕ ಸಾಧನಗಳು ಮುಂತಾದವುಗಳು ಡ್ರಗ್ಸ್‌ನಂತೆಯೇ ಆಗಿದೆ.

ಮೊದಮೊದಲು ಮಾದಕ ವಸ್ತುಗಳನ್ನು ಕೇವಲ ಕುತೂಹಲಕ್ಕಾಗಿ ಸೇವಿಸಲು ಆರಂಭಿಸಿದರೆ ಇದು ಕ್ರಮೇಣ ಅಭ್ಯಾಸವಾಗಿ ಪರಿಣಮಿಸುತ್ತದೆ. ಸ್ನೇಹಿತರ ಸಹವಾಸದಿಂದಾಗಿ ಇದು ಹೇಗಿರಬಹುದೆಂಬ ಕಲ್ಪನೆಯಲ್ಲಿ ಒಮ್ಮೆ ಸೇವಿಸಿದರೆ ಇದು ನಮಗಂಟಿದ ಅಂಟು ಜಾಡ್ಯದಂತಾಗುತ್ತದೆ. ಕ್ರೀಡೆಯಲ್ಲಿ



ಹೆಚ್ಚಿನ ಸಾಧನೆಯನ್ನು ಮಾಡಬೇಕೆಂದೋ ಅಥವಾ ಮಾನಸಿಕ ಒತ್ತಡಗಳನ್ನು ಮರೆಯಲೋ ಒಮ್ಮೆ ಸೇವಿಸಿದ ಮಾದಕ ದ್ರವ್ಯಗಳು ನಂತರದ ದಿನಗಳಲ್ಲಿ ನಾವು ಬಿಡಬೇಕೆಂದರೂ ಬಿಡಲಾಗದ ಪರಿಸ್ಥಿತಿಗೆ ತಂದೊಡ್ಡುತ್ತದೆ.

ಒಮ್ಮೆ ಮಾದಕ ದ್ರವ್ಯಗಳನ್ನು ಸೇವಿಸಲು ಆರಂಭಿಸಿದರೆ ಮುಂದೆ ಇದೇ ಚಟವಾಗಿ ಮಾರ್ಪಡುತ್ತದೆ. ಸೇವಿಸುವ ಸಮಯ ಬಂದಾಗ ಇದನ್ನು ಬಳಸದಿದ್ದರೆ ಮನುಷ್ಯನ ನಡವಳಿಕೆಯಲ್ಲಿ ಬದಲಾವಣೆ ದಿಢೀರನೇ ಉಂಟಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಮುಂದೊಂದು ದಿನ ಇದರಿಂದ ಹೊರಬರಲಾಗದೆ ನಿಯಂತ್ರಣವನ್ನು ಮಾಡಲಾಗದೆ ಆ ಚಟಕ್ಕೆ ತಮ್ಮ ಜೀವನವನ್ನೇ ಒಪ್ಪಿಸಬೇಕಾದ ಸಂದರ್ಭಗಳು ಬಂದರೆ ಅಚ್ಚರಿಯೇನಿಲ್ಲ. ಮನಸ್ಸನ್ನು ನಿಯಂತ್ರಿಸಲಾಗದಷ್ಟು ಮಟ್ಟಿಗೆ ಮಾದಕ ವಸ್ತುಗಳು ನಮ್ಮನ್ನು ಆವರಿಸಿಕೊಂಡು ಬಿಡುತ್ತದೆ. ಮಾನಸಿಕ ಸ್ಥೈರ್ಯವನ್ನು ಕುಗ್ಗಿಸಿ ಬೇರೆಯವರು ಏನನ್ನುತ್ತಾರೆ ಎಂಬುದನ್ನು ಯೋಚಿಸಲೂ ಆಗದಷ್ಟು ದುರ್ಬಲರಾಗುತ್ತಾರೆ. ವ್ಯಸನಿಗಳಾದವರು ಯಾವ ಕೆಲಸವನ್ನು ಮಾಡಲು ಮುತುವರ್ಜಿ ವಹಿಸುವುದೇ ಇಲ್ಲ. ಅವರ ಆಲೋಚನೆಗಳೆಲ್ಲ ಮಾದಕ ವಸ್ತುಗಳ ಸೇವನೆಯ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತದೆ. ಒಮ್ಮೆ ಈ ಚಟಕ್ಕೆ ಒಳಗಾದರೆ ಇದರಿಂದ ಹೊರ ಬರುವುದು ತುಂಬಾ ಕಷ್ಟಕರವಾದ ವಿಚಾರ. ಡ್ರಗ್ಸ್ ಸೇವಿಸುವುದಿಲ್ಲ ಎಂದು ಎಷ್ಟೇ ಅಂದುಕೊಂಡರೂ ದುರ್ಬಲ ಮನಸ್ಸು ಅದನ್ನು ಮತ್ತೆ ಮತ್ತೆ ಬಯಸುತ್ತದೆ. ಮನಸ್ಸಿನ ಮೇಲಾಗುವ ಒತ್ತಡ, ಬೇರೆಯವರಿಗಿಂತ

ಚಟ ಸ್ಟಾರ್ಟ್

ಮಾದಕ ವಸ್ತುವನು ಮೊದಮೊದಲು ಸೇವಿಸುವವರಲ್ಲಿ ಒಂದು ರೀತಿಯ ನಡುಕ ಉಂಟಾಗುತ್ತದೆ. ಸೇವಿಸದಿದ್ದರೆ ದಿನವಿಡೀ ಹೇಗಿರುವುದೆಂಬ ಸಂದೇಹ ಬೆಟ್ಟದಷ್ಟಾಗುವುದು. ಸೇವನೆಯಿಂದ ಏನಾದರೊಂದು ನೆಪ ಅಥವಾ ಇದರಿಂದ ದಿನನಿತ್ಯದ ಕೆಲಸಗಳು ಸುಲಭವಾಗುತ್ತದೆ ಎಂದೆನಿಸುವುದು, ಬೇರೆಯವರಿಗೆ ಗೊತ್ತಾಗದಂತೆ ಗುಪ್ತ ಸ್ಥಳದಲ್ಲಿ ನಿಂತು ಸೇವಿಸುವುದು, ಏನೋ ಒಂದು ರೀತಿಯ ತಪ್ಪಿತಸ್ಥ ಭಾವನೆ ಮೂಡುವುದು, ಬಿಟ್ಟು ಬಿಡಲು ಯೋಚಿಸುವುದು, ಮನೆಯವರ ಅಥವಾ ಸ್ನೇಹಿತರ ನಡುವೆ ಬೆರೆಯಲು ಹಿಂದೇಟು ಹಾಕುವುದು ಹೀಗೆ ನಾನಾ ತರಹದ ಲಕ್ಷಣಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿ ಇದೇ ಒಂದು ಚಟವಾಗಿ ಮಾರ್ಪಡಲೂ ನೆರವಾಗುತ್ತದೆ.

ತಾನು ಭಿನ್ನವಾಗಿರಬೇಕೆಂಬ ಕಲ್ಪನೆಯೇ ಈ ಚಟಕ್ಕೆ ಅವನನ್ನು ದಾಸನನ್ನಾಗಿ ಮಾಡಿಬಿಡುತ್ತದೆ. ಇದರಿಂದ ಹೊರಬರಬೇಕಾದರೆ ಮನೆಯವರ ಹಾಗೂ ಸುತ್ತಮುತ್ತಲಿನವರ ನಿರಂತರ ಸಹಕಾರವೂ ಅತ್ಯಗತ್ಯವಾಗಿರುತ್ತದೆ.

ವ್ಯಕ್ತಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ಮಾದಕ ವಸ್ತುವಿಗೆ ಎಷ್ಟರ ಮಟ್ಟಿಗೆ ದಾಸನಾಗಿದ್ದಾನೆಂಬುದನ್ನು ಮನಗಂಡು ಅದಕ್ಕೆ ತಕ್ಕಂತೆ ಚಿಕಿತ್ಸೆಯನ್ನು ನೀಡಲಾಗುತ್ತದೆ. ಮೊದಲಿಗೆ ಮನೆಯವರು ಆ ವ್ಯಕ್ತಿಯ ನಡವಳಿಕೆಯಲ್ಲಾದ ಬದಲಾವಣೆಯನ್ನು ಅರಿತು ಅದರಿಂದ ಆತನನ್ನು ಹೊರತರುವ ಬಗೆಯನ್ನು ಮೊದಲು ಪಟ್ಟಿ ಮಾಡಿದರೆ ಒಳಿತು. ವ್ಯಸನಿಯನ್ನು ಒಂಟಿಯಾಗಿ ಬಿಡದೆ ಅವನ ವ್ಯತಿರಿಕ್ತ ನಡವಳಿಕೆಗಳಿಗೆ ಬೇಸರಿಸಿಕೊಳ್ಳದೆ ಅವನನ್ನು ಸಮಾಧಾನದಿಂದ ಅದರಿಂದ ಹೊರ ತರಲು ಪ್ರಯತ್ನಿಸಬೇಕು. ಅವರಿಂದ ಅದು ಸಾಧ್ಯವಾಗದೇ ಹೋದಾಗ ಮನೋವೈದ್ಯರ ಬಳಿ ಕರೆದುಕೊಂಡು ಹೋಗುವುದು ಒಳ್ಳೆಯದು.

ಕುಟುಂಬದ ಸದಸ್ಯರು ಯಾರಾದರೂ ಈ ಚಟಕ್ಕೆ ಒಳಗಾಗಿರುವ ಲಕ್ಷಣಗಳು ಕಂಡುಬಂದರೆ ಮೊದಲಿಗೆ ಆಪ್ತಸಲಹೆಗಾರರ ಅಥವಾ ಮನೋವೈದ್ಯರ ಸಲಹೆ ಪಡೆಯುವುದು ಸೂಕ್ತ. ತಜ್ಞರು ಆ ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಪರೀಕ್ಷೆಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಸಮಸ್ಯೆಯ ತೀವ್ರತೆಯನ್ನರಿತು ಅದಕ್ಕೆ ತಕ್ಕಂತೆ ಚಿಕಿತ್ಸೆ ಕೊಡಲು ನೆರವಾಗುತ್ತಾರೆ.

ಮಾದಕ ವ್ಯಸನಿಗೆ ಅಗತ್ಯವಾದ ಔಷಧೋಪಚಾರ ಮಾಡುವುದರೊಂದಿಗೆ ಅವನಿಗೆ ಬೇಕಾದ ಮನೋಸ್ಥೈರ್ಯವನ್ನು ವ್ಯಕ್ತಿಗತವಾಗಿ ಹಾಗೂ ಗುಂಪು ಚಿಕಿತ್ಸೆಗಳ ಮೂಲಕ ನೀಡುವುದರ ಮೂಲಕ ಗುಣಪಡಿಸಲು ಸಾಧ್ಯ. ಮೊದಲ ಹಂತದಲ್ಲಿಯೇ ಸೂಕ್ತವಾದ ಚಿಕಿತ್ಸೆ ನೀಡಿ ವ್ಯಸನ ಮರುಕಳಿಸದಂತೆ ತಡೆಯುವುದು ಇದರ ಮುಖ್ಯ ಉದ್ದೇಶ. ರೋಗಿಗಳು ತಿರುಗಿ ವ್ಯಸನಿಗಳಾಗದಂತೆ ಮಾಡಲು ವ್ಯವಸ್ಥಿತವಾದ ರೀತಿಯಲ್ಲಿ ಚಿಕಿತ್ಸೆ ಮಾಡುವುದು ಅಗತ್ಯ.

ಮಾದಕ ವಸ್ತುಗಳನ್ನು ಸೇವಿಸುವ ವ್ಯಸನಿಗಳು ಇನ್ನು ಮುಂದೆ ಸೇವಿಸುವುದಿಲ್ಲ ಎಂದು ಎಷ್ಟೇ ರೀತಿಯಲ್ಲಿ ಪ್ರಮಾಣ ಮಾಡಿದರೂ ಅಥವಾ ಅಂದುಕೊಂಡರೂ ಅದು ಮೆದುಳಿಗೆ ಹೋಗಿ ಸ್ಥಿರವಾಗುವ ಮೊದಲೇ ನಿರ್ಧರಿಸಬೇಕು. ಕಾರಣ ಡ್ರಗ್ಸ್ ಸೇವನೆಯ ಸೆಳೆತ ಅವನಿಗರಿವಿಲ್ಲದಂತೆಯೇ ಅವನನ್ನು ಆವರಿಸಿಕೊಂಡು ಬಿಟ್ಟಿರುತ್ತದೆ. ದೈಹಿಕ ಹಾಗೂ ಮಾನಸಿಕ ಒತ್ತಡದಿಂದಾಗಿ ಈ ಚಟ ತನ್ನ ದೇಹದ ಮೇಲೆ ಪರಿಣಾಮ ಬೀರುತ್ತಿದೆಯೇನೋ ಎಂದುಕೊಂಡು ಮತ್ತೆಮತ್ತೆ ಸೇವಿಸುವಂತೆ ಪ್ರೇರೇಪಿಸುತ್ತದೆ. ಈ ಸಂದರ್ಭದಲ್ಲಿ ಮಾದಕ ವ್ಯಸನಿಗಳನ್ನು ಸರಿದಾರಿಗೆ ತರಲು ಅವರಿಗೆ ಸಂಬಂಧಿಸಿದ ಕುಟುಂಬಸ್ಥರು ಅವರಲ್ಲಿ ಮಾನಸಿಕ ಧೈರ್ಯ ತುಂಬುವುದರೊಂದಿಗೆ ತಜ್ಞರಿಂದ ಔಷಧೋಪಚಾರ, ಸೂಕ್ತ ಚಿಕಿತ್ಸೆಗಳಿಂದ ಗುಣಮುಖರಾಗಿಸಲು ಸಾಧ್ಯ. ಮಾದಕ ದ್ರವ್ಯಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಅನೇಕ ಚಲನಚಿತ್ರಗಳಲ್ಲೂ ಜಾಗೃತಿ ಮೂಡಿಸಲಾಗಿದೆ. ಶಬ್ದವೇದಿ, ರಿಷಿ, ಲೂಸಿಯ, ಧ್ರುವ, ಕೆಂಡಸಂಪಿಗೆ ಇತ್ಯಾದಿ ಚಿತ್ರಗಳಲ್ಲೂ ಕೂಡ ಮಾದಕವಸ್ತುಗಳ ಸೇವನೆಯಿಂದಾಗುವ ಕೆಡುಕುಗಳ ಬಗ್ಗೆ ಜನರನ್ನು ಎಚ್ಚರಿಸುವ ಕೆಲಸ ಆಗಿದೆ ಎನ್ನಬಹುದು.

ಹೆಸರಿಸಬಹುದಾದ ಕೆಲವು ಅಪಾಯಕಾರಿ ಮಾದಕ ದ್ರವ್ಯಗಳೆಂದರೆ ಮೆಥಾಂಫೆಟಮೈನ್, ಕೆಟಮೈನ್, ಎಂಡಿಎಂಎ ಅಥವಾ ಮೊಲ್ಲಿ, ಹೆರಾಯಿನ್ ಮತ್ತು ಕೊಕೇನ್. ಇವುಗಳು ಮಾತ್ರೆ ಅಥವಾ ಪುಡಿಗಳ ಮೂಲಕ ವ್ಯಸನಿಗಳ ಕೈಗೆ ಸೇರುತ್ತದೆ ಹಾಗೂ ಅವರ ದೇಹದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಅಟ್ಟಹಾಸವನ್ನು ಮೆರೆಯುತ್ತದೆ.

ಮಾದಕ ವ್ಯಸನಿಗಳನ್ನು ಕೆಲಕಾಲ ಆಸ್ಪತ್ರೆಗಳಿಗೆ ದಾಖಲು ಮಾಡಿಯಾದರೂ ಅವರ ಮನಸ್ಸನ್ನು ಬದಲಾಯಿಸಲು ಸರ್ವರೂ ಪ್ರಯತ್ನಿಸಬೇಕು. ಮಾದಕ ದ್ರವ್ಯ ಎಂಬ ಪಿಡುಗಿನಿಂದ ವ್ಯಸನಿಗಳನ್ನು ದೂರ ಮಾಡಲು ಸಂಬಂಧಿಸದವರೆಲ್ಲರೂ ಒಮ್ಮತದಿಂದ ಕ್ರಮ ಕೈಗೊಂಡರೆ ಅವರನ್ನು ಮಾದಕ ವಸ್ತುಗಳಿಂದ ವಿಮುಕ್ತರನ್ನಾಗಿ ಮಾಡಲು ಸಾಧ್ಯ. ಮಾದಕ ದ್ರವ್ಯ ತೆಗೆದುಕೊಳ್ಳುವವರನ್ನು ಸಮಾಜದಿಂದ ಹೊರಗಿಟ್ಟು ನೋಡುವ ಬದಲು ಅಥವಾ ಅವರು ಮಾಡಬಾರದ ತಪ್ಪನ್ನು ಮಾಡುತ್ತಿದ್ದಾರೆಂದು ದೂಷಿಸುವ ಬದಲು ಅವರನ್ನು ಸಮಾಜ ಮುಖಿಗಳನ್ನಾಗಿ ಮಾಡಲು ಪ್ರಯತ್ನಿಸಬೇಕು. ಸಮಾಜದ ಮುಖ್ಯವಾಹಿನಿಯಲ್ಲಿ ಅವರು ಸೇರ್ಪಡೆಗೊಳ್ಳಲು ಸಹಕರಿಸಬೇಕಾಗುತ್ತದೆ. ಅವರು ಪುನಃ ಮಾದಕ ವ್ಯಸನಕ್ಕೆ ದಾಸರಾಗುವುದನ್ನು ತಪ್ಪಿಸಲು ಅವರಲ್ಲಿ ಧೈರ್ಯ ತುಂಬಬೇಕು. ಮುಂದಿನ ದಿನಗಳಲ್ಲಿ ಅವರ ಮನೋನಿಗ್ರಹವನ್ನು ಮಾಡುವ ಪರಿಯನ್ನು ಅವರ ಅರಿವಿಗೆ ತರಲು ಯತ್ನಿಸಿದರೆ ಒಳ್ಳೆಯದು. ಮನೋಚಿಕಿತ್ಸಕರು ಹೇಳಿದಂತೆ ವ್ಯಸನಿಗಳನ್ನು ಸರಿದಾರಿಗೆ ತರಲು ಸರ್ವಪ್ರಯತ್ನವನ್ನು ಮಾಡಬೇಕು. ಇಂತಹ ಸಂದರ್ಭಗಳು ಸೃಷ್ಟಿಯಾದಾಗ ಮಾತ್ರ ವ್ಯಸನಮುಕ್ತ ಜೀವನವನ್ನು ಚಟಕ್ಕೆ ಒಳಗಾದವರಿಗೆ ಒದಗಿಸಲು ಸಾಧ್ಯ.

ಈ ನಿಟ್ಟಿನಲ್ಲಿ ಮಾದಕ ಪದಾರ್ಥ ಸೇವನೆಯನ್ನು ನಿಲ್ಲಿಸಲು ಕುಟುಂಬವರ್ಗ, ಸ್ನೇಹಿತರು, ಬಂಧುಗಳು ಎಲ್ಲರೂ ಶ್ರಮ ವಹಿಸಬೇಕು. ಸಮಾಜಕ್ಕೆ ಅವರನ್ನು ಕಂಟಕ ಎಂದು ಭಾವಿಸದೆ ಅವರ ಜೀವನದ ರಸ ಘಳಿಗೆಗಳನ್ನು ಅವರಿಗೆ ಪುನಃ ನೀಡುವುದರಲ್ಲಿ ಸಿಗುವ ಸಂತೃಪ್ತಿ ಮತ್ತಾವುದರಲ್ಲೂ ಸಿಗದೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಜೀವದೊಂದಿಗೆ ಚೆಲ್ಲಾಟವಾಡುವ ಮಾದಕ ದ್ರವ್ಯಗಳ ಅಡ್ಡ ಪರಿಣಾಮಗಳ ಬಗ್ಗೆ ನಿಧಾನವಾಗಿ ತಿಳಿಸಿ ಹೇಳುವುದರ ಮೂಲಕ ಅವರನ್ನು ಸಮಾಜಮುಖಿಗಳಾಗಿ ಮಾಡಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ.

ಇದಕ್ಕೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಸಂಘಸಂಸ್ಥೆಗಳು, ಆಸ್ಪತ್ರೆಗಳು, ಪೋಷಕರ ಸಭೆಗಳಲ್ಲಿ ತಿಳುವಳಿಕೆ ನೀಡಬೇಕು. ಪಂಚಾಯತ್ ಮಟ್ಟದಲ್ಲೂ ಜಾಗೃತಿ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸವಾಗಬೇಕು. ಔಷಧಗಳ ದುರ್ಬಳಕೆ ಮಾಡಬಾರದು. ವೈದ್ಯರ ಶಿಫಾರಸ್ಸು ಇಲ್ಲದೆ ಯಾವುದೇ ಮತ್ತು ತರಿಸುವಂತಹ ಔಷಧಿಗಳನ್ನು ಮೆಡಿಕಲ್ ಅಂಗಡಿಗಳಲ್ಲಿ ಕೊಡಲೇಬಾರದು. ಮಕ್ಕಳಿಗೆ ಪ್ರೀತಿ ವಾತ್ಸಲ್ಯ ನೀಡುವುದರ ಜೊತೆಗೆ ಅವರನ್ನು ಸಮಾಜದ ಸುಶಿಕ್ಷಿತ ಪ್ರಜೆಗಳನ್ನಾಗಿ ಮಾಡುವ ಹೊಣೆಗಾರಿಕೆ ಪೋಷಕರ ಹೆಗಲಿಗೇ ಇದೆ. ಇಲದಿದ್ದರೆ ಅವರು ಸಮಾಜ ಕಂಟಕರಾಗುವ ದಿನ ಬಹಳ ದೂರವೇನಿಲ್ಲ. ಮಾನಸಿಕ ಖಿನ್ನತೆಗೆ ಒಳಗಾದ ವ್ಯಕ್ತಿ ಮದ್ಯ ವ್ಯಸನಿಯಾಗುವ ಸಾಧ್ಯತೆಗಳೇ ಹೆಚ್ಚಾಗಿರುವುದರಿಂದ ಅವರಿಗೆ ಅಗತ್ಯವಾದ ಮಾನಸಿಕ ಚಿಕಿತ್ಸೆಯನ್ನು ಮಾಡಲು ಮುಂದಾಗಬೇಕಾದ ಅಗತ್ಯವಿದೆ. ಅವನನ್ನು ಸಮಾಜಮುಖಿಯನ್ನಾಗಿ ಮಾಡಲು ಕುಟುಂಬದ ಎಲ್ಲಾ ಸದಸ್ಯರೂ ತಮ್ಮ ಕೈಲಾದ ಪ್ರಯತ್ನ ವನ್ನು ಮಾಡುವುದರ ಮೂಲಕ ಅವನನ್ನು ಸರಿದಾರಿಗೆ ತರುವುದಕ್ಕೆ ಪ್ರಯತ್ನಿಸಬೇಕಾಗಿದೆ.

ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಿ ತಿಳುವಳಿಕೆ ನೀಡಬಹುದು. ಅಂಗನವಾಡಿ, ಶಾಲೆ, ಆಶಾ ಕಾರ್ಯಕರ್ತೆಯರ ಮೂಲಕ ಸಹ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಬಹುದು. ಇತ್ತೀಚೆಗೆ ಮದ್ಯ ವರ್ಜನ ಶಿಬಿರಗಳನ್ನು ಅಲ್ಲಲ್ಲಿ ಏರ್ಪಡಿಸಿ, ಈ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಸಂಘ ಸಂಸ್ಥೆಗಳು ಇದಕ್ಕೆ ಸಹಕರಿಸುತ್ತಿವೆ. ದುಶ್ಚಟಗಳಿಂದಾಗುವ ಹಾನಿಗಳ ಬಗ್ಗೆ ಸಮಗ್ರ ಆಂದೋಲನವಾದರೆ ತಡೆಗಟ್ಟಬಹುದು. ■



ಮ.ನ.ಲತಾಮೋಹನ್
ಮೈಸೂರು,
ಮೊ. 9481831434

ಯಾವುವು ಮಾದಕ ವಸ್ತುಗಳು

ಮಾದಕ ವಸ್ತುಗಳನ್ನು ಇಂಜೆಕ್ಷನ್, ಧೂಮಪಾನ, ಗಾಂಜಾ, ಜಗಿಯುವುದು ಮತ್ತು ಕುಡಿಯುವುದು ಹೀಗೆ ನಾನಾ ರೀತಿಯಲ್ಲಿ ಸೇವಿಸಲಾಗುತ್ತದೆ. ವೈದ್ಯರ ಸಲಹೆ ಪಡೆಯದೆ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳುವ ಔಷಧಿಗಳೂ ಕೂಡ ಮಾದಕ ವಸ್ತುಗಳಾಗಿ ಪರಿಣಮಿಸುತ್ತದೆ. ಕೆಲವರು ನೈಲ್ ಪಾಲೀಷ್ ರಿಮೂವರ್ ಅನ್ನು ಕೂಡ ಮೂಸುವುದರ ಮೂಲಕ ಒಂದು ರೀತಿ ಮಾದಕ ವ್ಯಸನಿಗಳಾಗುತ್ತಾರೆ.

ಪರಿಣಾಮಗಳೇನು?

ಮಾದಕ ವ್ಯಸನಿಗಳಾದರೆ ಅವರ ಹಸಿವು ಮತ್ತು ನಿದ್ರೆಯಲ್ಲಿ ಏರುಪೇರಾಗುತ್ತದೆ. ಮೂರ್ಛೆ ಹೋಗುವುದು, ತೂಕದಲ್ಲಿ ಏರಿಳಿತ, ಅತಿರೇಕದ ಚಟುವಟಿಕೆಗಳು, ಬುದ್ಧಿಕೆಟ್ಟವರಂತೆ ಆಡುವುದು, ಬೇರೆಯವರನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂಬ ಹುಚ್ಚು ಬಯಕೆ, ಯಾರಿಗೂ ತಾನು ಹೆದರುವುದಿಲ್ಲ ಎಂಬ ತಪ್ಪು ಕಲ್ಪನೆ, ಹೆದರಿಕೆ ಅಥವಾ ತಳಮಳ, ಎಲ್ಲರ ಮೇಲೂ ವಿನಾಕಾರಣ ಕೂಗಾಡುವುದು, ಮನೆಯಲ್ಲಿರುವ ವಸ್ತುಗಳ ಮೇಲೆ ತಮ್ಮ ಕೋಪತಾಪ ತೋರಿಸುವುದು, ಮನೆಯಲ್ಲಿರುವವ ಮೇಲೆ ದೈಹಿಕವಾಗಿ ಹಲ್ಲೆ ನಡೆಸುವುದು ಹೀಗೆ ಹತ್ತು ಹಲವು ರೀತಿಯಲ್ಲಿ ಬೇರೆಯವರಿಗಿಂತ ವಿಭಿನ್ನವಾಗಿ ಗೋಚರಿಸುತ್ತಾರೆ.

ನಗೆ ಬುಗ್ಗೆ

ಹೆಂಡತಿ(ಸಿಟ್ಟಿನಿಂದ): ನಿಮ್ಮನ್ನು ಮದುವೆ ಆಗೋ ಬದಲು ನಾನು ಒಬ್ಬ ರಾಕ್ಷಸನ್ನ ಮದುವೆ ಆಗಿದ್ರೂ ಎಷ್ಟೋ ಸುಖವಾಗಿರ್ತಿದ್ದೆ?


ಗಂಡ: ಹಾಗೆಲ್ಲ ರಕ್ತಸಂಬಂಧದಲ್ಲಿ ಮದುವೆ ಆಗಬಾರದು ಕಣೇ ಒಳ್ಳೇದಲ್ಲ!

ಗುಂಡ: ನಾನು ತೆಂಗಿನ ಮರ ಹತ್ತಿ ನೋಡಿದರೆ ಇಂಜಿನಿಯರಿಂಗ್ ಕಾಲೇಜು ಹುಡುಗೀರು ಕಾಣ್ತಾರೆ ಗೊತ್ತಾ?

ಸೋಮು: ಅಲ್ಲಿಂದ ಕೈಬಿಟ್ಟು ನೋಡು ಮೆಡಿಕಲ್ ಕಾಲೇಜು ಹುಡುಗೀರು ಕಾಣಿಸ್ತಾರೆ!

ಸವಿ ರುಚಿ

ಮೋತಿಚೂರ್ ಲಾಡು



ಬೇಕಾಗುವ ಪದಾರ್ಥಗಳು...

- ಕಡಲೆಹಿಟ್ಟು – 2 ಬಟ್ಟಲು
- ಸಕ್ಕರೆ – 2.5 ಬಟ್ಟಲು
- ಕೇಸರಿ – 6 ದಳ
- ಅಡುಗೆ ಸೋಡಾ – ಕಾಲು ಚಮಚ
- ಹಾಲು– 1 ಬಟ್ಟಲು
- ಫುಡ್ ಕಲರ್ – ಸ್ವಲ್ಪ
- ಏಲಕ್ಕಿ – 2 ಚಮಚ

ಮಾಡುವ ವಿಧಾನ...

ಕಡಲೆಹಿಟ್ಟಿಗೆ ಹಾಲು, ನೀರು, ಅಡುಗೆ ಸೋಡಾ, ಫುಡ್ ಕಲರ್ ಹಾಕಿ ಚೆನ್ನಾಗಿ ಕಲಸಿಕೊಂಡು ಅದರಲ್ಲಿ ಬೂಂದಿ ತಯಾರಿಸಿ, ನಂತರ ಸಕ್ಕರೆ ಪಾಕ ತಯಾರಿಸಿಕೊಂಡು ಅದಕ್ಕೆ ಮೊದಲೇ ತಯಾರಿಸಿಕೊಂಡ ಬೂಂದಿ ಕಾಳುಗಳನ್ನು ಸೇರಿಸಿ. ಈ ಮಿಶ್ರಣವನ್ನು ಚೆನ್ನಾಗಿ ಕಲಸಿ ಉಂಡೆ ಮಾಡಿಕೊಂಡರೆ, ರುಚಿಕರವಾದ ಮೋತಿಚೂರ್ ಲಾಡು ಸವಿಯಲು ಸಿದ್ಧ.



ವಾರಭವಿಷ್ಯ

26.6.2022 ರಿಂದ 2.07.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಮಿಥುನ, ಚಂದ್ರ–ವೃಷಭ, ಮಿಥುನ, ಕಟಕ, ಕುಜ–ಮೀನ, ಮೇಷ, ಬುಧ–ವೃಷಭ, ಗುರು–ಮೀನ, ಶುಕ್ರ–ವೃಷಭ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಮುಖ್ಯ ಕಾರ್ಯ–ಕಲಾಪಗಳನ್ನು ಆದ್ಯತೆಯ ಮೇಲೆ ಪೂರೈಸಿಕೊಳ್ಳಿ. ಎಲೆಕ್ಟ್ರಾನಿಕ್ ವಸ್ತು, ಕಂಪ್ಯೂಟರ್ ವ್ಯಾಪಾರಿಗಳಿಗೆ ಹೇರಳ ಧನ ಲಾಭವಾಗುವುದು. ಹಲವರಿಗೆ ವಿದೇಶ ಯಾತ್ರೆಯ ಯೋಗವಿದೆ. ಕ್ರೀಡಾಪಟುಗಳಿಗೆ ಪ್ರಶಸ್ತಿ, ಪುರಸ್ಕಾರಗಳು ದೊರಕುವುದು. ಮಾತೃಶ್ರೀಯವರ ಆರೋಗ್ಯದ ಕಡೆ ಗಮನ ನೀಡಿ. ರಾಜಕಾರಿಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. – ಶ್ರೀ ಗಣೇಶ ಸೇವೆ, ಶುಭಸಂಖ್ಯೆ–6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ, ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯ ಸಾಧ್ಯತೆ. ವಿದ್ಯಾರ್ಥಿಗಳಿಗೆ ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸು ದೊರೆಯುವುದು. ಮಾತಾ–ಪಿತರಿಗೆ ಮಕ್ಕಳ ಸಫಲತೆಯಿಂದ ಹರುಷ, ಸಮಾಜ ಸೇವಕರಿಗೆ ಸಾರ್ವಜನಿಕರಿಂದ ಗೌರವ, ಸನ್ಮಾನಗಳು ದೊರೆಯುವುದು. ದ್ವಾದಶ ರಾಹು ಕಾರಣ ಸಟ್ಟಾ, ಜೂಜುಗಳಿಂದ ದೂರವಿದ್ದರೆ ಕ್ಷೇಮ. – ಶ್ರೀ ವೈಷ್ಣವಿ ದರ್ಶನ, ಶುಭಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಪ್ರವೇಶಿಸುವ ಚಂದ್ರನಿಂದ ಲವಲವಿಕೆಯ ಓಡಾಟಗಳು. ಪ್ರಿಯ ಜನರ ಮಧುರ ಬಾಂಧವ್ಯ, ಧನ, ಧಾನ್ಯ, ಲಾಭ, ಸುಖಭೋಜನ, ಉತ್ತಮ ಸ್ತ್ರೀ ಸಂಗ, ನಿಮ್ಮ ಕಾರ್ಯಕ್ಷಮತೆಯ ವೃದ್ಧಿಯಿಂದ ಉನ್ನತ ಸ್ಥಾನ ಪ್ರಾಪ್ತಿ, ದೀರ್ಘಕಾಲದ ವ್ಯಾಧಿ ಉಪಶಮನವಾಗುವುದು. ಪಿತೃಸಮಾನ ವ್ಯಕ್ತಿಯೊಬ್ಬರಿಗೆ ಆರೋಗ್ಯದಲ್ಲಿ ಏರು–ಪೇರು ಉಂಟಾದೀತು. – ಶ್ರೀ ಸತ್ಯನಾರಾಯಣ ಸೇವೆ, ಶುಭಸಂಖ್ಯೆ–3.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಗುರು ಕೃಪೆಯಿಂದ ಈ ವಾರ ಪೂರ್ತಿ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆಯೇನೂ ಆಗದು. ಶುಭಕಾರ್ಯ ಯತ್ನಗಳು ಸಫಲತೆಯನ್ನು ಕಾಣುವುದು. ಲೇಖಕರಿಗೆ, ಪ್ರಕಾಶಕರಿಗೆ ಉತ್ತಮ ವರಮಾನ ಆಗುವುದು. ನಿಮ್ಮ ನಿಪುಣತೆಯಿಂದ ಹಾಗೂ ಪ್ರಾಬಲ್ಯದಿಂದ ಅಧಿಕಾರ, ಸ್ಥಾನ–ಮಾನಗಳನ್ನು ದಕ್ಕಿಸಿಕೊಳ್ಳುವಿರಿ. ಹಲವರಿಗೆ ಸಮುದ್ರೋಲ್ಲಂಘನ ಯೋಗವಿದೆ. ಸಹೋದರ ಸಂಬಂಧಿಗಳಲ್ಲಿ ವಿರಸ ಉಂಟಾದೀತು. – ಶ್ರೀ ದುರ್ಗಾ ಸ್ತುತಿ, ಶುಭಸಂಖ್ಯೆ–8.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ಸಪ್ತಾಹದಲ್ಲಿ ನಿಮ್ಮ ಕೈ ಹಿಡಿಯುವ ಗ್ರಹ ಚಂದ್ರನೇ. ಐಟಿ, ಬಿಟಿಯವರಿಗೆ ಉನ್ನತ ಸ್ಥಾನ ಹಾಗೂ ವರಮಾನದಲ್ಲಿ ಹೆಚ್ಚಳ ಉಂಟಾಗುವುದು. ಸಂದರ್ಭೋಚಿತ ಮಾತಿನಿಂದ ನಿಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಅರಳೆ ವ್ಯಾಪಾರ, ರೆಡಿಮೇಡ್ ವ್ಯಾಪಾರ ಉತ್ತಮವಾಗಿ ನಡೆಯುವುದು. ಗುರು–ಶನಿ ಸಂಚಾರ ಹಿತಕರವಲ್ಲದ ಕಾರಣ ಸ್ವಯಂಕೃತಾಪರಾಧಗಳಿಂದ ತೊಂದರೆಗೀಡಾಗುವಿರಿ. – ಶ್ರೀ ಸೂರ್ಯದೇವ ಉಪಾಸನೆ, ಶುಭಸಂಖ್ಯೆ–7.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಉದ್ಯೋಗ ಸ್ಥಾನದಲ್ಲಿ ಬದಲಾವಣೆ ಜೊತೆಗೆ ಬಡ್ತಿ. ನ್ಯಾಯಾಲಯದ ವಿಷಯಗಳಲ್ಲಿ ಆಶಾಭಾವನೆಯನ್ನು ಹೊಂದಬಹುದು. ಶುಭ ಕೆಲಸಗಳಿಗೆ ಪ್ರೇರಣೆ ಆಗುವುದು. ಹಿತೈಷಿಗಳೊಂದಿಗೆ ಸಮಾಗಮ. ಮಠ ಧರ್ಮಾಧಿಕಾರಿಯೊಬ್ಬರ ಸಹಾಯ ದೊರಕುವ ಸಾಧ್ಯತೆ. ಕೆಲವರಿಗೆ ಕಂಕಣ ಬಲ ಕೂಡಿ ಬರುವುದು. ರೇಸ್, ಜೂಜು, ಇತ್ಯಾದಿಗಳಲ್ಲಿ ಧನ ನಷ್ಟವಾಗುವುದು. ಇತರರನ್ನು ನಂಬಿ ಮೋಸ ಹೋಗುವಿರಿ. – ಶ್ರೀ ಶ್ರೀನಿವಾಸ ದೇವರಿಗೆ ತುಳಸಿ ಸಮರ್ಪಣೆ, ಶುಭಸಂಖ್ಯೆ–2.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಪ್ರತಿ ಹೆಜ್ಜೆಯನ್ನು ಎಚ್ಚರಿಕೆಯಿಂದ ಇಡಿ. ಯಾರೋ ಮಾಡಿದ ತಪ್ಪಿಗೆ ನೀವು ಬಲಿಪಶುವಾಗುವ ಸಾಧ್ಯತೆ ಇದೆ. 'ಮಾತೇ ಮುತ್ತು, ಮಾತೇ ಮೃತ್ಯು' ದುಡುಕಿ ಮಾತನಾಡದಿರಿ. ಶ್ರೀಮತಿಯೊಂದಿಗೆ ಸೋತು ಗೆಲ್ಲಿ. ಗುರುದೇವ ಅಶುಭನಿದ್ದು, ಸಮಯಕ್ಕೆ ಸರಿಯಾಗಿ ನಿಮ್ಮ ಬುದ್ಧಿಮತ್ತೆ ಕೈಕೊಡುವುದು. ವಾರಾಂತ್ಯಕ್ಕೆ ಚಂದ್ರಗ್ರಹ ನಿಮ್ಮ ಬೆಂಬಲಕ್ಕೆ. ಕಾಗದ, ಪತ್ರಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಧನಾದಾಯ. – ಶ್ರೀ ಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ–1.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಪಂಚಮಗುರು ಶುಭನಿದ್ದರೆ ಚತುರ್ಥ ಶನಿ ಅಶುಭನಿದ್ದಾನೆ. ಕೆಲಸ ಕಾರ್ಯಗಳು ನಿಂತು–ನಿಂತು ಸಾಗುತ್ತದೆ. ಬರಬೇಕಾದ ಹಣ ತಡವಾಗಿ ಕೈ ಸೇರುವುದು. ವಿವಾಹಯೋಗ್ಯರಿಗೆ ಸೂಕ್ತ ವಧು–ವರ ದೊರೆಯುವ ಸಾಧ್ಯತೆ ಇರುತ್ತದೆ. ಗುತ್ತಿಗೆದಾರರಿಗೆ ಕಾರ್ಮಿಕರಿಂದ ನಷ್ಟ ಸಂಭವ. ಇದರಿಂದ ಮಾನಸಿಕ ಒತ್ತಡಕ್ಕೆ ಗುರಿಯಾಗುವಿರಿ. ಶತ್ರುಗಳು ಪ್ರಬಲರೆನಿಸುವರು. ಅನಾರೋಗ್ಯ ಕಾಡಬಹುದು. – ಶ್ರೀ ಶನಿ ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ–4.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಸ್ನೇಹಿತರ ಸಹಾಯ ಹಸ್ತ ದೊರೆತು ವೈಯಕ್ತಿಕ ಸಮಸ್ಯೆಗೆ ಪರಿಹಾರ ದೊರಕುವುದು. ಸಭೆ ಸಮಾರಂಭಗಳಲ್ಲಿ ಭಾಗಿಯಾಗಿ ಗೌರವಕ್ಕೆ ಭಾಜನರಾಗುವಿರಿ. ಮಕ್ಕಳಿಗೆ ಕೆಲಸ ದೊರೆತು ಭಾಗ್ಯೋದಯ. ಕೆಲವೊಮ್ಮೆ ನಿಮ್ಮ ಅನಿರೀಕ್ಷಿತ ನಡವಳಿಕೆಗೆ ರಾಹುಗ್ರಹ ಕಾರಣನಾಗುತ್ತಾನೆ. ಇದರಿಂದ ನಿಮ್ಮ ಯೋಜಿತ ಕೆಲಸಗಳು ಉಲ್ಟಾ ಹೊಡೆಯುವುದು. ವಾರಾಂತ್ಯಕ್ಕೆ ಶಾರ್ಟ್‌ಟ್ರಿಪ್. –ಶ್ರೀ ರಾಯರ ಪೂಜೆ, ಶುಭಸಂಖ್ಯೆ–6.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಬೇಕು. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ ಮುಂದುವರೆಯುವುದು. ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಮುಂದುವರೆಯಿರಿ. ವಾರಮಧ್ಯೆ ನಂತರ ಆಪ್ತಮಿತ್ರರ ಮಿಲನದಿಂದ ಹರ್ಷ. ಗೃಹ ಕೈಗಾರಿಕೆಗಳನ್ನು ಆರಂಭಿಸಬಹುದಾಗಿದೆ. ಕಾಗದ–ಪತ್ರ ಬರಹಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಲಾಭ. ಅನಾವಶ್ಯಕ ಸಂಚಾರಗಳನ್ನು ಅವಾಯ್ಡ್ ಮಾಡಿ. – ಶ್ರೀ ವಿಷ್ಣುನಾಮ ಸ್ಮರಣೆ, ಶುಭಸಂಖ್ಯೆ–5.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಅರಸಿ ಬಂದದ್ದನ್ನು ತಿರಸ್ಕರಿಸಬೇಡಿ. ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ ಲಾಭಕ್ಕೇನೂ ಕೊರತೆ ಆಗದು. ಗುರುಹಿರಿಯರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಋಣ ಮುಕ್ತಿಗೆ ಗುರು ಕೃಪೆಯಿದೆ. ವಿವಾಹಯೋಗ್ಯರಿಗೆ ಸೂಕ್ತ ಬಾಳಸಂಗಾತಿ ದೊರೆಯುವರು. ಶತಭಿಷಾ ನಕ್ಷತ್ರದವರಿಗೆ ವಾಹನದಿಂದ ತೊಂದರೆ. ಆಸ್ತಿ, ವಿವಾದಗಳು ಪರಿಹಾರ ಕಾಣದು. – ಶ್ರೀ ನವಗ್ರಹ ಸ್ತುತಿ, ಶುಭಸಂಖ್ಯೆ–7.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು' ಪುರಂದರದಾಸರ ಈ ನುಡಿಯನ್ನು ಅನುಸರಿಸಿ ನಡೆಯಿರಿ. ನಿರೀಕ್ಷೆಯಂತೆ ಹಣ ಕೈ ಸೇರಿದರೂ ಬರಿಗೈ ಆಗಲು ಕ್ಷಣ ಮಾತ್ರ. ವಾರ ಮಧ್ಯೆ ಗೃಹಕೃತ್ಯ ವಸ್ತುಗಳ ಖರೀದಿ. ಗೃಹಲಕ್ಷ್ಮಿಯ ಸಲಹೆಯಂತೆ ನಡೆದರೆ ಒಳಿತು. ಸಾಮಿಲ್, ಮರಮುಟ್ಟು ವ್ಯವಹಾರಿಗಳಿಗೆ ವಿಶೇಷ ಧನ ಲಾಭವಾಗುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನ. – ಶ್ರೀ ಶಿವಾಷ್ಟೋತ್ತರ ಪಠಿಸಿ, ಶುಭಸಂಖ್ಯೆ–4.

ಮೈಸೂರು ಮಿತ್ರ ಭಾನುವಾರ 26 ಜೂನ್ 2022

ಕೆರೆಗಳ ಅಭಿವೃದ್ಧಿಯೇ ಸಮೃದ್ಧಿಯ ಸಂಕೇತ

● 'ನಮ್ಮೂರು–ನಮ್ಮ ಕೆರೆ' ಯೋಜನೆಯಡಿ ಬಸವನ ಕೆರೆ ಅಭಿವೃದ್ಧಿ ● ಕೆರೆಗೆ ಶಾಸಕ ಹೆಚ್.ಪಿ.ಮಂಜುನಾಥ್‌ರಿಂದ ಬಾಗಿನ ಅರ್ಪಣೆ



ಹುಣಸೂರು, ಜೂ.25(ಕೆಕೆ)– ಗ್ರಾಮೀಣ ಭಾಗದ ಕೆರೆಗಳ ಅಭಿವೃದ್ಧಿಯೇ ಸಮೃದ್ಧಿಯ ಸಂಕೇತ ವಾಗಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ಹೇಳಿದರು.

ತಾಲೂಕಿನ ಬನ್ನಿಕುಪ್ಪೆ ವಲಯದ ಸೋಮನಹಳ್ಳಿಯಲ್ಲಿ ಶನಿವಾರ ಬೀಜಗನಹಳ್ಳಿ ಗ್ರಾಪಂ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಯೋಗದಲ್ಲಿ 'ನಮ್ಮೂರು–ನಮ್ಮ ಕೆರೆ' ಯೋಜನೆಯಡಿ ಅಭಿವೃದ್ಧಿಪಡಿಸಿರುವ ಬಸವನ ಕೆರೆ ಹಸ್ತಾಂತರ ಕಾರ್ಯಕ್ರಮದಲ್ಲಿ ಕೆರೆಗೆ ಬಾಗಿನ ಅರ್ಪಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೆರೆಗಳ ಅಭಿವೃದ್ಧಿ, ಉಳಿತಾಯ, ಸಾಲ ಸೌಲಭ್ಯ, ಕೃಷಿ ಪ್ರಗತಿ, ಮಹಿಳಾ ಸಬಲೀಕರಣ, ಮದ್ಯವರ್ಜನ ಶಿಬಿರ, ವಿದ್ಯಾರ್ಥಿಗಳು, ನಿರ್ಗತಿಕರಿಗೆ ನೆರವು ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳ ಮೂಲಕ ಸರ್ಕಾರ ಮಾಡದ ಕೆಲಸವನ್ನು ಮಾಡುತ್ತಿದೆ ಎಂದು ಪ್ರಶಂಸಿಸಿದರು.

ಕೆರೆಗಳ ಪುನಶ್ಚೇತನ: 25–30ವರ್ಷಗಳಿಂದ ಭರ್ತಿಯಾಗದ ಹೈರಿಗೆಕೆರೆ, ಬಿಳಿಕೆರೆ, ಹಳೆಬೀಡು ಕೆರೆ ಸೇರಿದಂತೆ ತಾಲೂಕಿನ ಮರದೂರು ಏತ ನೀರಾವರಿ ಯೋಜನೆಯಡಿ 47 ಕೆರೆಗಳಿಗೆ ನೀರು ತುಂಬಿಸುವ ಮತ್ತು ವಿವಿಧ ಯೋಜನೆಯಡಿ ತಾಲೂಕಿನ ಶೇ.72ರಷ್ಟು ಕೆರೆಗಳಿಗೆ ನನ್ನ ಅವಧಿಯಲ್ಲಿ ನೀರು ತುಂಬಿಸಲಾಗಿದೆ. ಅಲ್ಲದೇ ತಾಲೂಕಿನಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಕ್ರಾಂತಿ ನಡೆದಿದೆ. ತಾಲೂಕಿನ ಜನತೆ ಇವೆಲ್ಲವನ್ನು ಮನಗಾಣಬೇಕು ಎಂದು ಕೋರಿದರು.

ಧರ್ಮಸ್ಥಳ ಯೋಜನೆಯ ಪ್ರಾದೇಶಿಕ ನಿರ್ದೇಶಕ ಗಂಗಾಧರರೈ ಮಾತನಾಡಿ, ಯೋಜನೆಯು ಹಲವು ಕಾರ್ಯಕ್ರಮಗಳ ರೂಪಿಸಿದೆ. ವೀರೇಂದ್ರ ಹೆಗ್ಗಡೆ ಅವರ ಪರಿಶ್ರಮದಿಂದ ಸುಮಾರು 84 ವರ್ಷಗಳಿಂದ ಶ್ರೀಕ್ಷೇತ್ರದಿಂದ ಅನ್ನ, ಆರೋಗ್ಯ, ಅಭಯ, ಶಿಕ್ಷಣ ಕ್ಷೇತ್ರ, ಮಹಿಳಾ ಸಬಲೀಕರಣ, ಕೆರೆಗಳ ಅಭಿವೃದ್ಧಿ ಸೇರಿದಂತೆ ಸಾಮಾಜಿಕ ಕಾರ್ಯಗಳ ಮೂಲಕ ಏಷ್ಯಾದಲ್ಲೇ ಮೊದಲನೇ ಸ್ಥಾನದಲ್ಲಿರುವುದು ಹೆಮ್ಮೆಯ ಸಂಗತಿ ಎಂದರು.

45 ಕೋಟಿ ವೆಚ್ಚದಡಿ ರಾಜ್ಯಾದ್ಯಂತ 452 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ವರ್ಷಕ್ಕೆ 50 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಪ್ರಾಣಿ–ಪಕ್ಷಿಗಳಿಗೆ ಆಹಾರವಾಗುವ ದಶಲಕ್ಷ ಸಸಿ ನೆಡುವ ವಿನೂತನ ಕಾರ್ಯಕ್ರಮ ಸಹ ಹಮ್ಮಿಕೊಳ್ಳಲಾಗಿದೆ. 14 ಸಾವಿರ ಮಂದಿ ನಿರ್ಗತಿಕರಿಗೆ ಮಾಸಾಶನ ನೀಡಲಾಗುತ್ತಿದೆ. ನಿರ್ಗತಿಕರಿಗಾಗಿ 500 ಮನೆಗಳ ನಿರ್ಮಾಣ ಹಾಗೂ 750 ಮನೆಗಳ ದುರಸ್ತಿಗೆ ಕಾರ್ಯಯೋಜನೆಯಿಂದ ರೂಪಿಸಲಾಗಿದೆ. ಇದೇ ರೀತಿ ಹಾಸನ ಮತ್ತು ಶ್ರೀರಂಗಪಟ್ಟಣದಲ್ಲಿ ನಿರ್ಗತಿಕರಿಗೆ ತಲಾ ಒಂದು ಮನೆ ನಿರ್ಮಿಸಿಕೊಟ್ಟಿದ್ದು, ಹುಣಸೂರಿನಲ್ಲೂ ಒಂದು ಮನೆಗೆ ಬೇಡಿಕೆ ಇದೆ ಎಂದರು.

ಈ ವೇಳೆ ಜಿಲ್ಲಾ ಯೋಜನಾಧಿಕಾರಿ ಮುರುಳಿಧರ್, ತಾಲೂಕು ಯೋಜನಾಧಿಕಾರಿಗಳಾದ ಧನಂಜಯ್, ರಮೇಶ್, ಜಿಲ್ಲಾ ಜನ ಜಾಗೃತಿ ಸಮಿತಿ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ಗ್ರಾಪಂ ಅಧ್ಯಕ್ಷ ನಾರಾಯಣ್ ಕುಮಾರ್, ಕೆರೆಗಳ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸೋಮನಾಥ ಚೌಹಾನ್ ಮಾತನಾಡಿದರು. ಬಳಿಕ, ಕೆರೆಯ ಅಂಚಿನಲ್ಲಿ ಸಸಿಗಳನ್ನು ನೆಡಲಾಯಿತು.

ಕಾರ್ಯಕ್ರಮದಲ್ಲಿ ಯೋಜನೆಯ ಮೇಲ್ವಿಚಾರಕರಾದ ಲೋಕೇಶ್, ರಾಣಿ, ವೀಣಾ, ಕಿರಣ್, ಸಂತೋಷ್, ಬಾಬು, ಜ್ಞಾನ ವಿಕಾಸ ಕೇಂದ್ರದ ಶೃತಿ, ಸಿಬ್ಬಂದಿಗಳಾದ ಅಶೋಕ್‌ಶೆಟ್ಟಿ, ಶಿವಕುಮಾರ್, ಕೆರೆ ಅಭಿವೃದ್ಧಿ ಸಮಿತಿ ಸದಸ್ಯರು, ಸೇವಾ ಪ್ರತಿನಿಧಿಗಳು, ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಬೆಳೆ ವಿಮೆ ಅರ್ಜಿ ತಿರಸ್ಕೃತ: ಆಕ್ಷೇಪಣೆಗೆ 15 ದಿನ ಗಡುವು

ನಂಜನಗೂಡು, ಜೂ.25(ಸುದರ್ಶನ್)– ಪ್ರಧಾನಮಂತ್ರಿ ಫಸಲ್‌ಭೀಮಾ ಯೋಜನೆಯಲ್ಲಿ 2019–20ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶಗಳನ್ನು ಬೆಳೆ ನೋಂದಣಿ ಪ್ರಸ್ತಾವಗಳೊಂದಿಗೆ ಹೋಲಿಸಿದಾಗ ಬೆಳೆ ಸಮೀಕ್ಷೆಯೊಂದಿಗೆ ತಾಳೆಯಾಗದ ಮುಂಗಾರು ಹಂಗಾಮಿನಲ್ಲಿ 1,034 ಮತ್ತು ಹಿಂಗಾರು ಹಂಗಾಮಿನಲ್ಲಿ 37 ಅರ್ಜಿಗಳನ್ನು ತಿರಸ್ಕೃತಗೊಂಡಿವೆ ಎಂದು ಸಹಾಯಕ ಕೃಷಿ ನಿರ್ದೇಶಕ ದೀಪಕ್ ಹೇಳಿದ್ದಾರೆ. ಪ್ರಸ್ತುತ ತಿರಸ್ಕೃತಗೊಂಡ ಅರ್ಜಿಗಳನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ, ಗ್ರಾಮ ಪಂಚಾಯಿತಿಗಳಲ್ಲಿ ಪ್ರಕಟಿಸಲಾಗಿದೆ. ವಿಮಾ ಅರ್ಜಿ ತಿರಸ್ಕೃತಗೊಂಡ ಬಗ್ಗೆ ರೈತರಿಂದ ಆಕ್ಷೇಪಗಳು ಇದ್ದಲ್ಲಿ ಮುಂದಿನ 15 ದಿನಗಳೊಳಗೆ ಅಗತ್ಯ ದಾಖಲೆಗಳೊಂದಿಗೆ ಕೃಷಿ ಇಲಾಖೆಗೆ ಸಲ್ಲಿಸಬೇಕು. ಇಲ್ಲವಾದಲ್ಲಿ ಎಲ್ಲಾ ಪ್ರಸ್ತಾವನೆಗಳನ್ನು ತಿರಸ್ಕೃತಗೊಳಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂ.ಗೂಡಿಗೆ ಶಿವರಾಜ್‌ಕುಮಾರ್ ಭೇಟಿ



ನಂಜನಗೂಡು, ಜೂ.25(ಸುದರ್ಶನ್)– ಬೈರಾಗಿ ಚಿತ್ರದ ಪ್ರಚಾರಕ್ಕಾಗಿ ಶನಿವಾರ ನಂಜನಗೂಡಿಗೆ ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಭೇಟಿ ನೀಡಿದರು.

ನೆಚ್ಚಿನ ನಟನನ್ನು ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆದಿದ್ದರು. ಅಲ್ಲದೆ ಕ್ರೇನ್ ಮೂಲಕ ಬೃಹತ್ ಗಾತ್ರದ ಹೋವಿನ ಹಾರ ಹಾಕಿ ಸ್ವಾಗತಿಸಿದರು. ಶಿವಣ್ಣನೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಅಭಿಮಾನಿಗಳು ಮುಗಿಬಿದ್ದರು. ಬೈರಾಗಿ ಚಲನಚಿತ್ರದ ಪ್ರಚಾರ ವಾಹನದ ಮೇಲೆ ನಿಂತು ಅಭಿಮಾನಿಗಳನ್ನು ರಂಜಿಸಲು ನೃತ್ಯ ಮಾಡಿದರು. ಕಿಕ್ಕಿರಿದು ತುಂಬಿದ್ದ ಬೃಹತ್ ಅಭಿಮಾನಿಗಳ ಜನಸ್ತೋಮವನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಶ್ರೀಕಂಠೇಶ್ವರಸ್ವಾಮಿ ದರ್ಶನ: ಬಳಿಕ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ಪತ್ನಿ ಗೀತಾ ಶಿವರಾಜ್‌ಕುಮಾರ್, ನಟ ಡಾಲಿ ಧನಂಜಯ್‌ರೊಂದಿಗೆ ಭೇಟಿ ನೀಡಿದ ಶಿವರಾಜ್‌ಕುಮಾರ್, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ದೇವಾಲಯದ ಗರ್ಭಗುಡಿಯಲ್ಲಿ ಸ್ವಲ್ಪಕಾಲ ಧ್ಯಾನ ಮಾಡಿ ಅರ್ಚನೆ ಸಲ್ಲಿಸಿದರು. ನಂತರ ಪಾರ್ವತಿ ದೇವಾಲಯದಲ್ಲಿ ಕುಟುಂಬದ ಹೆಸರಿನಲ್ಲಿ ಕುಂಕುಮಾರ್ಚನೆ, ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ಪ್ರಾಂಗಣದ ಸುತ್ತಲೂ ಪ್ರದಕ್ಷಿಣೆ ಹಾಕಿದರು.

1.20 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಹೆಚ್.ಡಿಕೋಟೆ, ಜೂ.25(ಮಂಜು)– ತಾಲೂಕಿನ ಎನ್.ಬೆಳತ್ತೂರು ಗ್ರಾಮದಲ್ಲಿ ವಿಧಾನಪರಿಷತ್ ಸದಸ್ಯರ 70 ಲಕ್ಷ ಅನುದಾನದಡಿ ಕಾಂಕ್ರೀಟ್ ರಸ್ತೆ ಹಾಗೂ ನೀರಾವರಿ ಇಲಾಖೆಯಿಂದ 50 ಲಕ್ಷ ವೆಚ್ಚದಡಿ ಡಾಂಬರ್ ರಸ್ತೆ ಸೇರಿ ಒಟ್ಟು 1.20 ಕೋಟಿ ರೂ.ವೆಚ್ಚದ ರಸ್ತೆ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು ಮಾತನಾಡಿ, ದಿ.ಚಿಕ್ಕಮಾದು ಅವರು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಉತ್ತಮ ಶಾಸಕರಾಗಿದ್ದರು. ಪ್ರಸ್ತುತ ಕೋಟೆಯ ಹಾಲಿ ಶಾಸಕರಾದ ಅನಿಲ್ ಚಿಕ್ಕಮಾದು ಅವರು ತಂದೆಯ ಗುಣಗಳನ್ನು ಮೈಗೂಡಿಸಿಕೊಂಡು, ತಾಲೂಕಿನ ಅಭಿವೃದ್ಧಿ ವಿಚಾರದಲ್ಲಿ ತಂದೆಗಿಂತ ಒಂದು ಕೈ ಮೇಲಿದ್ದಾರೆ. ಇಂತಹ ಶಾಸಕನನ್ನು ಮುಂದಿನ ದಿನಗಳಲ್ಲಿ ತಾಲೂಕಿನ ಜನತೆ ಬೆಂಬಲಿಸಬೇಕು ಎಂದರು.

ಈಗಾಗಲೇ ತಾಲೂಕಿನ ಅಭಿವೃದ್ಧಿ ವಿಚಾರದಲ್ಲಿ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ವಿಚಾರದಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಮೈಸೂರು ಭಾಗದ ಜನರ ಸೇವೆ ಹಾಗೂ ಅಭಿವೃದ್ಧಿ ವಿಚಾರದಲ್ಲಿ ಹೆಸರುಗಳಿಸುದರ ಜೊತೆಗೆ ಹೆಚ್.ಡಿ.ಕೋಟೆ ಅಭಿವೃದ್ಧಿ ವಿಚಾರದಲ್ಲಿ ಬಹಳಷ್ಟು ಅನುದಾನಗಳನ್ನು ತಂದು ಅಭಿವೃದ್ಧಿಪಡಿಸಿರುವ ಸಂದೇಶ್ ನಾಗರಾಜು ಅವರ ಜೊತೆಗೂಡಿ ಭೂಮಿಪೂಜೆ ನೆರವೇರಿಸಿರುವುದು ನನ್ನ ಭಾಗ್ಯ ಎಂದು ಸಂತೋಷ ವ್ಯಕ್ತಪಡಿಸಿದರು.

ಈ ವೇಳೆ ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜ್, ಮುಖಂಡರಾದ ಹೊಸವಾಳ ಪ್ರಕಾಶ್, ಹಿರೇಹಳ್ಳಿ ಸೋಮೇಶ, ನವೀನ್‌ದಾಸ್, ಸತೀಶ್ ಗೌಡ, ನಾಗನಹಳ್ಳಿ ಪ್ರದೀಪ್, ಹೋಂಡಾ ನಯಾಜ್, ರಾಜು, ಗಣೇಶ್ ಆಚಾರ್, ಅಶೋಕ್, ಬೈರೆಗೌಡ, ನೀಲಕಂಠ, ರಾಮು, ಶ್ರೀಕಂಠಯ್ಯ, ಕಬಿನಿ ಎಇಇ ಜನಾರ್ಧನ್, ಇಂಜಿನಿಯರ್ ರಮೇಶ್ ಬಾಬು, ಶಿವಣ್ಣ, ವಿನೋದ್, ಶಿವಕುಮಾರ್, ಸುಬ್ರಮಣ್ಯ, ನಂದಕುಮಾರ್, ಪ್ರಭು ಹಾಜರಿದ್ದರು.



ತಿ.ನರಸೀಪುರ ಪಟ್ಟಣದ ಕುರುಬರ ಸಮಾಜದ ನೂತನ ಯಜಮಾನರಾಗಿ ಆಯ್ಕೆಯಾದ ತಾಲೂಕು ಕುರುಬರ ಸಂಘದ ನಿರ್ದೇಶಕ ಹಾಗೂ ಪುರಸಭಾ ಸದಸ್ಯರೂ ಆದ ಕೆ.ನಂಜುಂಡಸ್ವಾಮಿ ಅವರನ್ನು ಸಮುದಾಯದ ಮುಖಂಡರು ಅಭಿನಂದಿಸಿದರು. ಈ ವೇಳೆ ಕುರುಬ ಸಂಘದ ಅಧ್ಯಕ್ಷ ಟಿ.ಎಂ ನಂಜುಂಡಸ್ವಾಮಿ, ಉಪಾಧ್ಯಕ್ಷ ಮಾದೇಶ್, ಮುಖಂಡರಾದ ಚಿಕ್ಕ ಯಜಮಾನ ರಾಜು, ಜೆ.ಅನುಪ್‌ಗೌಡ, ಗೋಪಿ, ಗುರುಮಲ್ಲ, ಸಿದ್ದು, ಅಂದಾನಿಗೌಡ ಇತರರಿದ್ದರು.

ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಕ್ಲೀನ್ ಫಿಕ್ಸ್ ಶೆವರನ್ ಘಟಕ ಆರಂಭ

ಸ್ವಿಸ್ ಕಂಪನಿಯ ಸಹಭಾಗಿತ್ವದಲ್ಲಿ ಅತ್ಯಾಧುನಿಕ ಬೃಹತ್ ಸ್ವಚ್ಛತಾ ಪರಿಕರಗಳ ಉತ್ಪಾದನೆ



ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಕ್ಲೀನ್ ಫಿಕ್ಸ್ ಶೆವರನ್ ಘಟಕವನ್ನು ಸ್ವಿಸ್ ರಾಯಭಾರಿ ಡಾ. ರಾಲ್ಫ್ ಹೆಕ್ಟರ್ ಇತ್ತೀಚೆಗೆ ಉದ್ಘಾಟಿಸಿದರು. ಈ ವೇಳೆ ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇನ್ನಿತರರು ಉಪಸ್ಥಿತರಿದ್ದಾರೆ.

> “ಇಂಡೋ-ಸ್ವಿಸ್ ಸಹಭಾಗಿತ್ವದ ಕ್ಲೀನ್‌ಫಿಕ್ಸ್ ಶೆವರನ್ ಶುಚಿಗೊಳಿಸುವ ಉತ್ಪನ್ನಗಳ ಉದ್ಯಮದಲ್ಲಿ ಪ್ರಮುಖ ಸಂಸ್ಥೆಯಾಗಿ ಹೊರಹೊಮ್ಮುತ್ತಿದೆ. ನಾವು ಕೇವಲ ಸಮರ್ಥನೀಯವಷ್ಟೇ ಅಲ್ಲ. ಜವಾಬ್ದಾರಿಯುತವಾದ ಬೆಳವಣಿಗೆಯನ್ನು ಎದುರು ನೋಡುತ್ತಿದ್ದೇವೆ. ಯಾಂತ್ರೀಕೃತ ಹಾಗೂ ರೊಬೋಟಿಕ್ ಕ್ಲೀನಿಂಗ್‌ಗೆ ಹೆಚ್ಚಿನ ಗಮನ ನೀಡುತ್ತಿದ್ದೇವೆ. ಭಾರತದಲ್ಲಿರುವ ಕ್ಲೀನ್‌ಫಿಕ್ಸ್-ಶೆವರನ್ ತನ್ನ ಗ್ರಾಹಕರಿಗೆ ಸಲಹೆ, ಸೇವೆ ಇನ್ನಿತರೆ ಬ್ಯಾಕಪ್ ಮಾಡಿದ ಸ್ವಿಸ್ ಗುಣಮಟ್ಟದ ಉತ್ಪನ್ನಗಳನ್ನು ನೀಡುವತ್ತ ಗಮನಹರಿಸುತ್ತದೆ. ನಿರಂತರವಾದ ಆವಿಷ್ಕಾರವನ್ನು ಅನುಸರಿಸುವ ಮೂಲಕ ಸಂಸ್ಥೆಯು ನಿರ್ದಿಷ್ಟವಾಗಿ ಭಾರತೀಯ ಅಗತ್ಯತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಉತ್ಪನ್ನಗಳನ್ನು ತಯಾರಿಸುವ ಮೂಲಕ ವಿವಿಧ ಗ್ರಾಹಕರಿಗೆ ಗುಣಮಟ್ಟದ ಶುಚಿಗೊಳಿಸುವ ಯಂತ್ರಗಳನ್ನು ಪೂರೈಸುವ ಪ್ರಮುಖ ಸಂಸ್ಥೆಯಾಗಿ ಹೊರಹೊಮ್ಮಲಿದೆ.
>
> -ಅಲೆಕ್ಸ್ ಜೆರಿಯನ್ ಕುಂಬುಕಟ್ಟು,
> ಕ್ಲೀನ್ ಫಿಕ್ಸ್-ಶೆವರನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ

ಮೈಸೂರು, ಜೂ.25– ರೊಬೋಟಿಕ್ ನೈರ್ಮಲ್ಯ ಮತ್ತು ಸ್ವಚ್ಛತಾ ಯಂತ್ರಗಳ ತಯಾರಿಕಾ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ಕ್ಲೀನ್‌ಫಿಕ್ಸ್ ರೀನಿಗಂಗ್ ಸಿಸ್ಟಮ್ಸ್ ಎಜಿ, ಮೈಸೂರು ಮೂಲದ ಸ್ವಚ್ಛತಾ ಪರಿಕರಗಳ ಉತ್ಪಾದನಾ ಸಂಸ್ಥೆ ಶೆವರನ್ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರೊಂದಿಗೆ ಮೈಸೂರಿನಲ್ಲಿ ಕ್ಲೀನ್ ಫಿಕ್ಸ್ ಶೆವರನ್ ಉತ್ಪಾದನಾ ಘಟಕ ಆರಂಭಿಸಿದ್ದು, ಇದು ಹೈ–ಎಂಡ್ ಕ್ಲೀನಿಂಗ್ ಮಶಿನ್‌ಗಳು ಮತ್ತು ಇನ್ನಿತರ ಪರಿಕರಗಳನ್ನು ಉತ್ಪಾದನೆ ಮಾಡಲಿದೆ.

ಮೈಸೂರು ಜಿಲ್ಲೆಯ ನಂಜನಗೂಡು ತಾಂಡ್ಯದಲ್ಲಿ ಈ ಕ್ಲೀನ್ ಫಿಕ್ಸ್ ಇಂಡಿಯಾ ಉತ್ಪಾದನಾ ಘಟಕವನ್ನು ಭಾರತದಲ್ಲಿನ ಸ್ವಿಡ್ಜರ್‌ಲ್ಯಾಂಡ್‌ನ ರಾಯಭಾರಿ ಡಾ.ರಾಲ್ಫ್ ಹೆಕ್ಟರ್ ಇತ್ತೀಚೆಗೆ ಉದ್ಘಾಟಿಸಿದರು. ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

ಈ ವೇಳೆ ಸ್ವಿಡ್ಜರ್‌ಲ್ಯಾಂಡ್‌ನ ಕ್ಲೀನ್ ಫಿಕ್ಸ್‌ನ ಸಿಇಓ ರೆಷ್ ಫ್ಲಿಕ್ಸ್, ಕ್ಲೀನ್ ಫ್ಲಿಕ್ಸ್–ಶೆವರನ್ ಘಟಕದ ಎಂಡಿ ಹಾಗೂ ಛೇರ್ಮನ್ ಸ್ಯಾಮ್ ಚೆರಿಯನ್ ಕುಂಬುಕಟ್ಟು, ಕ್ಲೀನ್ ಫಿಕ್ಸ್ ನಿರ್ದೇಶಕರಾದ ಜುಡಿತ್ ತೊನ್ನಿ ಲೂಸಿ, ಎಂಡಿ ಅಲೆಕ್ಸ್ ಚೆರಿಯನ್ ಕುಂಬುಕಟ್ಟು, ಎಂ.ಎಸ್. ರಾಮಯ್ಯ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಕುಲದೀಪ್‌ಕುಮಾರ್ ರೈನಾ ಮತ್ತು ಜೆಎಲ್‌ಎಲ್ ಮ್ಯಾನೇಜಿಂಗ್ ಡೈರೆಕ್ಟರ್ ಸಂದೀಪ್ ಸೇಥಿ ಉಪಸ್ಥಿತರಿದ್ದರು.

ಸ್ವಿಡ್ಜರ್‌ಲ್ಯಾಂಡ್‌ನ ಕ್ಲೀನ್‌ಫಿಕ್ಸ್ ರೀನಿಗಂಗ್ಸ್ ಸಿಸ್ಟಮ್ಸ್ ಎಜಿ ಮತ್ತು ಕಳೆದ 36 ವರ್ಷಗಳಿಂದ ಭಾರತದಲ್ಲಿ ಹೈಜಿನ್ ಮತ್ತು ಕ್ಲೀನಿಂಗ್ ಇಂಡಸ್ಟ್ರಿಯಲ್ಲಿ ಹೆಸರುವಾಸಿ ಶೆವರನ್ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್‌ನ ಜಂಟಿ ಸಹಭಾಗಿತ್ವದ ಈ ಉತ್ಪಾದನಾ ಘಟಕದಲ್ಲಿ ಸ್ವಿಸ್ ತಂತ್ರಜ್ಞಾನ ಆಧರಿಸಿ ಮೇಡ್ ಇನ್ ಇಂಡಿಯಾ ಉತ್ಪನ್ನಗಳು ತಯಾರಾಗಲಿವೆ.

ಈ ಘಟಕದಲ್ಲಿ ಸರಳವಾದ ರೊಬೋಟಿಕ್ಸ್ ಮಾಡುವ ಸಾಮರ್ಥ್ಯದ 20 ಬಗೆಯ ಯಂತ್ರಗಳನ್ನು ತಯಾರಿಸಲಾಗುತ್ತದೆ. ಈ ಯಂತ್ರಗಳು ಗೋಡೌನ್, ಮಾಲ್‌ಗಳು ಮತ್ತು ರೈಲ್ವೆ ನಿಲ್ದಾಣಗಳಂತಹ ದೊಡ್ಡ ಸ್ಥಳಾವಕಾಶಗಳಿಂದ ಹಿಡಿದು ಕಾರ್ಪೊರೇಟ್ ಸಂಸ್ಥೆಗಳ ಸಣ್ಣ, ಬೃಹತ್ ವಿಸ್ತೀರ್ಣದ ಪ್ರದೇಶಗಳಲ್ಲಿ ಸ್ವಯಂಚಾಲಿತ ಶುಚಿಗೊಳಿಸುವ ಪರಿಕರಗಳನ್ನು ಒದಗಿಸಲಾಗುತ್ತದೆ. ಕ್ಲೀನ್‌ಫಿಕ್ಸ್–ಶೆವರನ್ ಸ್ವಚ್ಛತಾ ಯಂತ್ರಗಳು ಗುಣಮಟ್ಟದಲ್ಲಿ ಸರಿಸಾಟಿಯಿಲ್ಲ. ಈ ವಿಷಯದಲ್ಲಿ ಯಾವುದೇ ರಾಜೀ ಮಾಡಿಕೊಳ್ಳದೇ ಸ್ವಚ್ಛತಾ ಪಕ್ವತೆಗೆ ಆದ್ಯತೆ ನೀಡಲಾಗುತ್ತದೆ. ಕ್ಲೀನ್ ಫಿಕ್ಸ್ –ಶೆವರನ್ ಭಾರತದಲ್ಲಿ ಅತ್ಯಾಧುನಿಕ ಸ್ವಯಂಚಾಲಿತ ಕ್ಲೀನಿಂಗ್ ಪರಿಕರಗಳನ್ನು ತಲುಪಿಸುವ ಕ್ಲೀನ್ ಫಿಕ್ಸ್ ಅಭಿವೃದ್ಧಿ ಕೇಂದ್ರದ ಎಐ ಮತ್ತು ರೊಬೋಟಿಕ್ಸ್ ಸಾಮರ್ಥ್ಯಗಳನ್ನು ನಿಯಂತ್ರಣ ಮಾಡುತ್ತದೆ. ಸುಮಾರು 50,000 ಚದರಡಿಯಲ್ಲಿ ಅತ್ಯಾಧುನಿಕ ಸೌಲಭ್ಯದೊಂದಿಗೆ ಯಶಸ್ವಿಯಾಗಿ ಕಾರ್ಯಾಚರಿಸಬಹುದು. ಈ ಘಟಕವು ಪರಿಸರ, ಪ್ರಕ್ರಿಯೆ ಮತ್ತು ಸಮುದಾಯದಲ್ಲಿ ಸುಸ್ಥಿರತೆಯನ್ನು ಕಾಪಾಡುವಲ್ಲಿ ಆದ್ಯತೆ ನೀಡುತ್ತದೆ. ಸೌರ ತಂತ್ರಜ್ಞಾನ ಮತ್ತು ಮಳೆ ನೀರು ಕೊಯ್ಲುಗಳಲ್ಲಿ ಹೂಡಿಕೆ ಮಾಡುವ ಮೂಲಕ ಕ್ಲೀನ್ ಫಿಕ್ಸ್–ಶೆವರನ್ ತನ್ನ ಶಕ್ತಿ ಮತ್ತು ಸಂಪನ್ಮೂಲ ಸ್ವಾವಲಂಬನೆಯನ್ನು ಖಚಿತಪಡಿಸಿದೆ. ಈ ಘಟಕದ ಶೇ.40ರಷ್ಟು ಸ್ಥಳಾವಕಾಶದಲ್ಲಿ ಗಿಡಮರಗಳನ್ನು ಬೆಳೆಸಲಾಗಿದ್ದು, ಸ್ಥಳೀಯ ಸಮುದಾಯದ ಶ್ರೇಯೋಭಿವೃದ್ಧಿಗೂ ಸಾಕಷ್ಟು ಹೂಡಿಕೆ ಮಾಡಲಿದೆ.



ತಾಂಡ್ಯ ಕೈಗಾರಿಕಾ ಪ್ರದೇಶದ ಕ್ಲೀನ್‌ಫಿಕ್ಸ್ ಶೆವರನ್ ಘಟಕ

ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ



ತಿ.ನರಸೀಪುರ, ಜೂ.25(ಎಸ್‌ಕೆ)– ತಾಲೂಕಿನ ಹಳೇ ಕೆಂಪಯ್ಯನಹುಂಡಿ, ಕಾವೇರಿ ನೀರಾವರಿ ನಿಗಮ ವರುಣಾ ವಿಭಾಗ ವತಿಯಿಂದ ಸಿ.ಸಿ.ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಕ್ಕೆ ಮೂಲ ಸೌಕರ್ಯ ಒದಗಿಸಲು ಪ್ರಾಮಾಣಿಕವಾಗಿ ದುಡಿಯುತ್ತಿದ್ದೇನೆ ಎಂದು ಹೇಳಿದರು.

ಕ್ಷೇತ್ರದಲ್ಲಿ ಕಳೆದ 4 ವರ್ಷದಿಂದ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಲು ಮುಂಬರುವ ಚುನಾವಣೆಯಲ್ಲಿ ಕೈ ಹಿಡಿಯಬೇಕು ಎಂದರು. ವರುಣಾ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಕಾಮಗಾರಿಯ ವಿಚಾರದಲ್ಲಿ ಗುಣಮಟ್ಟದ ಕಾಮಗಾರಿ ಮಾಡುವ ನಿಟ್ಟಿನಲ್ಲಿ ಸ್ಥಳೀಯರು ಖುದ್ದು ನಿಂತು ಕಾಮಗಾರಿ ಮಾಡಿಸಿಕೊಳ್ಳಬೇಕು. ಗುಣಮಟ್ಟದಲ್ಲಿ ಯಾವುದೇ ರಾಜಿ ಆಗುವುದಿಲ್ಲ ಎಂದರು. ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಹೊಸಕೋಟೆ ಗ್ರಾಪಂ ಅಧ್ಯಕ್ಷ ಆನಂದ್, ಮುಖಂಡರಾದ ಚನ್ನೇಗೌಡ, ಮಂಜು, ಆರ್.ಪಿ.ಹುಂಡಿ ನಾಗರಾಜು, ರಾಜೇಂದ್ರ, ಅಂಕಶೆಟ್ಟಿ, ನಾಗರಾಜಶೆಟ್ಟಿ, ಕಾರ್ಯಪಾಲಕ ಅಭಿಯಂತರ ಜಸ್ವಂತ್, ಇಂಜಿನಿಯರ್ ಸುರೇಶ್ ಇತರರು ಇದ್ದರು.

ಈಶ್ವರ್ ನಿಧನ



ಹುಣಸೂರು, ಜೂ.25(ಕೆಕೆ)– ನಗರದ ಮಾರಿಗುಡಿ ಬೀದಿಯ ನಿವಾಸಿ ಈಶ್ವರ್(67) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು.


Shreyas Meadows
Anuradha
50 Acre Ready for Contruction Layout,
Behind Grs Fantasy Park & Aris Global Mysoru-570016
GSSS College 0.5 Km
Wipro IT 0.5 Km
Aries Global 1 Km
Jayadeva Hospital 2.5 Km
GRS Fantacy Park 1.2 Km
Gokulam 4 Km
Bus stand, Railway Station 6 Km
MUDA APPROVED
BANG - MYS EXPRESS HIGH WAY
Just 2 Km Away
Anuradha Avenues LLP.
99023 55975
www.shreyasmeadows.in


33 ನೇ ವರ್ಷದ
ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು
ಶ್ರೀಮತಿ ಪ್ರೇಮ & ಗಣೇಶ್ ಜಿ
(ನಿಂಗಪ್ಪ)
ಶುಭಕೋರುವವರು
ಮಕ್ಕಳು : ಮೋಹನ್.ಜಿ, ರಾಕೇಶ್.ಜಿ, ಮುಕೇಶ್.ಜಿ, ಸೊಸೆಯಂದಿರು: ಅನುಷ, ದೀಕ್ಷ
ಮೊಮ್ಮಗಳು: ಚೀರಾರಾಕೇಶ್


ನಾಡಪ್ರಭು ಕೆಂಪೇಗೌಡರ
ಜಯಂತಿ
27.06.2022 ಸೋಮವಾರ
ಅರಮನೆಯಿಂದ ಮೆರವಣಿಗೆ ಬೆಳಗ್ಗೆ 9.30ಕ್ಕೆ
ಕಾರ್ಯಕ್ರಮ ಕಲಾಮಂದಿರ ಬೆಳಗ್ಗೆ 11.30
ಸಿ.ಜಿ. ಗಂಗಾಧರ್
ಕಾರ್ಯಾಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ
ಕೆ.ವಿ.ಶ್ರೀಧರ
ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ
ಮಂಜೇಗೌಡ
ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ
ಶ್ರೀ ಜಯರಾಮ್ ಆರ್ ಗೌರವಾಧ್ಯಕ್ಷರು
ಶ್ರೀ ಮರಿಸ್ವಾಮಿ ಸಿ ಅಧ್ಯಕ್ಷರು
ಶ್ರೀ ರವಿಕುಮಾರ್ ಆರ್ (ರಾಜಕೀಯ) ಉಪಾಧ್ಯಕ್ಷರು
ಶ್ರೀ ಮಹೇಶ್ ಬಿ.ಸಿ. ಉಪಾಧ್ಯಕ್ಷರು
ಶ್ರೀ ಚೇತನ್ ಎಂ.ಇ. ಪ್ರಧಾನ ಕಾರ್ಯದರ್ಶಿ
ಶ್ರೀ ಜಯರಾಮು ಸಹ ಕಾರ್ಯದರ್ಶಿ
ಶ್ರೀ ಲೋಕೇಶ್ ಆರ್. ಖಜಾಂಚಿ
ಜಿ. ಮಂಜು
ಎಂ. ಶಿವಕುಮಾರ್
ಎನ್. ಪ್ರಕಾಶ್
ಎಸ್. ಗುರುರಾಜ್
ಪ್ರಸನ್ನ ಎನ್. ಲಕ್ಷ್ಮಣ್
ಜಿ. ಕುಮಾರ್‌ಗೌಡ
ಶ್ರೀಮತಿ ಸುಶೀಲಾ ನಂಜಪ್ಪ
ಎ. ರವಿ.
ಬಿ.ಇ. ಗಿರೀಶ್‌ಗೌಡ
ಬಿ.ಪಿ. ಬೋರೇಗೌಡ
ಎಸ್. ಉಮೇಶ
ಕೆ.ಪಿ. ನಾಗಣ್ಣ
ಗೋಪಾಲ್
ಪಿ. ಪ್ರಶಾಂತ್‌ಗೌಡ
ಮಿರ್ಲೆ ಶ್ರೀನಿವಾಸಗೌಡ ಎಂ ಕೆ
ಹೆಚ್.ಎನ್. ಸುಧೀರ್
ಎಚ್.ಕೆ. ನಾಗಣ್ಣ
ಪಿ.ಹೆಚ್. ರಾಜು
ಎ. ಕುಮಾರ್
ಟಿ.ಎನ್. ಸಂತೋಷ್‌ಕುಮಾರ್
@bhi design: 97407 97701
ಸುಸ್ವಾಗತ
ಸ್ವಾಗತ ಬಯಸುವವರು: ಜಿಲ್ಲಾ ಒಕ್ಕಲಿಗ ಸಂಘ ಮೈಸೂರು,
ರಾಜ್ಯ ಒಕ್ಕಲಿಗರ ಸಂಘ ಹಾಗೂ ಎಲ್ಲಾ ಒಕ್ಕಲಿಗ ಸಂಘ ಸಂಸ್ಥೆಗಳು


ಶ್ರೀ ಕನಕ ಕಾಗಿನೆಲೆ ಗೃಹ ನಿರ್ಮಾಣ ಸಹಕಾರ ಸಂಘ (ರಿ.), ಮೈಸೂರು
ವತಿಯಿಂದ
ಉದ್ದೇಶಿತ ಬಡಾವಣೆಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಸರ್ವರಿಗೂ ಸ್ವಾಗತ
ದಿನಾಂಕ: 26-06-2022 ರಂದು ಭಾನುವಾರ ಬೆಳಗ್ಗೆ 08.30 ಗಂಟೆಗೆ
ಸ್ಥಳ : ಕಳಲವಾಡಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾ||
ಎಸ್. ಸಿದ್ದಯ್ಯ ಅಧ್ಯಕ್ಷರು
ಆರ್. ಕುಮಾರ್ ಉಪಾಧ್ಯಕ್ಷರು
ಎಂ.ಟಿ. ಉಮಾಶಂಕರ್ ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರು
ಎಸ್. ವಾಸು ನಿರ್ದೇಶಕರು
ಎಂ. ಯೋಮಣ್ಣ ನಿರ್ದೇಶಕರು
ಕೆ.ಟಿ. ಕುಮಾರ್ ನಿರ್ದೇಶಕರು
ಬಿ.ಮಹದೇವ ನಿರ್ದೇಶಕರು
ಜೆ. ರಮೇಶ್ ನಿರ್ದೇಶಕರು
ಎಂ.ಎನ್. ರಂಗಸ್ವಾಮಿ ನಿರ್ದೇಶಕರು
ಬಿ.ಕೆ. ನಾಗರಾಜ್ ನಿರ್ದೇಶಕರು
ಪಿ. ಪುಟ್ಟಮಣಿ ನಿರ್ದೇಶಕರು
ವರಲಕ್ಷ್ಮೀ ಬಸವಣ್ಣ ನಿರ್ದೇಶಕರು
ಹೇಮಾವತಿ ನಿರ್ದೇಶಕರು
ಎಂ. ವಿನೋದ್ ಕುಮಾರ್
ಸ್ವಾಗತಕೋರುವವರು :
ಶ್ರೀ ಕನಕ ಕಾಗಿನೆಲೆ ಗೃಹ ನಿರ್ಮಾಣ ಸಹಕಾರ ಸಂಘದ
ಆಡಳಿತ ಮಂಡಳಿ ಮತ್ತು ಸರ್ವ ಸದಸ್ಯರುಗಳು